ಬೀದರ ಜಿಲ್ಲೆಯ ಐತಿಹಾಸಿಕ ವಾಸ್ತು ಶಿಲ್ಪಗಳ ಒಂದು ಅಧ್ಯಯನ

(ಶಿಲ್ಪಕಲಾ ಅಕಾಡೆಮಿಯ ೨೦೧೬-೧೭ನೇ ಸಾಲಿನ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವಿಶೇಷ ಘಟಕ ಯೋಜನೆಯಡಿ ಫೆಲೋಶಿಫ್‌ಗಾಗಿ ಸಲ್ಲಿಸುತ್ತಿರುವ ಸಂಶೋಧನಾ ಪ್ರಬಂಧ)



ಸಂಶೋಧಕರು

ಸುನೀಲ ಎ. ಪೂಜಾರಿ

B.V.A., M.V.A

ಮಾರ್ಗದರ್ಶಕರು

ಎಲ್. ಶಿವಲಿಂಗಪ್ಪ

ಕಲಾವಿದ - ಶಿಲ್ಪಿ - ಲೇಖಕ

ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಮಾಜಿ ಸದಸ್ಯ

ಸುವರ್ಣ ಕರ್ನಾಟಕ ವರ್ಷ ಪ್ರಶಸ್ತಿ ಪುರಸ್ಕೃತ

ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪುರಸ್ಕೃತ

ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು

ಕನ್ನಡ ಭವನ, ೧ನೇ ಮಹಡಿ, ಮೇಲ್ಮನೆ, ಜೆ.ಸಿ. ರಸ್ತೆ, ಬೆಂಗಳೂರು.

ಬೀದರ ಜಿಲ್ಲೆಯ ಐತಿಹಾಸಿಕ ವಾಸ್ತು ಶಿಲ್ಪಗಳು

ಪರಿವಿಡಿ

ಬೀದರ ಜಿಲ್ಲೆಯ ಐತಿಹಾಸಿಕ ವಾಸ್ತು ಶಿಲ್ಪಗಳು
ಒಂದು ಅಧ್ಯಯನ

(ಕರ್ನಾಟಕ ಶಿಲ್ಪಕಲಾ ಆಕಾಡೆಮಿಯ 2016-17 ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕ ಯೋಜನೆಯಡಿಯಲ್ಲಿ ಸಂಶೋಧನಾ ಫೆಲೋಷಿಪ್‌ಗಾಗಿ ಸಲ್ಲಿಸುತ್ತಿರುವ ಸಂಶೋಧನಾ ಪ್ರಬಂಧ)

ಸಂಶೋಧಕರು

ಸುನೀಲ ಎ ಪೂಜಾರಿ

ಬಿ.ವಿ.ಎ ಎಂ.ವಿ.ಎ

ಮಾರ್ಗದರ್ಶಕರು

ಎಲ್. ಶಿವಲಿಂಗಪ್ಪ

ಕಲಾವಿದ- ಶಿಲ್ಪಿ - ಲೇಖಕ

ಕರ್ನಾಟಕ ಶಿಲ್ಪಕಲಾ ಅಕಾಡಮಿ ಸದಸ್ಯ

ಸುವರ್ಣ ಕರ್ನಾಟಕ ವರ್ಷ ಪ್ರಶಸ್ತಿ ಪುರಸ್ಕೃತ

ಕರ್ನಾಟಕ ಲಲಿತ ಕಲಾ ಆಕಡಮಿ ಪ್ರಶಸ್ತಿ ಪುರಸ್ಕೃತರು ಮೈಸೂರ

ಕರ್ನಾಟಕ ಶಿಲ್ಪಕಲಾ ಅಕಾಡಮಿ

ಮೇಲ್ಮನೆ ಚಾಲುಕ್ಯ ವಿಭಾಗ

ಕನ್ನಡ ಭವನ, ಜೆ.ಸಿ ರಸ್ತೆ ಬೆಂಗಳೂರು

ಪ್ರಮಾಣ ಪತ್ರ

ಬೀದರ ಜಿಲ್ಲೆಯ ಐತಿಹಾಸಿಕ ವಾಸ್ತು ಶಿಲ್ಪಗಳು ಒಂದು ಅಧ್ಯಯನ ಎಂಬ ಸಂಶೋಧನಾ ಪ್ರಬಂಧವನ್ನು ಎಲ್. ಶಿವಲಿಂಗಪ್ಪ ಅವರ ಮಾರ್ಗದರ್ಶನದಲ್ಲಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ 2016–17 ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕ ಯೋಜನೆಯಡಿಯಲ್ಲಿ ಸಂಶೋಧನಾ ಫೆಲೋಷಿಪ್‌ಗಾಗಿ **ಕರ್ನಾಟಕ ಶಿಲ್ಪಕಲಾ ಅಕಾಡೆಮಿಗೆ** ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಈ ಪ್ರಬಂಧವು ಮೂಲವಾಗಿದ್ದು. ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ :

ದಿನಾಂಕ : 7-2-2018

ಸಂಶೋಧಕರು

ಸುನೀಲ ವಿ ಪೂಜಾರಿ

ರಾಜೇಶ್ವರ ತಾ! ಬಸವಕಲ್ಯಾಣ ಜಿ! ಬೀದರ 585331

ಫೋನ ನಂ. 7483203400

ಇವರಿಗೆ,

ದಿನಾಂಕ : 7-2-2018

ರೆಜಿಸ್ಟ್ರಾರ್ ಮತ್ತು ಅಧ್ಯಕ್ಷರು
ಕರ್ನಾಟಕ ಶಿಲ್ಪಕಲಾ ಅಕಾಡಮಿ
ಕನ್ನಡ ಭವನ. ಮೇಲ್ಮನೆ,
ಚಾಲುಕ್ಯ ವಿಭಾಗ, ಜೆ.ಸಿ. ರಸ್ತೆ
ಬೆಂಗಳೂರು – 560002

ವಿಷಯ : ಪ್ರಬಂಧ ಸಲ್ಲಿಸುವ ಬಗ್ಗೆ.

ಉಲ್ಲೇಖ ಸಂಖ್ಯೆ :

ಮಾನ್ಯರೆ,

ಕರ್ನಾಟಕ ಶಿಲ್ಪಕಲಾ ಆಕಾಡೆಮಿಯ 2016–17 ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕ ಯೋಜನೆಯಡಿಯಲ್ಲಿ ಸಂಶೋಧನಾ ಫೆಲೋಷಿಪ್‌ಗಾಗಿ **ಕರ್ನಾಟಕ ಶಿಲ್ಪಕಲಾ ಆಕಾಡೆಮಿಗೆ** ಸಲ್ಲಿಸುತ್ತಿದ್ದೇನೆ. ಪ್ರಸ್ತುತ (ಬೀದರ ಜಿಲ್ಲೆಯ ಐತಿಹಾಸಿಕ ವಾಸ್ತುಶಿಲ್ಪ) ಈ ಪ್ರಬಂಧವು ಮೂಲವಾಗಿದ್ದು. ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಧನ್ಯವಾದಗಳೊಂದಿಗೆ

ತಮ್ಮ ವಿಶ್ವಾಸಿ

Sunil

ಸುನಿಲ್ ಎ. ಪೂಜಾರಿ
(ಸಂಪಾದಕರು)

ಅಧ್ಯಾಯ-೧

ಅಧ್ಯಾಯನದ ಉದ್ದೇಶ, ಸ್ವರೂಪ, ವಿಧಾನ ಹಾಗೂ ವ್ಯಾಪ್ತಿ

ಬೀದರ ಜಿಲ್ಲೆಯ ಐತಿಹಾಸಿಕ ವಾಸ್ತು ಶಿಲ್ಪಗಳು ಅನಾದಿಕಾಲದಿಂದಲು ತನ್ನ ವೈಭವವನ್ನು ಸಾರುತಿವೆ, ಶಿಲ್ಪಕಲೆಗಳ ವೈಶಿಷ್ಟತೆ ಹೊಂದಿದೆ. ನಮ್ಮ ನಾಡಿನ ಮತ್ತು ದೇಶದಲ್ಲಿನ ರಾಜ ಮನೆತನಗಳ ವೈಭವವನ್ನು ಮೇರೆಗನು ಅಂದಚಂದಗೋಲಿಸುವುದರಲ್ಲಿ ಹಾಗೂ ಐತಿಹಾಸಿಕ ಹಿನ್ನೆಲೆಗಳ ಬಗ್ಗೆ ತಿಳಿದುಕೊಳ್ಳಲು ಈ ವಾಸ್ತುಶಿಲ್ಪಗಳ ಸಹಾಯಕವಾಗಿದೆ. ಈ ಶಿಲ್ಪಕಲೆಯ ನಮ್ಮ ನಾಡಿನ ಸಾಂಪ್ರದಾಯಿಕ ಕಲೆ ಅಗಿದರಿಂದ ಬೀದರ ಜಿಲ್ಲೆಯ ಐತಿಹಾಸಿಕ ವಾಸ್ತುಶಿಲ್ಪಗಳ ನನ್ನ ಅಧ್ಯಯನಕ್ಕೆ ಈ ವಿಷಯವನ್ನು ಆಯ್ದುಕೊಂಡಿರುತ್ತೆನೆ.

ಐತಿಹಾಸಿಕ ವಾಸ್ತುಶಿಲ್ಪಗಳ ಕುರಿತು ಅಧ್ಯಾಯನ ಮಾಡುವುದು ಸುಲಭದ ಕೆಲಸವಲ್ಲ. ಆದರೂ ಸಹಾ ಈ ವಿಷಯದ ಕುರಿತ್ತು ಅನೇಕ ಗ್ರಂಥಗಳು ರಚನೆಗೋಂಡಿವೆ ಕಲೆಯನ್ನು ಅಧಾರವಾಗಿಟ್ಟು ಕೊಂಡು ಶಿಲ್ಪಕಲೆ ಹಾಗೂ ಐತಿಹಾಸಿಕ ವಾಸ್ತು ಶಿಲ್ಪಗಳ ಗ್ರಂಥಗಳನ್ನು ನಮ್ಮ ನಾಡಿನ ಅಲ್ಲದೆ ರಾಷ್ಟ್ರದ ಅನೇಕ ಖಾಸಗಿ ಸಂಘ ಸಂಸ್ಥೆಗಳು ಹಾಗೂ ಗ್ರಂಥಲಯಾಗಳಲ್ಲಿ ಗೌರವಿಸುತ್ತದೆ.

ಬೀದರ ಜಿಲ್ಲೆಯ ಎಲ್ಲಾ ರೀತಿಯ ಶಿಲ್ಪಗಳು ಮತ ಐತಿಹಾಸಿಕ ವಾಸ್ತುಶಿಲ್ಪಗಳನ್ನು ಒಟ್ಟುರೂಪಿಸಿ ಈ ಪ್ರಭಂದದ ಮೂಲಕ ಗುರುತಿಸುವುದು ನನ್ನ ಮುಖ್ಯ ಉದೇಶ ದಾರ್ಮಿಕ ಸಹಿಷ್ಣತೆಗೆ ಹೆಸರಾದ ಬೀದರ ಜೀಲ್ಲೆಯು ಎಲ್ಲಾ ರೀತಿಯ ವೈಶಿಷ್ಟತೆಯನ್ನು ಪರಿಗಣಿಸಿ ಐತಿಹಾಸಿಕ ವಾಸ್ತುಶಿಲ್ಪಗಳನ್ನು ಕುರಿತು ಪರಿಚಯಿಸುವ ಉದ್ದೇಶವನನು ರಚಿಸಲ್ಪಟುತ್ತೀರುವ ಈ ಪ್ರಭಂಧವಾಗಿದೆ.

ಬಹುಮನಿ ಸುಲ್ತಾನರಿಂದ ಕಟ್ಟಿಸಿದ ಕೋಟೆ ಕೋತಲ್ಲುಗಳು ಗುರುನಾನಕರಿಂದ ಸ್ಥಾಪಿಸಲ್ಪಟ್ಟ ಗುರುನಾನಕ್ ಮಂದಿರ್, ಮಹಮ್ಮದ ಗವಾನನಿಂದ ನಿರ್ಮಿಸಲ್ಪಟ ಮದರಸಾ, ನರಸಿಂಹ ಝರಿ ಪಾಪನಾಶಮಂದಿರ ಮುಂತ್ತಾದ ಐತಿಹಾಸಿಕ ಪ್ರವಾಸಿ ತಾಣಗಳು ಬೀದರ ಜೀಲ್ಲೆಯಲ್ಲಿ ಕಂಡು ಬರುತ್ತದೆ. ಬಿದರ ಪ್ರೇಕ್ಷಣಿಯ ತಾಣ ಹಾಗೂ ಐತಿಹಾಸಿಕ ಹಿನ್ನಲೆಗಳನ್ನು ಹೊಂದಿರುವುದರಿಂದ ಮುಂದಿನ ಪೀಳಿಗೆಗಳಿಗೆ ಐತಿಹಾಸಿಕ ವಾಸ್ತುಶಿಲ್ಪಗಳ ಬಗ್ಗೆ ಪರಿಚಯಿಸುವ ಉದ್ದೇಶವನ್ನು ಈ ಪ್ರಭಂದದಾಗಿದೆ.

೧೨ ನೇ ಶತಮಾನದಲ್ಲಿ ವಿಶ್ವ ಪ್ರಖ್ಯಾತಿ ಬಸವೇಶ್ವರಿಂದ ಜಗತ್ ಪ್ರಸಿದ್ಧಿ ಪಡೆದ ಅನುಭವ ಮಂಟಪವಿರುವುದು ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನಲ್ಲಿ ಶ್ರೀ ರಾಮ ಚಂದ್ರದೇವರಿಂದ ನಿರ್ಮಾಣವಾದ ವೀರಭದ್ರೆಶ್ವರ ದೇವಾಲಯ ವಿರುವುದು ಬೀದರ ಜಿಲ್ಲೇಯ

ಹುಮನಾಬಾದ್ ತಾಲೂಕಿನಲ್ಲಿ ಅದೇ ರೀತಿ ಬಸವಕಲ್ಯಾಣ ತಾಲೂಕಿನ ನಾರಾಯಣಪೂರ ಗ್ರಾಮವು ಒಂದು ಐತಿಹಾಸಿಕ ಹಿನ್ನೇಲೆಗಳನ್ನು ಹೊಂದಿರುವ ಒಂದು ಸುಂದರ ಗ್ರಾಮವಾಗಿದೆ. ಈ ನಾರಾಯಣಪುರ ಬೀದರ ೧೨ ನೇ ಶತಮಾನದಲ್ಲಿ ಮಹಮ್ಮದ ಬಿನ್ ತುಘಲಕ್ ನಿಂದ ಮುಸ್ಲಿಮರ ಆಳ್ವಿಕೆ ಆರಂಭವಾಗಿ ಹೆಚ್ಚು ಕಡಿಮೆ ೧೯೪೭ ರವರೆಗೆ ಬಹುಮನಿ ಸುಲ್ತಾನರ ರಾಜ್ಯಧಾನಿಯಾಗಿ ಮೇರೆದ ನ್ಾಡು ಬೀದರ ಭಾರತೀಯ ಕಲೆ ಮತ್ತು ಸಂಸ್ಕೃತಿಯ ಕುರಿತು. ಚರ್ಚಿಸಿದಾಗ ಐತಿಹಾಸಿಕ ವಾಸ್ತು ಶಿಲ್ಪಗಳು ಅತ್ಯಂತ ಪ್ರಾಚೀನ ಹಿನ್ನಲೆ ಹೊಂದಿದೆ ಎಂದು ತಿಳಿದು ಬರುತ್ತದೆ.

ಕರುನಾಡಿನ ಕೀರಿಟ ಎನಿಸಿಕೊಂಡ ಬೀದರ ಜಿಲ್ಲೆಯಲ್ಲಿ ಕಲ್ಯಾಣ ಚಾಲ್ಯುಕರು, ರಾಷ್ಟ್ರಕೊಟರು, ಕಾಕತೀಯರು, ನಿಜಾಮರು, ಬಹುಮನಿ ಸುಲ್ತಾನರು, ಮೊಘಲರು ಮುಂತ್ತಾದವರಿಂದ ಆಳ್ವಿಕೆಗೆ ಒಳಪಟ್ಟ ನಮ್ಮ ನಾಡು ಬೀದರ. ಹಂಸ ಸಂದೇಶದ ನಳ ದಯವಂತಿಯ ರಾಜ್ಯಧಾನಿ ಬೀದರ ಅರೆ ಮಲೆನಾಡಿನ ಲಕ್ಷಣ ಹೊಂದಿದೂ ಸಾಗುವಾನಿ, ಗಂಥ ಬೆಳೆಯುವ, ನವಿಲುಗಳು ನಾಟ್ಯವಾಡುವ ಜಿಂಕೆಗಳನ್ನು ಹೊಂದಿರುವ ನಾಡು ಬೀದರ ಇಲ್ಲಿ ಹಲವಾರು ಧರ್ಮದ ಜನರು ವಾಸವಾಗಿದ್ದು. ಕನ್ನಡ, ಹಿಂದಿ, ಉರ್ದು, ಮರಾಠಿ, ಆಂಗ್ಲ ಭಾಷೆ, ತೆಲಗು, ಪಂಜಾಬಿ, ಹಲವಾರು ರೀತಿಯ ಮಾತನಾಡುವ ಜನರನ್ನು ಕಾಣಬಹುದು. ಕೆಂಪು ಕಪ್ಪು ಮಣ್ಣು ಹೊಂದಿದ್ದು ಬೀಳಿ ಜೋಳ, ಕಡಲೆ, ತಗರಿ, ಖಬ್ಬು ಬೆಳೆಯುವ ಜಿಲ್ಲೆ ಬೀದರ ಮಂಡ್ಯದಂತೆ ಕಬ್ಬಿನ ಕಾರ್ಖಾನೆ ಹೊಂದಿದ ಜಿಲ್ಲೆ ಬೀದರ ಇಲ್ಲಿ ಹಲವಾರು ಸಾಂಪ್ರದಾಯಿಕ ಕಲೆಗಳಾದ ಜನಪದ ಕಲೆ, ಗೀಗಿಪದ, ದೊಡ್ಡಾದ, ಕರಡಿ ಮಜಲು, ಡೊಳ್ಳು ಕುಣಿತ, ಬಿದ್ರಿಕಲೆಗೆ ಹೆಸರುವಾಸಿಯಾದ ನಮ್ಮ ಬೀದರ ಜಿಲ್ಲೆ.

ಬೀದರನ ಬಹುಮನಿ ಸುಲ್ತಾನರು ಕಲೆ ಮತ್ತು ವಾಸ್ತುಶಿಲ್ಪಗಳಿಗೆ ಹೆಚ್ಚು ಮಾನ್ಯತೆಯನ್ನು ನೀಡಿದರು ಅಲ್ಲದೆ ಕಲೆಯ ಉತ್ತಮ ಪೋಷಕರಾಗಿದ್ದರೂ ಅವರು ಕಲಾವಿದರನ್ನು ಬೇರೆ ಬೇರೆ ದೇಶಗಳಿಂದಕರೆಸಿಕೊಂಡು ಅವರಿಗೆ ಆಶ್ರಯ ನಿಡಿದರು ಅಲ್ಲಿಗೆ ಬಂದ ಕಲಾವಿದರಿಂದ ಕಲೆ, ಸಂಗೀತ, ಸಾಹಿತ್ಯ, ವಾಸ್ತುಶಿಲ್ಪಯಿಂದ ಸಂಪತ್ತಭರಿತವಾಗಿಸಿದ್ದರು. ಇರಾನ್, ಇರಾಕ್, ಸೌದಿ ಅರೆಬೀಯಾ, ಪರ್ಷಿಯಾ ದೇಶದಿಂದ ಅನೇಕ ಕಲಾವಿದರು ತಮ್ಮ ಜೋತೆ ತಂದ ಕಲೆಗಳಲ್ಲಿ ಬಿದ್ರಿ ಕಲೆಯೂ ಒಂದು.

ಬೀದರನಲ್ಲಿ ಬಿದ್ರಿ ಕಲೆ ಇದ್ದದರಿಂದ ಈ ನಗರಕ್ಕೆ ಬೀದರ ಎಂದು ಹೆಸರಿಸಲಾಯಿತು ಎಂದು ತಿಳಿದು ಬರುತ್ತದೆ. ಬೀದರಿನಲ್ಲಿ ಬಹುಮನಿ ಸುಲ್ತಾನರ ಕಾಲದಿಂದಲೂ ಕಲೆ ವಾಸ್ತುಶಿಲ್ಪ ಶಿಲ್ಪಕಲೆಗಳಿಗೆ ಮಹತ್ವ ನೀಡಲಾಗಿದೆ ಇದರಿಂದ ನಾನು ಬೀದರ ಜಿಲ್ಲೆಯ ಐತಿಹಾಸಿಕ

ವಾಸ್ತುಶಿಲ್ಪಗಳು ಆದ್ಧಾರವಾಗಿಟ್ಟುಕೊಂಡು ಈ ಐತಿಹಾಸಿಕ ಹಿನ್ನಲೆಯುಳ ವಾಸ್ತು ಶಿಲ್ಪಗಳು ಉಳಿಸಿ ಅವುಗಳ ಮಹತ್ವವನ್ನು ತಿಳಿಯ ಪಡೆಸುವುದ ನನ್ನ ಪ್ರಮುಖ್ಯ ಉದ್ದೇಶವನ್ನು ಹೊಂದಿದ್ದೆ.

ಸ್ವರೂಪ :

ಪ್ರಸ್ತುತ ಈ ಪ್ರಬಂಧದಲ್ಲಿ ಅಧ್ಯಯನಕ್ಕೆ ಸಹಾಯಕವಾಗುವ ನಿಟ್ಟಿನಲ್ಲಿ ೫ ಅಧ್ಯಾಯನಗಳನ್ನು ವಿಭಾಗಿಸಲ್ಪಟಿದು. ಪ್ರತಿಯೊಂದು ಅಧ್ಯಾಯನದಲ್ಲಿ ಐತಿಹಾಸಿಕ ವಾಸ್ತು ಶಿಲ್ಪಗಳ ನೆಲೆ ಸ್ಥಾಪಿಸಲ್ಪಟ್ಟ ರಾಜ್ಯಮನೆತನ, ದೇವಾಲಯ, ಕೋಟೆಗಳು, ಶಿಲ್ಪಗಳು, ಕೆತ್ತಿಸಲ್ಪಟ ರಾಜರು, ಅವರ ಅವಧಿ ಹಾಗೂ ದೇವಾಲಯದಗಳ ರಚನೆ ಯಾರು ಮಾಡಿಸಿದ್ದಾರೆ ಎನ್ನುವುದರ ಬಗ್ಗೆ ಸಂಪೂರ್ಣ ಮಾಹಿತಿ ಈ ಅಧ್ಯಾಯನದ ಸ್ವರೂಪ

ಇಲ್ಲಿನ ಕೋಟೆ ಕೊತ್ತಲುಗಳು , ಆಳಿರುವಂತಹ ರಾಜಮನೆತನಗಳು ವಾಸ್ತು ಶಿಲ್ಪಗಳ ಅಧಾರವಾಗಿಟ್ಟುಕೊಂಡು ಅದರ ಮೂಲಕ ಸಂಪೂರ್ಣವಾದ ಮಾಹಿತಿಯನ್ನು ತಿಳಿಯುವುದ್ದಾಗಿದೆ. ಇಲ್ಲಿ ಹೊಂದಿರುವ ಶಿಲ್ಪಗಳು ಯಾವ ಶೈಲಿಯಲ್ಲಿದೆ ಅದು ಯಾರ ಅಡಳಿತ ಅವಧಿಯಲ್ಲಿ ಕೆತ್ತಲ್ಪಟಿದ್ದು ಅವುಗಳ ಅಳತೆಯಾವ ಆಕಾರದಲ್ಲಿದೆ ದೇವಾಲಯಗಳು ವಾಸ್ತುಶಿಲ್ಪಗಳು ಹಾಗೂ ಕಟ್ಟಡ, ಕೋಟೆಗಳು ಹೇಗೆ ಮತ್ತು ಯಾರ ರಾಜ್ಯರ ಆಶ್ರಯದಲ್ಲಿ ನಿರ್ಮಿಸಲಾಗಿದೆ. ದೇವಾಲಯಗಳ ವಾಸ್ತುಶಿಲ್ಪ ಮತ್ತು ಕಟ್ಟಿದ ಮೇಲಿನ ನಯ ನಾಜುಕು ಕೇತನೆಗಳ ಸುಂದರವಾದ ವಿನ್ಯಾಸ ತನ್ನದೆ ಆದ ವೈಶಿಷ್ಟತೆಯನ್ನು ಹೊಂದಿದನ್ನು ತಿಳಿಯ ಪಡೆಸಲಾಗಿದೆ.

ವ್ಯಾಪ್ತಿ ಹಾಗೂ ಕಾರ್ಯಕ್ಷೇತ್ರ

ಐತಿಹಾಸಿಕ ವಾಸ್ತು ಶಿಲ್ಪಗಳು ಬೀದರ ವಸ್ತು ಸಂಗ್ರಹಾಲಯ ಹಾಗೂ ಬಸವಕಲ್ಯಾಣದ ವಸ್ತು ಸಂಗ್ರಹಾಲಯದಿಂದ ನನ್ನ ಈ ಸಂಶೋಧನ ವಿಷಯಕ್ಕೆ ಸಂಬಂಧಿಸಿದಂತೆ ದಾಖಲಾತಿಗಳ ಮೂಲಗಳನ್ನು ಸಂಗ್ರಹಿಸಲಾಗಿದೆ ಮತ್ತು ಬಸವಕಲ್ಯಾಣ ತಾಲೂಕಿನಿಂದ ನಾರಾಯಣಪೂರ, ಉಮಾಪೂರ, ಬೇಲೂರ, ಗೋರ್ಟಾ, ಮುಚಳಂಬ, ಮೊರ್ಖಂಡಿ, ಶಿವಪೂರ, ಭಾಲ್ಕಿ ತಾಲೂಕಾ , ಭಾತೋಂಬರಾ ಬೀದರ ಗ್ರಾಮಾಂತರ, ಹುಮನಾಬಾದ ತಾಲೂಕ ಮತ್ತು ವೀರಭದ್ರೇಶ್ವ ಕಲಾ ಮಹಾವಿದ್ಯಾಲಯ ಕಾಲೇಜುಗಳಿಂದ, ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯಳಿಂದ ಮಾಹಿತಿಗಳನ್ನು ಕಲೆ ಹಾಕ್ಕಿದು ಹಾಗೂ ಮುಂತಾದ ಗ್ರಾಮಗಳಿಂದ ಕಾರ್ಯ ಕ್ಷೇತ್ರದಿಂದ ಮಾಹಿತಿಯನ್ನು ಕಲೆ ಹಾಕಲಾಗಿದೆ.

ಪ್ರಮುಖವಾಗಿ ಛಾಯಾ ಚಿತ್ರಣಗಳು ಸೇರೆ ಹಿಡಿದು ಶಿಲ್ಪ ಕಲೆಗಳ ಮೇಲೆ ರಚನೆಗೊಂಡ ಗ್ರಂಥಾಲಯಗಳಿಂದ, ಶಾಸನಗಳ ಮೂಲಕ ವಿಷಯವನ್ನು ಸಂಗ್ರಹಿಸಲಾಗಿದೆ ಮತ್ತು ಮಾದ್ಯಮಗಳಲ್ಲಿ ಪ್ರಕಟಗೊಂಡ ವಿಷಯಗಳನ್ನು ಕಾರ್ಯಕ್ಷೇತ್ರದಿಂದ ಸಂಗ್ರಹಿಸಲಾಗಿದೆ.

ಈ ಸಂಶೋಧನೆಯ ಪ್ರಭಂದವು ವ್ಯಾಪ್ತಿ ಬೀದರ ಜಿಲ್ಲೆ ಮತ್ತು ಹಲವಾರು ತಾಲೂಕುಗಳ ಗ್ರಾಮಗಳು ಒಳಗೋಂಡಿದೆ. ಬೀದರ ಜೀಲ್ಲೆಯ ಐತಿಹಾಸಿಕ ವಾಸ್ತುಶಿಲ್ಪಗಳು ಈ ನನ್ನ ಸಂಶೋಧನ ವಿಷಯದ ಕುರಿತು ನನ್ನ ಮಾರ್ಗದರ್ಶಕರಾದ ಎಲ್. ಶಿವಲಿಂಗಪ್ಪ ಅವರ ಸಲಹೆ, ಸೂಚನೆ ಮತ್ತು ಆದೇಶದ ಮೇರೆಗೆ ಸಂಶೋಧನ ವಿಷಯದ ಕುರಿತು ಎಲ್ಲಾ ರೀತಿಯ ಮೂಲ ದಾಖಲಾತಿಯನ್ನು ಸಂಗ್ರಹಿಸದೇನೆ.ಬೀದರ ವಸ್ತು ಸಂಗ್ರಹಾಲಯದಿಂದ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.ಬಸವಕಲ್ಯಾಣದ ಬಸವೇಶ್ವರ ಚಿತ್ರ ಕಲಾ ಮಹಾವಿದ್ಯಾಲಯ, ಹುಮನಾಬಾದ ವೀರಭದ್ರೇಶ್ವರ ಚಿತ್ರಕಲಾ ಮಹಾವಿದ್ಯಾಲಯದ ಪ್ರಾಧ್ಯಾಪಕರಿಂದ – ಧನರಾಜ ಮೇತ್ರೆ ಅವರು ಕುಡ ನನ್ನ ಈ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಸಂಗ್ರಹಿಸಲು ಸಹಾಯಕರಾಗಿದಾರೆ. ಕಲಬುರ್ಗಿ ವಿಶ್ವವಿದ್ಯಾಲಯ ದೃಶ್ಯ ಕಲಾ ವಿಭಾಗದ ಪ್ರಾಧ್ಯಾಪಕರಾದ ಡಾ!! ಮಲ್ಲಿಕಾರ್ಜುನ ಬಾಗೋಡಿ ಅವರು ಸಹಾ ನನ್ನ ಸಂಶೋಧನೆಗೆ ಸಹಾಯಕವಾಗುವ ಮಾಹಿತಿಗಳು ನೀಡಿದ್ದಾರೆ. ಬೀದರ ಜೀಲ್ಲೆಯ ಎಲ್ಲಾ ಐತಿಹಾಸಿಕ ಸ್ಥಳಗಳು ವಿಕ್ಷಣೆ ಮಾಡಿ ಆಯಾ ಸ್ಥಳಗಳ ಬಗ್ಗೆ ಮಾಹಿತಿಗಳ ಕಲೆಹಾಕಲಾರಂಭಿಸದಾಗ ಕೆಲವು ಮೂಲ ದಾಖಲಾತೆಗಳು ಬಸವಕಲ್ಯಾಣ ಸರಕಾರಿ ವಸ್ತು ಸಂಗ್ರಹಾಲಯದಲ್ಲಿರುವ ಮಾಹಿತಿಗಳನ್ನು ಕಲೆಹಾಕಲಾಗಿದೆ.

ಈ ನನ್ನ ಸಂಶೋಧನ ವಿಷಯಕ್ಕೆ ಸಂಬಂಧ್ದಿಸದಂತೆ ಅನೇಕ ತಾಲೂಕು ಮತ್ತು ಗ್ರಾಮಗಳಾದ ಬಸವಕಲ್ಯಾಣ ತಾಲೂಕಿನಿಂದ ನಾರಯಣಪೂರ, ವಿಮಾಪೂರ, ಬೇಲೂರ, ಗೋರ್ಟಾ, ಮುಚಳಂಬ, ಮೂರ್ಖಂಡಿ, ಶಿವಪೂರ, ಭಾಲ್ಕಿ ತಾಲೂಕಾ, ಭಾತೋಂಬರಾ, ಬೀದರ ಗ್ರಾಮಾಂತರ, ಹುಮನಾಬಾದ ತಾಲೂಕದ ಮತ್ತು ಜಲಸಂಗ್ವಿ ಅಲ್ಲಿನ ಗ್ರಾಮಸ್ಥರಿಂದ ಮಾಹಿತಿಯನ್ನು ಕಲೆಹಾಕ್ಕಿದು ಪ್ರಮುಖವಾಗಿ ಛಾಯಾ ಚಿತ್ರಣಗಳು ಸೇರೆ ಹಿಡಿದು ಶಿಲ್ಪಗಳ ಮಾಹಿತಿ ರಚನೆಗೋಳಲು ಸಹಾಯಕರಾದವರು ಫೋಟೋಗ್ರಾಫರ ಸ್ವ್ಯಾನ್ ಫೋಟೋ ಸ್ಟೊಡಿಯೊ ಬಸವಕಲ್ಯಾಣ ಮತ್ತು ಫೋಟೋಗ್ರಾಫರ ರವಿ ಹಣಮತವಾಡಿ ನನ್ನ ಈ ಸಂಶೋಧನ ವಿಷಯಗಳು ಸಂಬಂಧ್ಧಪಟ್ಟ ವಿಷಯದ ಬಗ್ಗೆ ಟೈಪ ಮಾಡಲು ಸಹಾಯಕರಾದಂತಹ ಪ್ರಭಾಕರ ನೌಗೀರೆ ಮತ್ತು ಸಂತೋಷ ಮಾಣಿಕನಗರ.

ಬೀದರ ಜಿಲ್ಲೆಯ ಐತಿಹಾಸಿಕ ವಾಸ್ತುಶಿಲ್ಪಗಳ ಸಂಶೋಧನ ವಿಷಯಕ್ಕೆ ಸಂಭದಿಸಿದಂತೆ ಮೂಲ ದಾಖಲೆಗಳ ಪ್ರತಿಗಳನ್ನು ಪರಿಶೀಲಿಸಿ, ಪುನರ್ ಸರಿಪಡಿಸಲು ಮತ್ತು ವಿಷಯದ ಕುರಿತ್ತು ಸರಿಯಾದ ಮಾಹಿತಿ, ಸಲಹೆ, ಸೂಚನೆಗಳನ್ನು ನೀಡಿ ಸಹಕರಿಸದವರು ಕುಮಾರ ಎಚ್ ಸಿ (ಕಿಣುಡಿಚಿಣಠಡಿ) ಬಸವಕಲ್ಯಾಣ ವಸ್ತು ಸಂಗ್ರಪಲಯ ಪ್ರಾಚಾಯರು ಕುಮಾರಪ್ಪಾ ಸರ್ ಸತ್ಯಾಶ್ರಯ ಸಂಯುಕ್ತ ಪದವಿ ಫೂರ್ವ ಕಾಲೇಜು ರಾಜೇಶ್ವ, ಇತಿಹಾಸ ಪ್ರಾಧ್ಯಾಪಕರಾದ ಶ್ರೀ ನಾಯಕ ಮತ್ತು ರೇಣುಕಾ ಎ. ಪೂಜಾರಿ ಅದಲ್ಲದೆ ಗ್ರಂಥಾಲಯಗಳಿಂದ ಶಾಸನಗಳ ಮೂಲಕವು ಸಹ ವಿಷಯವನ್ನು ಸಂಗ್ರಹಿಸಲಾಗಿದೆ ಮತ್ತು ಮಾಧ್ಯಮದಲ್ಲಿ ಪ್ರಕಟಗೊಂಡ ವಿಷಯಗಳನ್ನು ಕಾರ್ಯಕ್ಷೇತ್ರದಿಂದ ಸಂಗ್ರಹಿಸಲಾಗಿದೆ.

ಅಧ್ಯಾಯ – ೨

ಬೀದರ ಜಿಲ್ಲೆಯ ಕೋಟೆಯ ವಾಸ್ತು ಶಿಲ್ಪಗಳು

೧. ಬಸವಕಲ್ಯಾಣ

ಕರ್ನಾಟಕ ಚರಿತ್ರೆಯಲ್ಲಿ ಬಸವಕಲ್ಯಾಣವು ಗುವನಾರ್ಹ ಸ್ಥಾನ ಪಡೆದುಕೊಂಡಿದೆ. ಹಲವು ಶತಮಾನ ವೈಭವದಿಂದ ರಾಜ್ಯವಾಳಿದ ಬಾದಾಮಿ ಚಾಲುಕ್ಯರು ತಮ್ಮ ಸಾರ್ವಭೌಮತ್ವವನ್ನು ಕಳೆದುಕೊಂಡು ಕೆಲವು ಕಾಲ ರಾಷ್ಟ್ರಕೂಟರ ಮಾಂಡಲಿಕರಾಗಿ ಉಳಿದರು. ಮುಂದೆ ಚಾಲುಕ್ಯರ ಇಮ್ಮಡಿ ತೈಲಪನು ರಾಷ್ಟ್ರಕೂಡರನ್ನು ಸೋಲಿಸಿ ಸಾರ್ವಭೌಮತ್ವವನ್ನು ಪುನಃ ಪಡೆದುಕೊಂಡನು (೯೭೩). ಈ ಚಾಲುಕ್ಯ ವಂಶದ ಒಂದನೇ ಸೋಮೇಶ್ವರನು ___ ನೇ ಶತಮಾನದಲ್ಲಿ ಕಲ್ಯಾಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯಡಳಿತ ಪ್ರಾರಂಭಿಸಿದನು. ಅಂದಿನಿಂದ ಚಾಲುಕ್ಯರು ಕಲ್ಯಾಣದ ಚಾಲುಕ್ಯರೆಂದು ಹೆಸರಾದರು. ಅಂದು ಕಲ್ಯಾಣವು ಇಡೀ ದೇಶದಲ್ಲಿ ಹೆಸರಾದ ಮಹಾನಗರವಾಗಿತ್ತು. ೬ನೇ ವಿಕ್ರಮಾದಿತ್ಯನ ಕಾಲಕ್ಕೆ (೧೦೭೬–೧೧೨೭) ಈ ಕಲ್ಯಾಣ ಚಾಲುಕ್ಯ ಸಾಮ್ರಜಾಜ್ಯವು ಸಾಧನೆಯ ಉತ್ತುಂಗ ಶೀಖರ ತಲುಪಿತು.

ಕಾಲಂತರದಲ್ಲಿ ಕಲಚೂರಿ ವಂಶದ ಬಿಜ್ಜಳನು ಚಾಲುಕ್ಯರಿಂದ ಆಡಳಿತದ ಸ್ವಾಮ್ಯತೆಯನ್ನು ಪಡೆದುಕೊಂಡನು (೧೧೬೧). ಬಸವಕಲ್ಯಾಣನವರು ಈ ಬಿಜ್ಜಳೀನ ಭಂಡಾರಿಯಾಗಿದ್ದರು. ಆಗ ಅವರ ಮುಂದಾಳತ್ವದಲ್ಲಿ ನಡೆದ ಧಾರ್ಮಿಕ ಸಾಮಾಜಿಕ ಕ್ರಾಂತಿಯಿಂದಾಗಿ ಕಲ್ಯಾಣದ ವಿಶೇಷ ಪ್ರಸಿದ್ಧಿ ಪ್ರಪ್ತಿಯಾಯಿತು. ಚಾಲುಕ್ಯರ ಕಲ್ಯಾಣವು ಬಸವ ಕಲ್ಯಾಣವೆಂವು ಬಸವ ಕಲ್ಯಾಣವೆಂದು ಜನಪ್ರಿಯವಾಯಿತು. ದೇಶ ವಿದೇಶಗಳಿಂದ ಅಸಂಖ್ಯಾತ ಶರಣರು ಕಲ್ಯಾಣಕ್ಕೆ ಬಂದು ನೆಲೆ ನಿಂತರು. ತಮ್ಮ ಕಾಯಕ ತತ್ತ್ವ ಸಾಧನೆಗಳಿಂದ ರಾಜಕೀಯ ರಾಜಧಾನಿಯಾಗಿದ್ದ ಕಲ್ಯಾಣವನ್ನು ಶರಣರು ಮಾನವ ಕಲ್ಯಾಣದ ಕೇಂದ್ರವನ್ನಾಗಿ ಮಾರ್ಪಡಿಸಿದರು . ಅಂದಿನ ಕಲ್ಯಾಣ ನಗರವನ್ನು ಅಕ್ಕಮಹಾದೇವಿಯವರು " ಕಲ್ಯಾಣ ಕೈಲಾಸವೆಂಬ ನುಡಿ ಹಸನಾಯಿತ್ತು. ಒಳಗೂ ಕಲ್ಯಾಣ. ಎಂದು ಬಣ್ಣಿಸಿದ್ದಾರೆ. ಕಲ್ಯಾಣ ಕ್ರಾಂತಿಯ ನಂತರದ ಅಲ್ಪಾವಧಿಯಲ್ಲಿ ಚಾಲುಕ್ಯರು ಕಲಚೂರಿಗಳಿಂದ ತಮ್ಮ ರಾಜ್ಯವನ್ನು ಮರಳಿ ಪಡೆದುಕೊಂಡರೂ ಹೆಚ್ಚು ದಿನ ಅದನ್ನು ಕಲ್ಯಾಣ ಕ್ರಾಂತಿಯ ನಂತರದ ಅಲ್ಪಾವಧಿಯಲ್ಲಿ ಚಾಲುಕ್ಯರು ಕಲಚೂರಿಗಳಿಂದ ತಮ್ಮ ರಾಕ್ಯವನ್ನು ಮರಳಿ ಪಡೆದುಕೊಂಡರೂ ಹೆಚ್ಚು ದಿನ ಅದನ್ನು ನಿರ್ವಹಿಸಿಲಾಗಲಿಲ್ಲ. ನಂತರ ಯಾದವರು ತುಘಲಕರು ಬಹುಮನಿಯರು ಆದಿಲ್‌ಷಾಹಿಗಳು ಮೊಗಲರು ಹೈದರಾಬಾದ್ ನಿಜಾಮರು ಕಲ್ಯಾಣವನ್ನು

ಕೇಂದ್ರವಾಗಿಟ್ಟುಕೊಂಡು ಆಡಳಿತ ನಡೆಸಿದರು. ಆಧುನಿಕ ಕರ್ನಾಟಕದಲ್ಲಿ ಕಲ್ಯಾಣ ನಗರವು ತಾಲೂಕು ಕೇಂದ್ರವಾಯಿತು (೧೯೬೫). ಬಸವಣ್ಣನವರ ಅಷ್ಟಶತಮಾನ ಮಹೋತ್ಸವದ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವು ಕಲ್ಯಾಣವನ್ನು 'ಬಸವಕಲ್ಯಾಣ' ಎಂದು ಘೋಷಿಸಿತು (೧೯೬೮). ಸೋಲಾಪುರ - ಹೈದರಾಬಾದ್ ರಾಷ್ಟ್ರೀಯ ಹೆದ್ದಾರಿಗೆ ಹತ್ತಿಕೊಂಡಿರುವ ಬಸವಕಲ್ಯಾಣವು ವ್ಯಾಪಾರ, ಸಾಗಾಣಿಕೆ, ಶಿಕ್ಷಣ ಕ್ಷೇತ್ರಗಳಲ್ಲಿ ಗಣನೀಯ ಪ್ರಗತಿ ಸಾಧಿಸಿದೆ.

ತಾಲ್ಲೂಕುಕೇಂದ್ರವಾಗಿರುವ ಬಸವಕಲ್ಯಾಣವು ಜಿಲ್ಲಾ ಕೇಂದ್ರವಾಗಿರುವ ಬೀದರಿನಿಂದ ನೈರುತ್ಯಕ್ಕೆ ೮೦ ಕಿ.ಮಿ. ದೂರದಲ್ಲಿದೆ. ಬಸವಕಲ್ಯಾಣವನ್ನು ಇತ್ತೀಚಿನವರೆಗೆ ಕಲ್ಯಾಣವೆಂದೇ ಕರೆಯಲಾಗುತ್ತಿತ್ತು. ಸುಮಾರು ಕ್ರಿ.ಶ. ೧೦೫೮ ರಲ್ಲಿ ಕಲ್ಯಾಣವು ಚಾಲುಕ್ಯರ ರಾಜಧಾನಿಯಾಗಿತ್ತು. ಇದಕ್ಕಿಂತ ಮೊದಲು ಚೋಳ ರಾಜಾಧಿರಾಜನು ಕಲ್ಯಾಣವನ್ನು ಗೆದ್ದು ಅಲ್ಲಿಯ ದೇವಾಲಯದಲ್ಲಿಯ ದ್ವಾರಪಾಲ ಶಿಲ್ಪವನ್ನು ತನ್ನ ರಾಜಧಾನಿಯ ದೇವಾಲಯದಲ್ಲಿಡುವುದಕ್ಕಾಗಿ ತೆಗೆದುಕೊಂಡು ಹೋದನು. ವಿಶಾಲವಾದ ಪ್ರದೇಶವನ್ನು ಆವರಿಸಿದ್ದ ರಾಜಧಾನಿ ಪಟ್ಟಣವು ಸಮೃದ್ಧಿಯಿಂದ ಕೂಡಿದ್ದಲ್ಲದೆ ಪ್ರಮುಖವಾದ ಜ್ಞಾನ ಕೇಂದ್ರವೂ ಆಗಿತ್ತು. ಆರನೇ ವಿಕ್ರಮಾದಿತ್ಯನ ಆಸ್ಥಾನದಲ್ಲಿದ್ದ ವಿಜ್ಞಾನೇಶ್ವರನು ಕಲ್ಯಾಣದಂತಹ ನಗರವು ಹಿಂದೆಂದೂ ಇರಲಿಲ್ಲ, ಮುಂದೆಯೂ ಇರುವುದಿಲ್ಲವೆಂದು ಹೇಳಿದ್ದಾನೆ. ಕೆಲಕಾಲ ಕಲಚುರಿಗಳ ರಾಜ್ಯಧಾನಿಯಾಗಿದ್ದು. ಮುಂದೆ ಸೇವುಣ ಮತ್ತು ಕಾಕತೀಯರ ವಶವಾಯಿತು. ಮುಂದೆ ತೊಘಲಕ್, ಬಹುಮನಿ ಬರೀದ್‌ಶಾಹಿ ಮತ್ತು ಆದಿಲ್‌ಶಾಹಿ ಅರಸರ ವಶವಾಯಿತು. ಕ್ರಿ. ಶ. ೧೫೫೯-೬೧ ರಲ್ಲಿ ಕೆಳದಿ ಸದಾಶಿವ ನಾಯಕನು ವಿಜಯನಗರ ಅರಸರ ಪರವಾಗಿ ದಂಡೆತ್ತಿ ಬಂದು ಈ ಕೋಟೆಯನ್ನು ಸ್ವಾಧೀನ ಪಡಿಸಿಕೊಂಡು "ಕೋಟೆ ಕೋಲಾಹಲ" ಬಿರುದನ್ನು ಪಡೆದನು. ಕ್ರಿ. ಶ. ೧೬೮೬ ರಲ್ಲಿ ಔರಂಗಜೇಬನ ವಶವಾಯಿತು. ಕೊನೆಯಲ್ಲಿ ಹೈದ್ರಾಬಾದ ನಿಜಾಮನ ಮತ್ತು ಆತನ ಜಾಗೀರ್‌ದಾರ್‌ನ ವಶದಲಿತ್ತು.

ಚಾಲುಕ್ಯರು ಕಟ್ಟಿಸಿದ ಕೋಟೆಯನ್ನು ಬಹುಮನಿ ಮತ್ತು ಆದಿಲ್‌ಶಾಹಿ ಅರಸರು ಬಲಪಡಿಸಿ ವಿಸ್ತರಿಸಿರುವುದರಿಂದ ಈಗ ಇಲ್ಲಿ ಕಾಣಿಸುತ್ತಿರುವುದು ಹೆಚ್ಚಾಗಿ ಮುಸ್ಲಿಮ್ ಅರಸರ್ ಕೋಟೆ ಅದಿಲ್‌ಶಾಹಿ ಕಾಲದ ಅನೇಕ ಶಾಸನಗಳು ಕೋಟೆಯ ವಿವಿಧ ಭಾಗಗಳನ್ನು ಕಟ್ಟಿಸಿರುವುದನ್ನು ದೃಡಪಡಿಸುತ್ತದೆ. ಅಲಿ ಆದಿಲ್‌ಶಾಹನ ಆಳ್ವಿಕೆಯಲ್ಲಿ ರುಸ್ತುಮ್ ಖಾನ, ಸಯ್ಯದ್ ಮಹ್ಮದ್, ಮಲಿಕುಷ್ ಸಮುದ್ದಿನ್ ಮತ್ತು ಮಲ್ಲಿಕ್ ಇಸ್ಮಾಯಿಲ್ ಕಲ್ಯಾಣದ ಪ್ರಾಂತ್ಯ ಅಧಿಕಾರಿಗಳಾಗಿದ್ದರು ಅವರ ಕಾಲದಲ್ಲಿ ಕ್ರಿ.ಶ ೧೫೬೩, ೧೫೬೭, ೧೫೬೮ ಮತ್ತು ೧೫೭೩ ನಾಲ್ಕು ಬುರುಜುಗಳನ್ನು ಕಟ್ಟಲಾಯಿತ್ತು. ಎರಡನೆಯ ಇಬ್ರಾಹಿಮ್ ಆದಿಲ್‌ಶಾಹಿನ ಕಾಲದಲ್ಲಿ ಕ್ರಿ.ಶ ೧೫೬೨ ರಾಜಮಹಲ್‌ಅನ್ನು ಕಟ್ಟಲಾಯಿತ್ತು. ಮಹಮ್ಮದ್ ಅದಿಲ್‌ಶಾಹಿನ್ ಆಳ್ವಿಕೆಯಲ್ಲಿ

ಸೈನ್ಯಾದಿಕಾರಿಯಾಗಿದ್ದ ಸೀದೀದಿಲಾವನು ಕ್ರಿ.ಶ ೧೬೪೬ ರಲ್ಲಿ ಕೋಟೆಯನ್ನು ಕಟ್ಟಿಸಿ ಕಡೆಗುಂಪಿನ ಮೇಲಿನ ಗೋಪುರಗಳನ್ನು ಕಟ್ಟಿಸಿ ಅವುಗಳ ಮೇಲೆ ತೋಪುಗಳನ್ನು ಇಡೀಸಿದರು ಮತ್ತು ಅರಮನೆಯನ್ನು ಕಟ್ಟಿಸಿದನು.

ಕೋಟೆ:

ಇದು ಮೂರು ಸುತ್ತಿನ ದಿರ್ಘವರ್ತಾಕಾರದ ಕೋಟೆ, ಹೂರ ಸುತ್ತ ಮಧ್ಯದ ಸುತ್ತಿನ ಹೊರಗಿನ ಕಂದಕದ ಅಂಚಿನಲ್ಲಿದೆ ಕಂದಕದ ಗೋಡೆಯನ್ನೇ ಎತ್ತರಿಸಿ ಕೈಪಿಡಿ ಗೋಡೆಯಲ್ಲಿ ಬಂದೂಕಿಗಾಗಿ ಮಾಡಿದ ರಂದ್ರಗಳಿವೆ. ಈ ಸುತ್ತಿನಲ್ಲಿ ಯಾವುದೇ ಬುರುಜುಗಳಲ್ಲಿ, ಎರಡನೆ ಅಥವಾ ಮಧ್ಯದ ಸುತ್ತನ್ನು ಬೆಟ್ಟದ ಬುಡದಲ್ಲಿ ಮತ್ತು ಮೂರನೇ ಅಥವಾ ಕೊನೆಯ ಸುತ್ತನ್ನು ಬೆಟ್ಟದ ಮೇಲೆ ಕಟ್ಟಿದೆ.

ಹೋರೆ ಕೋಟೆಯ ಪರ್ವಕ್ಕೆ ಬಾಗಿಲನ್ನು ಮುಂದೆ ದೊಡ್ಡ ಆಯತಾಕಾರದ ಆವರಣವು ಮರೆಮಾಡುತ್ತವೆ. ಈ ಆವರಣದ ದಕ್ಷಿಣಕ್ಕೆ ದಕ್ಷಿಣಾಭಿಮುಖವಾದ ಬಾಗಿಲಿದೆ. ಎತ್ತರವಾದ ಕಮಾನಿನ ಬಾಗಿಲನ್ನು ಮುಂದೆ ಚಾಚಿದ ಎರಡು ಕಿಟಕಿಗಳು ಮೂರು ಚಿಕ್ಕ ಕಮಾನುಗಳು. ಎರಡು ಮಿನಕಿಟಗಳು ಮತ್ತು ತೆನೆಗಳಿಂದ ಅಲಂಕರಿಸಿದ ಬಾಗಿಲ ಮೇಲಿರುವ ಶಾಸನದಿಂದ ಇವನ್ನು ನಿಜಾಮನ ಕಾಲದಲ್ಲಿ ಕ್ರಿ. ಶ. ೧೭೭೫ ರಲ್ಲಿ ಕಟ್ಟಲಾಗಿದೆಯೆಂದು ತಿಳಿಯುತ್ತದೆ. ಆವರಣದ ಒಳಭಾಗದಲ್ಲಿ ಸುತ್ತಲು ಕಮಾನುಗಳ ಕೈಸಾಲೆಯಿಂದ ಆವರಣದ ಮಧ್ಯದಲ್ಲಿ ಕಾರಂಜಿ, ದಕ್ಷಿಣಕ್ಕೆ ಆನೆಯ ಮೇಲೆ ಹತ್ತಲು ನಿರ್ಮಿಸಿದ ವೇದಿಕೆ ಮತ್ತು ಪಶ್ಚಿಮಕ್ಕೆ ಎತ್ತರವಾದ ಮರದ ಕಂಬಗಳ ದೊಡ್ಡ ಕಟ್ಟಡ ಇವೆ. ದೊಡ್ಡ ಕಟ್ಟಡದ ಎತ್ತರಕ್ಕೆ ಪೂರ್ವಮುಖವಾಗಿರುವ ಎರಡನೆಯ ಬಾಗಿಲಿದೆ. ಕಮಾನಿನಾಕಾರದ ಈ ಬಾಗಿಲಿನ ಮರದ ಕಂದಕಗಳಿಗೆ ಕಬ್ಬಿಣದ ಪಟ್ಟಿಗಳನ್ನು ಜೋಡಿಸಿದೆ.ಇಲ್ಲಿಂದ ಕಂದಕದ ಮೇಲಿರುವ ಸೇತುವೆಯನ್ನು ದಾಟಿದಾಗ ಮಧ್ಯದ ಸುತ್ತಿನಲ್ಲಿರುವ ಮೂರನೆಯ ಬಾಗಿಲು ಎದುರಾಗುತ್ತದೆ. ಆಳ ಮತ್ತು ಅಗಲವಾದ ಕಂದಕದಲ್ಲಿ ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ಎರಡು ಬಾವಿಗಳಿವೆ.

ಕಮಾನಿನಾಕಾರದ ಮೂರನೆಯ ಬಾಗಿಲು ಎರಡು ಅರ್ಧ ವೃತ್ತಾಕಾರದ ಕೊತ್ತಳಗಳ ಮಧ್ಯದಲ್ಲಿದೆ. ಬಾಗಿಲ ಕದಗಳಿಗೆ ಹರಿತವಾದ ನೂಲಗಳನ್ನು ಜೊಡಿಸಿದೆ. ಒಂದು ಕದವನ್ನು ಕಳಚಿ ಬಾಗಿಲ ಒಳಭಾಗದಲ್ಲಿಡಲಾಗಿದೆ. ಪ್ರವೇಶದ ಪಕ್ಕಗಳಲ್ಲಿ ಪ್ರತಿ ಕಟ್ಟೆಯ ಮೇಲೆ ಎರಡಂಕಣದ ಕಾವಲುಗಾರರ ಕೊಠಡಿಯಿಫೆ. ಬಾಗಿಲ ಎತ್ತರಕ್ಕೆ ಐದು ಕೊಠಡಿಗಳ ಜೈಲುಖಾನೆಯಿಂದಕೂಡಿದೆ. ನಾಲ್ಕನೆಯ ಬಾಗಿಲು ಒಂದು ಅರ್ಧ ವೃತಾಕಾರದ ಮತ್ತು ಇನ್ನೊಂದು ಅಷ್ಟಭುಜಾಕೃತಿಯ (ಬುರುಜುಗಳ) ಮಧ್ಯದಲ್ಲಿದೆ. ಉತ್ತರಾಭಿಮುಖವಾಗಿರುವ ಈ

ಬಾಗಿಲನ್ನು ದಾಟಿ ಹೋದಾಗ ಚಿಕ್ಕ ಆವರಣವಿದೆ. ಆವರಣದ ಪೂರ್ವಕ್ಕೆ ಕಮಾನುಗಳ ಕಾವಲುಗಾರರ ಮನೆಯಿಂದ ಪಶ್ಚಿಮಕ್ಕೆ ಎರಡು ಬುರುಜುಗಳ ಮಧ್ಯದಲ್ಲಿ ಪೂರ್ವಾಭಿಮುಖವಾಗಿರುವ ಐದನೆಯ ಬಾಗಿಲಿದೆ. ಬಾಗಿಲ ಮುಂದೆ ಹಲವು ಮೆಟ್ಟಿಲುಗಳಿವೆ. ಬಾಗಿಲನ್ನು ದಾಟಿದ ಮೇಲೆ ಸಿಗುವ ಚಿಕ್ಕ ಆವರಣದಲ್ಲಿಯೂ ಕಾವಲುಗಾರರ ಕೊಠಡಿಗಳಿವೆ.ಬಾಗಿಲ ಪಕ್ಕದಲ್ಲಿ ಉತ್ತರಕ್ಕಿರುವ ದೊಡ್ಡ ಬುರುಜಿನ ಒಳಭಾಗದಲ್ಲಿ ವಿಶಾಲವಾದ ಮದ್ದಿನ ಮನೆ (ಬಾರೂದ್‌ಖಾನೆ) ಇವೆ. ಇಲ್ಲಿ ಚಿಕ್ಕ ಮತ್ತು ದೊಡ್ಡ ಒರಳು ಕಲ್ಲುಗಳಿವೆ. ತೋಪು ಮತ್ತು ಬಂದೂಕುಗಳಿಗೆ ಬೇಕಾಗುವ ಮದ್ದನ್ನು ಇಲ್ಲಿಯೇ ತಯಾರಿಸಲಾಗುತ್ತಿತ್ತು.

ಎರಡನೆಯ ಮತ್ತು ಕೊನೆಯ ಸುತ್ತುಗಳ ಮಧ್ಯದಲ್ಲಿ ದಾರಿಯ ಪಕ್ಕದಲ್ಲಿ ಒಂದು ಗೋಡೆಯನ್ನು ಕಟ್ಟಿದೆ. ಈ ಗೋಡೆಯ ಕೊನೆಯ ಸುತ್ತನ್ನು ಸಂಧಿಸುವ ಸ್ಥಳದಲ್ಲಿ ಆರನೆಯ ಬಾಗಿಲಿದೆ. ಕೊನೆಯ ಸುತ್ತಿನಲ್ಲಿರುವ ಏಳನೆಯ ಬಾಗಿಲು ಎರಡು ವೃತ್ತಾಕಾರದ ಬುರುಜುಗಳ ಮಧ್ಯದಲ್ಲಿದೆ. ಬಾಗಿಲ ಮುಂದಿನ ದಾರಿ ಇಕ್ಕಟಾಗಿದೆ. ಕೊನೆಯ ಸುತ್ತಿನ ಒಳಗಡೆ ರಾಜಮಹಲ್, ಹೈದರ್, ಮಹಲ್, ನೃತ್ಯ, ಮಹಲ್, ಬಿಜ್ಜಳನ ಅರಮನೆಯೆಂದು ಕರೆಯಲಾಗುವ ಕಟ್ಟಡ ಮಸೀದಿ, ಪಕ್ಷಿ ಕೊಠಡಿಗಳು, ಲೆಕ್ಕಪತ್ರ ಕೊಠಡಿಗಳು, ಗರಡಿಮನೆ, ಮದ್ದಿನ ಮನೆ, ಬಾವಿ, ಕಾರಂಜಿ, ತೊಟ್ಟಿಗಳು ಮುಂತಾದವುಗಳಿವೆ. ಕಲ್ಲು ಮತ್ತು ಗಾರೆಯ ಈ ಕಟ್ಟಡಗಳಲ್ಲಿ ಕಮಾನು ಮತ್ತು ಗುಮ್ಮಟಗಳನ್ನು ಅಳವಡಿಸಿ ಮುಸ್ಲಿಮ್‌ರ ಶೈಲಿಯಲ್ಲಿ ಕಟ್ಟಿದ್ದಾರೆ. ರಾಜಮಹಲ್ ಕಟ್ಟಡದ ಮುಂಭಾಗ ಕಮಾನುಗಳನ್ನು ಗಾರೆಯಲ್ಲಿ ಮಾಡಿದ ವಿವಿಧ ವಿನ್ಯಾಸಗಳಿಂದ ಸುಂದರವಾಗಿ ಅಲಂಕರಿಸಿದೆ. ಕಮಾನುಗಳ ಮೇಲ್ಭಾಗದಲ್ಲಿ ಹೂ ಬಳ್ಳಿಯ ಮತ್ತು ಪಕ್ಕದಲ್ಲಿ ವೃತ್ತಾಕಾರದ ಅಲಂಕಾರಿಕ ವಿನ್ಯಾಸಗಳಿವೆ. ಹೈದರ್ ಮಹಲ್‌ನಲ್ಲಿ ವಿಶಾಲವಾದ ತೆರೆದ ಸಬಾಂಗಣವಿದು. ಉತ್ತರ ದಿಕ್ಕಿನ ಗೋಡೆಯ ಮೇಲೆ ಆಯತಾಕಾರದ ಅಲಂಕಾರಿಕ ಪಟ್ಟಿಯಿದೆ. ಈ ಗೋಡೆಯಲ್ಲಿ ತೇಲುವಾಗಿ ಗಾರೆಯ ವಿನ್ಯಾಸಗಳ ಮೂಲಕ ಆಕರ್ಷಿತವಾಗಿ ಮೇಲಿನಿಂದ ಕೆಳಗೆ ಬೀಳುವಂತೆ ಮಾಡಿದೆ. ಸಭಾಂಗಣದ ಮಧ್ಯದಲ್ಲಿ ದೊಡ್ಡದಾದ ನೀರಿನ ತೊಟ್ಟಿಯೊಂದಿದೆ. ಆವರಣದ ಎದುರಿಗೆ ಕಮಾನುಗಳ ಸುಂದರವಾದ ಮಂಟಪವಿದೆ. ಮಂಟಪದಲ್ಲಿ ಅರಸರಿಗಾಗಿ ಮಾಡಿದ ಸುಂದರ ಅಲಂಕಾರಿಕವಾದ ಆಸನವಿದೆ. ನೃತ್ಯ ಮಹಲಿನ ಆವರಣ ಮಧ್ಯದಲ್ಲಿ ಅಷ್ಟಭುಜಾಕೃತಿಯ ಸುಂದರವಾದ ತೊಟ್ಟಿಯಿದೆ. ಅದರ ಸುತ್ತಲು ಆಯತಾಕಾರದ ಚಿಕ್ಕ ಚಿಕ್ಕ ತಗ್ಗುಗಳಿವೆ, ಇವುಗಳಲ್ಲಿ ಗಿಡ, ಬಳ್ಳಿಗಳನ್ನು ಬೆಳೆಸುತ್ತಿದ್ದಂತೆ ಕಾಣುತ್ತದೆ. ತೊಟ್ಟಿಯ ಪಕ್ಕದಲ್ಲಿ ಗಾರೆಯಿಂದ ಅಲಂಕರಿಸಿದ ಆಸನಗಳಿವೆ. ತೊಟ್ಟಿಯ ಎದುರಿಗಿರುವ ಮಂಟಪದ ಕಂಬಗಳ ಮೇಲೆ ಗಾರೆಯ ಅಲಂಕಾರಿಕ ವಿನ್ಯಾಸಗಳಿವೆ. ಇತ್ತೀಚಿನವರೆಗೆ ಪ್ರಾಚ್ಯವಸ್ತು ಸಂಗ್ರಹಾಲಯವಾಗಿದ್ದ ಕಟ್ಟಡವನ್ನು ಬಿಜ್ಜಳನ ಅರಮನೆಯೆಂದು ಕರೆಯುವುದು ರೂಢಿಯಲ್ಲಿದೆ.

ಆದರೆ ಇದು ನಿಜಾಮರ ಕಾಲದ ಕಟ್ಟಡವಾಗಿದೆ. ಚಾಲುಕ್ಯರ ಕಾಲದ ೧೧-೧೨ ನೆಯ ಶತಮಾನದ ದೇವಾಲಯದ ಒಂದು ಭಾಗವು ಇಲ್ಲಿಯ ಕಟ್ಟಡಗಳೊಂದಿಗೆ ಬೆರೆತುಹೋಗಿದೆ. ದೇವಾಲಯದಲ್ಲಿ ಗರ್ಭಗೃಹ ಮಾತ್ರವಿದ್ದು, ಅದರಲ್ಲಿ ದೇವರಿಲ್ಲ, ಬಾಗಿಲ ಚೌಕಟ್ಟಿನ ಮೇಲೆ ಒಂಬತ್ತು ವೈವಿಧ್ಯಮಯ ಶಾಖೆಗಳಿವೆ. ಕೆಳಗಿನ ದ್ವಾರಪಾಲಕರ ಶಿಲ್ಪಗಳನ್ನು ನಾಶವಾಗಿದ್ದು. ಮೇಲಿನ (ಪ್ರಾಂಗಣ) ಗಣೇಶನ ಶಿಲ್ಪವಿದೆ. ಈ ಪ್ರದೇಶದಲ್ಲಿರುವ ಬಾವಿ ಬಹಳ ಆಳವಾಗಿದ್ದು, ಇದರಲ್ಲಿ ನೀರು ಸದಾ ಇರುತ್ತದೆ. ಬಾವಿಯ ಪಕ್ಕದಲ್ಲಿ ಒಂದು ದೊಡ್ಡ ತೊಟ್ಟಿಗೆ ಕೊಳವೆಗಳನ್ನು ಜೋಡಿಸಿದೆ. ಬಾವಿಯಿಂದ ಮೇಲೆಳೆದ ನೀರನ್ನು ಈ ತೊಟ್ಟಿಯಲ್ಲಿ ಹಾಕಿ, ವಿವಿಧ ಕಟ್ಟಡಗಳಿಗೆ ಹರಿಯುವಂತೆ ಮಾಡಿಲಾಗಿದೆ.

ಎರಡನೆಯ ಅಥವಾ ಮಧ್ಯದ ಸುತ್ತಿನ ಗೋಡೆಯು ಬಹಳ ಎತ್ತರವಾಗಿದೆ. ಇದರಲ್ಲಿ ಅರ್ಧ ವೃತ್ತಾಕಾರದ ಮತ್ತು ಬಹುಭುಜಾಕೃತಿಯ ಹದ್ದಿನಾಲ್ಕು ಬಿಳಿ ಬುರುಜುಗಳಿವೆ. ಇವುಗಳಲ್ಲಿ ಅನೇಕ ಬುರುಜುಗಳ ಮೇಲೆ ದೊಡ್ಡ ಗಾತ್ರದ ತೋಪುಗಳಿವೆ. ಗೋಡೆಯನ್ನು ದಪ್ಪ ಕಲ್ಲುಗಳಿಂದ ಕಟ್ಟಲಾಗಿದೆ. ದೇವಾಲಯಗಳ ಮತ್ತು ಶಿಲ್ಪಗಳ ಕಲ್ಲುಗಳನ್ನು ಗೋಡೆಯನ್ನು ಕಟ್ಟಲು ಬಳಸಿರುವುದು ಅಲಲ್ಲಿ ಕಾಣುತ್ತವೆ. ಮೂರನೆಯ ಅಥವಾ ಕೊನೆಯ ಸುತ್ತನ್ನು ಸಹ ದಪ್ಪ ಕಲ್ಲುಗಳಿಂದ ಕಟ್ಟಲಾಗಿದೆ. ಎತ್ತರವಾದ ಈ ಗೋಡೆಯಲ್ಲಿ ಅರ್ಧ ವೃತ್ತಾಕಾರದ ಮತ್ತು ಬಹುಭುಜಾಕೃತಿಯ ೧೧ ಬುರುಜುಗಳಿವೆ. ಇವುಗಳ ಮೇಲೆ ತೋಪುಗಳಿವೆ. ತೋಪುಗಳನ್ನಿಡಲು ಎತ್ತರವಾದ ವೃತ್ತಾಕಾರದ ವೇದಿಕೆಗಳನ್ನು ಬುರುಜುಗಳ ಮೇಲ್ಭಾಗದಲ್ಲಿ ಕಟ್ಟಲಾಗಿದೆ. ಹೈದರ್ ಮಹಲ್ ಹತ್ತಿರದಲ್ಲಿರುವ ತೋಪು ೬.೯೪ ಮೀ ಉದ್ದವಿದೆ. ಇದನ್ನು "ನಾವ್‌ಗಜ್" ತೋಪು ಎಂದು ಕರೆಯುತ್ತಾರೆ. ಕೋಟೆಯ ಕೈಪಿಡಿ ಗೋಡೆಯಲ್ಲಿ ತೋಪುಗಳಿಗಾಗಿ ಬಿಟ್ಟು ಅಗಲವಾದ ಸಂದಿಗಳಿವೆ. ಕೆಲವು ಬುರುಜುಗಳ ಕೈಪಿಡಿ ಗೋಡೆಗಳು ಅಗಲವಾಗಿದ್ದು ಹೊರ ಭಾಗದಲ್ಲಿ ಇಳಿಜಾರಾಗಿವೆ. ಇಂತಹವುಗಳನ್ನು ನಿಜಾಮರ ಕಾಲದಲ್ಲಿ ಕಟ್ಟಲಾಗಿದೆ.

ಒಂದನೆಯ ಸೋಮೇಶ್ವರನು ಚೋಳರ ಮೇಲೆ ಯುದ್ಧ ಮಾಡಿ ಅಮರಾತಿಯಲ್ಲಿ ಅವರನ್ನು ಸೋಲಿಸಿದನು. ಈ ಯುದ್ಧಗಳ ಬಗ್ಗೆ ಕುರಿತು ಇತಿಹಾಸಕಾರರಲ್ಲಿ ಒಮ್ಮತದ ಅಭಿಪ್ರಾಯಗಳಿಲ್ಲ. ಕ್ರಿ. ಶ. ೧೦೪೫ ರಲ್ಲಿ ತುಂಗಭದ್ರ ನದಿಯ ದಂಡೆಯ ಮೇಲೆ ನಡೆದ ಯುದ್ಧದಲ್ಲಿ ಚೋಳರನ್ನು ಸಂಪೂರ್ಣವಾಗಿ ಸೋಲಿಸಲಾಯಿತು.

ಮುಂದೆ ಅಧಿಕಾರಕ್ಕೆ ಬಂದ ೬ನೇ ವಿಕ್ರಮಾದಿತ್ಯ ಕಲ್ಯಾಣವನ್ನು ಆಳಿರುವ ಅರಸರಲ್ಲಿ ಅಗ್ರಗಣ್ಯರು "ತ್ರಿಭುವನವಲ್ಲ" ಬಿರುದನ್ನು ಹೊಂದಿದ ಇತನು ಕಲ್ಯಾಣ ರಾಜ್ಯಧಾನಿಯನ್ನು ಸರ್ವಾಂಗಣ ಪ್ರಗತಿ ಮಾಡಿದನು.ಕ್ರಿ. ಶ. ೧೧೨೭ ರಿಂದ ೧೧೫೭ ರ ವರೆಗೆ ಆಳ್ವಿಕೆ ಮಾಡಿರುವ ಕಲ್ಯಾಣ ಚಾಲುಕ್ಯರ ಅರಸರು ದುರ್ಬಲರಾಗಿದ್ದರು. ಇದರ ಲಾಭ ಪಡೆದುಕೊಂಡ

ಕಳಚೂರಿಯರು ಚಾಲುಕ್ಯರನ್ನು ಸದೆ ಬಡೆದು ಕ್ರಿ. ಶ. ೧೧೬೨ ರಿಂದ ೧೧೮೪ ರ ಅವಧಿಯಲ್ಲಿ ಅದೇ ಕಲ್ಯಾಣ ರಾಜ್ಯದ ಮೇಲೆ ಅಧಿಕಾರ ಮಾಡಿದ್ದರು. ಕ್ರಿ. ಶ. ೧೧೮೪ ರಲ್ಲಿ ಕಳಚೂರಿಯರನ್ನು ಸದೆ ಬಡೆದು ಪುನಹ ಕಲ್ಯಾಣ ಚಾಲುಕ್ಯರು ಅಧಿಕಾರಕ್ಕೆ ಬಂದರು. ಶ್ರೀಮತ್ ಕಲ್ಯಾಣಪುರವು ಹನ್ನೆರಡು ಯೋಜನೆ ವಿಸ್ತಾರವುಳ್ಳದ್ದೂ ಇದಕ್ಕೆ ಮುನ್ನೂರಾ ಮೂವತ್ತಾರು ಬಾಗಿಲವಾಡಗಳು, ನೂರಾಹದಿನೈದು ಮೊಳೆಯ ಬಾಗಿಲುಗಳು, ೨೦ ಆಳ್ವಿಕೆಗಳು, ಪಟ್ಟಣದ ಸುತ್ತ ೪೮ ಯೋಜನೆ ಉದ್ದದ ಕೋಟೆ ಬಾಹತ್ತರ ನಿಯೋಗಿಗಳ ಸಾಮಂತರು ಲಕ್ಷಗಟ್ಟಲೆ ಮಾಂಡಲಿಕರ ಮನೆಗಳು, ಅಸಂಖ್ಯಾತ ಒಳಕೇರಿ, ಹೊರಕೇರಿ, ಹಲವಾರು ಶಿವಾಲಯಗಳು, ಸರೋವರಗಳು, ಮಠಗಳು ಇದ್ದವು ಎಂದು ಮಾನ್ಯಗಳಿಸಲಾಗಿದೆ.

ಕಲ್ಯಾಣ ಚಾಲುಕ್ಯರ ದೊರೆ ೩ನೇ ಸೋಮೇಶ್ವರನು ಮಾನಸೋಲ್ಲಾಸದ ಅಭಿಲಾಷತೀರ್ಥ ಚಿಂತಾಮಣಿಯಲ್ಲಿ ಕೋಟೆಯ ಪ್ರಕಾರಗಳನ್ನು ನಿರ್ಮಾಣಕ್ಕೆ ಸಾಮಗ್ರಿಗಳು ಮತ್ತು ಒಳಗಡೆ ಇರಬೇಕಾದ ಪ್ರಮುಖ ಕಟ್ಟಡಗಳ ಕುರಿತು ವಿವರಿಸಿದ್ದಾನೆ. ಅದರಲ್ಲಿ ಒಂಬತ್ತು ಪ್ರಕಾರದ ಕೋಟೆಗಳು ಇವೆ. ಅವುಗಳು ಈ ಕೆಳಗಿನಂತಿವೆ.

೧. ಜಲದುರ್ಗ : – ಆಳವಾದ ನೀರಿನಿಂದ ಆವರಿಸಲ್ಪಟ್ಟಿರುವುದು.

೨. ಗಿರಿದುರ್ಗ : – ದುರ್ಗಮವಾದ ಬೆಟ್ಟದ ಮೇಲೆ ಕಟ್ಟಡದ ಹಾಗೂ ಸುತ್ತಲು ನೀರಿನಿಂದ ಆವೃತವಾಗಿದೆ.

೩. ಪಾಷಾಣದುರ್ಗ : – ಬಂಡೆಗಳಿಂದ ರಚಿಸಿರುವುದು.

೪. ಇಷ್ಟಿಕದುರ್ಗ : – ಇಟ್ಟಿಗೆಯಿಂದ ನಿರ್ಮಿಸಿ, ಸುತ್ತಲು ಆಳವಾದ ಕಂದಕ.

೫. ಮೃತ್ತಿಕಾಮಯಾನ್ : – ಮಣ್ಣಿನಿಂದ ಕಟ್ಟಿರುವುದು.

೬. ವನದುರ್ಗ : – ದಟ್ಟವಾದ ಅರಣ್ಯದಲ್ಲಿ.

೭. ವರದುರ್ಗ : – ಮರ ಭೂಮಿಯ ಕೋಟೆ.

೮. ದಾರುಣದುರ್ಗ : – ಬಂಬುಗಳಿಂದ ನಿರ್ಮಿಸಿದ್ದು.

೯. ನರದುರ್ಗ : – ಸುತ್ತಲು ಶಸ್ತ್ರ ಸಜ್ಜಿತವಾದ ಸೈನಿಕರಿಂದ ರಕ್ಷಿಸಲ್ಪಟ್ಟಿರುವುದು.

ರಾಜ ಸೋಮೇಶ್ವರನು ಹೇಳಿದಂತೆ ಆಳುವರು ತಮ್ಮ ಅವಶ್ಯಕತೆಗೆ ತಕ್ಕಂತೆ ಕೋಟೆಯನ್ನು ಕಟ್ಟಿಕೊಂಡಿರಬೇಕು. ರಾಜನ ಬಲದ ಪ್ರತೀಕವೆ ಕೋಟೆಯಾಗಿರುತ್ತದೆ. ಕೋಟೆಯಿಂದ ನಗರವು ರಕ್ಷಿಸಲ್ಪಡಬೇಕು. ಇಲ್ಲದಿದ್ದಲ್ಲಿ ಆ ನಗರವು ಶತ್ರುಗಳ ವಶವಾಗುವಲ್ಲಿ ಸಂಶಯವೇ ಇಲ್ಲ.

ಕಲ್ಯಾಣ ಚಾಲುಕ್ಯರ ಆಸ್ಥಾನದಲ್ಲಿರುವ ಪಂಡಿತನಾದ ವಿಜ್ಞಾನೇಶ್ವರನು ಕಲ್ಯಾಣಪುರದ ಕೋಟೆಯ ವೈಭವವನ್ನು ವರ್ಣಿಸಿದ್ದಾನೆ. ಈ ಭೂಮಿಯ ಮೇಲೆ ಕಲ್ಯಾಣದಂತಹ ನಗರ

ಮತ್ತೊಂದಿಲ್ಲ, ವಿಕ್ರಾಮಾದಿತ್ಯನಂತ ಅರಸ ಅಥವಾ ರಾಜ ಹಿಂದೆಯೂ ಇರಲಿಲ್ಲ, ಇಂದೂ ಇಲ್ಲ, ಮುಂದೆಯೂ ಇರುವುದಿಲ್ಲ ಎಂದು ಹೇಳಿದ್ದಾರೆ. ಮತ್ತೆ ಬಿಲ್ಹಣ ಕವಿಯು ಕಲ್ಯಾಣಪುರದ ಕೋಟೆಯು ಪ್ರತಿ ಹಂತದಲ್ಲಿಯೂ ಸಹ ಬಹು ಎಚ್ಚರದಿಂದ ಕಾವಲು ಮಾಡಲಾಗುತ್ತಿತ್ತೆಂದು ಹೇಳಿದರು. ಈ ಕೋಟೆಯ ವಿವಿಧ ಭಾಗಗಳನ್ನು ಒಳಗೊಂಡಿದೆ ಎಂದು ಹೇಳಿದ್ದಾರೆ. ಮತ್ತು ಈ ಕಲ್ಯಾಣ ಕೋಟೆಯು ಶತ್ರುಗಳ ದಾಳಿಯಿಂದ ಬೇಧಿಸಲು ಸಾಧ್ಯವಿಲ್ಲ ಎಂದು ವರ್ಣಿಸಿದ್ದಾರೆ.

ಇಲ್ಲಿ ಕಲ್ಯಾಣ ಚಾಲುಕ್ಯರ ಮೇಲೆ ಚೋಳರು ನಿರಂತರವಾದ ದಾಳಿಯಿಂದ ಕೋಟೆಯನ್ನು ಮುತ್ತಿಗೆ ಹಾಕಿ ಅವನ್ನು ಸಂಪೂರ್ಣವಾಗಿ ನಾಶಮಾಡಿದ್ದರು. ಅರಮನೆಯನ್ನು ಸುಟ್ಟು ಹಾಕಿರುವ ವಿಷಯವನ್ನು ಚೋಳರ ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಇದರ ಪ್ರತೀಕವಾಗಿ ರಾಜಾಧಿರಾಜ ಚೋಳನಿಗೆ "ವಿಜಯರಾಜೇಂದ್ರ" ಎಂಬ ಬಿರುದು ಬಂದಿತು. ಚೋಳರೊಂದಿಗಿನ ನಾಲ್ಕನೆಯ ಯುದ್ಧ 'ಪುಂಡುರ ಯುದ್ಧ'ದಲ್ಲಿ ಚಾಲುಕ್ಯ ದಂಡನಾಯಕನಾದ ಕಾಳಿದಾಸ ಕೋಮಾರಯ್ಯ ಹಾಗೂ ಅವರ ಸೈನ್ಯ ಸೋತು ಪಲಾಯನ ಮಾಡಿತು. ಅವರನ್ನು ಬೆನ್ನಟ್ಟಿದ ಚೋಳರು ರಾಜ್ಯಧಾನಿಯನ್ನು ಮುತ್ತಿಗೆ ಹಾಕಿ ಅರಮನೆಯನ್ನು ಲೂಟಿ ಮಾಡಿ ಕೊಳ್ಳೆ ಹೊಡಿಯುವುದರ ಮೂಲಕ ಅರಮನೆಗೆ ಬೆಂಕಿ ಹಚ್ಚಿದರು. ಚೋಳರು ತೆಗೆದುಕೊಂಡು ಹೋದ ದೇವಾಲಯದ ಅವಶೇಷಗಳು ಹಾಗೂ ಮೂರ್ತಿ ಶಿಲ್ಪಗಳು ತಂಜಾವೂರ ವಸ್ತು ಸಂಗ್ರಹಾಲಯದಲ್ಲಿ ಕಂಡು ಬರುತ್ತವೆ.

ಮುಂದೆ ಔರಂಗಜೇಬನ ನಿಧನದ ನಂತರ (೧೭೦೭) ಸ್ವತಂತ್ರನಾದ ನಿಜಾಮ್-ಉಲ್-ಮುಲ್ಕನು ಈ ಕೋಟೆಯನ್ನು ತನ್ನ ಅಧೀನಕ್ಕೆ ಒಳಪಡಿಸಿಕೊಂಡನು. ಕೆಲ ಕಾಲದವರಿಗೆ ಈ ಕೋಟೆಯು ಅಹಮ್ಮದ್ ಷಾ ಅಬ್ದಾಲಿಯ ವಶದಲ್ಲಿತ್ತು. ಉದಗೀರದ ದೇಶಮುಖರಾದ ಶಿವಲಿಂಗಪ್ಪನು ಈ ಕಲ್ಯಾಣದ ಕೋಟೆಯನ್ನು ವಶಪಡಿಸಿಕೊಳ್ಳಲು ನಿರಂತರವಾಗಿ ಅಥವಾ ಸತತವಾಗಿ ಪ್ರಯತ್ನವನ್ನು ಮಾಡಿದನು. ಆದರೆ ಬ್ರಿಟಿಷರು ಈ ಭಾಗದಲ್ಲಿ ತಮ್ಮ ಗೆಲವು ಹಾಗೂ ಹಿಡಿತವನ್ನು ಸಾಧಿಸಲು ಕಲ್ಯಾಣ ಕೋಟೆ ಮತ್ತು ಬೀದರ ಕೋಟೆಗಳನ್ನು ವಶಪಡಿಸಿಕೊಂಡರು. ೧೮೫೩ ರಲ್ಲಿ ಬ್ರಿಟಿಷರು ನಿಜಾಮನಿಂದ ಹಣವನ್ನು ಪಡೆದುಕೊಂಡು ಎರಡು ಕೋಟೆಗಳನ್ನು ನಿಜಾಮನಿಗೆ ನೀಡಿದನು. ಅದಿನಿಂದ ಕ್ರಿ. ಶ. ೧೯೪೮ ರವರೆಗೆ ಈ ಕೋಟೆಯು ನಿಜಾಮನ ಆಳ್ವಿಕೆಗೆ ಒಳಪಟ್ಟಿತು. ಸ್ವತಂತ್ರವಾದ ನಂತರವು ಕೋಟೆಯ ಒಳಗಡೆ ಮುಸ್ಲಿಂ ಸಮುದಾಯಗಳು ಈ ಸ್ಥಳವು ನಿಜಾಮ ತಮಗೆ ನೀಡಿದ (ಜಾಗೀರ) ಎಂದು ಅಲ್ಲಿ ದಿನ ನಿತ್ಯ ಪ್ರಾರ್ಥಿಸಿ ಶಾಂತಿ ಹಾಗೂ ಇನ್ನಿತರೆ ಸಾಂಪ್ರದಾಯಿಕ ಚಟುವಟಿಕೆಗಳನ್ನು ಆರಂಭಿಸಿದ್ದರು.

ಪ್ರಸ್ತುತ ಬಸವಕಲ್ಯಾಣ ಕೋಟೆಯು ಬೀದರ ಜಿಲ್ಲೆಯಲ್ಲಿಯೇ ಏಕೈಕ ಗಿರಿದುರ್ಗವಾಗಿದ್ದೂ, ನೈಸರ್ಗಿಕ ಬೆಟ್ಟ, ಗುಡ್ಡವನ್ನು ಬಳಸಿಕೊಂಡು ಅದಕ್ಕೆ ಸುತ್ತುವರಿದಂತೆ ಒಂದು ಬಲಿಷ್ಠವಾದ ಕೋಟೆಯನ್ನು ಕಲ್ಯಾಣ ಚಾಲುಕ್ಯರು ನಿರ್ಮಿಸಿದ್ದರು. ಬೆಟ್ಟದ ವಿಸ್ತಾರಕ್ಕೆ

ತಕ್ಕಂತೆ ಮೂರು ಸುತ್ತಿನ ಗೋಡೆಯನ್ನು ನಿರ್ಮಿಸಿ, ಹೊರ ಗೋಡೆಯ ನಂತರದಲ್ಲಿ ೩೦ ರಿಂದ ೫೦ ಅಡಿ ಅಂತರದಲ್ಲಿ ಕಂದಕವನ್ನು ನಿರ್ಮಿಸಲಾಗಿದೆ. ಒಂದು ಕೋಟೆಗೆ ರಕ್ಷಣೆಯನ್ನು ಒದಗಿರುವುದಕ್ಕಾಗಿ ಇನ್ನೊಂದು ಬೆಟ್ಟದಿಂದ ಹರಿದು ಬರುವ ಮಳೆ ನೀರನ್ನು ಇಲ್ಲಿ ಸಂಗ್ರಹಿಸಿಟ್ಟು ಅದನ್ನು ಸೈನಿಕರು ಬಳಸುವ ಕುದುರೆ, ಆನೆಗಳಿಗೆ ಕುಡಿಯಲು ನೀರು ಹಾಗೂ ಇತರೆ ಕೆಲಸ ಕಾರ್ಯಗಳಿಗೆ ಬಳಸಿಕೊಳ್ಳುತ್ತಿದ್ದರು.

ಸಾಮಾನ್ಯವಾಗಿ ಗಿರಿದುರ್ಗಗಳಲ್ಲಿ ನೀರಿನ ಸಂರಕ್ಷಣೆಯು ಅತ್ಯಂತ ಮಹತ್ವದ ಕಾರ್ಯವಾಗಿರುತ್ತದೆ. ಗುಲಬರ್ಗಾ ಜಿಲ್ಲೆಯಲ್ಲಿ ಇರುವ ಸುಮಾರು ಗಿರಿದುರ್ಗಗಳಲ್ಲಿ ಈ ವ್ಯವಸ್ಥೆ ಕಂಡು ಬರುತ್ತದೆ. ಕೋಟೆಯ ಪ್ರವೇಶ ದ್ವಾರವು ಪೂರ್ವ ದಿಕ್ಕಿಗೆ ಮುಖ ಮಾಡಿಕೊಂಡಿದೆ. ಈ ದ್ವಾರವು ೧೫ ಅಡಿ ಅಗಲ, ೨೫ ಅಡಿ ಎತ್ತರವಾದ ಕಮಾನಿನ ಆಕಾರದಲ್ಲದೆ ಆ ಕಮಾನಿನ ಮೇಲೆ ೮ ಅಡಿ ಎತ್ತರದ ಮೇಲೆ ಮೂರು ಸಮಾನ ಆಕಾರದ ಕಮಾನುಗಳಿವೆ. ಅದರ ಹಿಂಭಾಗದಲ್ಲಿ ಕಾವಲುಗಾರರಿಗೆ ಸ್ಥಳವಿದೆ. ಮೇಲ್ಭಾಗದಲ್ಲಿ ೧೨ ಅಡಿ ಎತ್ತರದ ಮಿನಾರುಗಳಿವೆ. ಪ್ರವೇಶ ದ್ವಾರದ ಎರಡೂ ಬದಿಯಲ್ಲಿ ಚೌಕಾಕಾರದ ಬುರುಜುಗಳು ಇವುಗಳ ಮೂಲಕ ಕೋಟೆಯ ಒಳ ಪ್ರವೇಶಿಸಲು ಚಿಕ್ಕ ದ್ವಾರಗಳಿವೆ. ಬಾಗಿಲುಗಳಿವೆ. ಬಾಗಿಲು ಎತ್ತರಕ್ಕೆ ಈ ಕೊತ್ತಳಗಳಿದ್ದು ಅದರ ಮೇಲ್ಭಾಗದಲ್ಲಿ ಮಿನಾರುಗಳಿವೆ. ಸುಮಾರು ೧೨ ರಿಂದ ೧೫ ಅಡಿ ದಪ್ಪವಾಗಿದ್ದು ಇದರ ಗೋಡೆಯ ಒಳಭಾಗದಲ್ಲಿದೆ ಒಂದು ತಡೆಗೋಟೆ ಇದ್ದು ಬಲಭಾಗದಲ್ಲಿ ಪ್ರವೇಶ ಮಾರ್ಗವಿದೆ. ಅಲ್ಲಿ ಅತ್ಯಂತ ವಿಶಾಲವಾದ ಚೌಕಾಕಾರದ ಸ್ಥಳವಿದೆ. ಅವರ ಸುತ್ತಲು ಕಮಾನುಗಳಿಂದ ನಿರ್ಮಿಸಿದ ೨೫ ಅಡಿ ಎತ್ತರದ ಗೋಡೆ ಇದೆ.

ಒಳಗಡೆ ವಿಶಾಲ ಸ್ಥಳವಿದ್ದು ಈ ಪ್ರಾಂಗಣದಲ್ಲಿ ಉತ್ತರಕ್ಕೆ ಮುಖ ಮಾಡಿಕೊಂಡಿರುವ ೫ ಅಡಿ ಎತ್ತರದ ಮೇಲೆ ೮೦ ರಿಂದ ೬೦ ಅಡಿ ಉದ್ದಗಲದ ವೇದಿಕೆ ಹೊಂದಿದ್ದು. ಇದು ೨೦ ಅಡಿ ಎತ್ತರದ ಎರಡು ಅಂಕಣಗಳನ್ನು ಹೊಂದಿವೆ. ಪ್ರತಿ ಅಂಕಣಕ್ಕೂ ೧೩ ಮರದ ಕಂಬಗಳು ಹೊಂದಿದ ಒಟ್ಟು ೨೬ ಕಂಬಗಳು ಕಟ್ಟಿಗೆಯ ಚಾಟುಪೇಟ ಹಾಗೂ ಸೂಕ್ಷ್ಮವಾಗಿ, ಸುಂದರವಾಗಿ ಕೆತ್ತಲ್ಪಟ್ಟಿವೆ. ಕಟ್ಟಿಗೆಯು ವೃತ್ತಾಕಾರದ ರಚನೆಯಾಗಿದ್ದು ಇದನ್ನು ಸುಂದರವಾಗಿ ಅಲಂಕರಿಸಲಾಗಿದೆ. ಈ ವೇದಿಕೆಯನ್ನು ಪ್ರಾರ್ಥನೆಗೆ ಉಪಯೋಗಿಸಲಾಗುತ್ತದೆ.

ಉಪಸಂಹಾರ : –

ಪ್ರಸ್ತುತ ಬಸವಕಲ್ಯಾಣ ಕೋಟೆಯ ಒಳಗಡೆಯ ರಂಗೀನ ಮಹಲ್ ಮತ್ತು ನೃತ್ಯ ಮಹಲ್ ಅತ್ಯಂತ ವಿಶೇಷವಾಗಿವೆ. ನೃತ್ಯಕ್ಕಾಗಿ ನಿರ್ಮಿಸಿರುವ ವಿಶಾಲವಾದ ಸ್ಥಳವಿದ್ದು. ಹಲವು ಕಂಬಗಳಿಂದ ಗೋಡೆಗಳ ಮೇಲೆ ಸೂಕ್ಷ್ಮವಾಗಿ ವರ್ಣ ಚಿತ್ರಗಳಿಂದ ಅವುಗಳನ್ನು ಸುಂದರವಾಗಿ ಅಲಂಕರಿಸಲಾಗಿದೆ. ಇದು ಆಕರ್ಷಕವಾಗಿ ಕಂಡು ಬರುತ್ತದೆ. ಇದರ ಒಳಗಡೆ ಹಲವು

ಕೂತಡಿಗಳಿದೆ. ಬೀದರನ ಗಗನ ಮಹಲ್ ಹಾಗೂ ರಂಗೀನ ಮಹಲ್‌ನಂತೆಯೇ ಕಂಡುಬರುತ್ತವೆ. ಒಟ್ಟಾರೆಯಾಗಿ ಇಲ್ಲಿ ೧೫ ಅಡಿ ಎತ್ತರದ ವೃತ್ತಾಕಾರದ ಕಂಬಗಳು ಇದ್ದು, ಒಂದು ಪ್ರಾಂಗಣದಲ್ಲಿ ಕಾರಂಜಿ ಹಾಗೂ ಗಾರೆಯಿಂದ ನಿರ್ಮಿಸಿರುವ ಒಂದು ಬಳ್ಳಿ ಉಳಿದುಕೊಂಡಿದೆ. ಕೋಟೆಯ ಮೇಲ್ಭಾಗದಲ್ಲಿ ರಕ್ಷಣೆಗಾಗಿ ಹಲವು ತೋಪುಗಳಿವೆ. ಆದರೆ ಕೋಟೆಯ ಮೇಲ್ಭಾಗದಲ್ಲಿ ೨೫ ಅಡಿ ಉದ್ದವಾದ ಎರಡು ತೋಪುಗಳು ಮತ್ತು ಉಳಿದುಕೊಂಡಿದ್ದು ಅದರಲ್ಲಿ ಒಂದು ಬಹುಮನಿ ಸುಲ್ತಾನರ ಶೈಲಿಯಲ್ಲಿದ್ದರೆ, ಮತ್ತೊಂದು ಆದಿಲ್ ಷಾಹಿಗಳ ಶೈಲಿಯಲ್ಲಿದೆ.

ಒಟ್ಟಾರೆಯಾಗಿ ಬಸವಕಲ್ಯಾಣ ಕೋಟೆಯು ಹತ್ತು ಹಲವಾರು ರಾಜಕೀಯ ಮನೆತನಗಳಿಂದ ಆಳಲ್ಪಟ್ಟು ಕೋಟೆಗೆ ರಕ್ಷಣೆ ಒದಗಿಸಿ ಅವರಿಗೆ ಅನುಕೂಲವಾಗುವಂತೆ ಕೋಟೆಯನ್ನು ನಿರ್ಮಿಸಿರುವುದು ಕಂಡುಬರುತ್ತದೆ.

ಪ್ರಾಚೀನ ಕಾಲದಿಂದಲೂ ಕರ್ನಾಟಕವು ಎಲ್ಲ ಕ್ಷೇತ್ರಗಳಲ್ಲಿ ಗಣನೀಯವೂ. ವಿಶಿಷ್ಟವೂ ಆದ ಕೊಡುಗೆಯನ್ನು ನೀಡಿದೆ. ಧರ್ಮ, ತತ್ವಶಾಸ್ತ್ರ , ವಿಜ್ಞಾನ ವಿವಿದ ಕಲೆಗಳು ಹೀಗೆ ಅನೇಕ ಕ್ಷೇತ್ರಗಳಲ್ಲಿ ಕನ್ನಡಿಗರ ಕಾಣ್ಕೆ – ಜಾಣ್ಮೆಗಳು ಮಹತ್ವಯುತವೂ, ಪ್ರಶಂಸಾರ್ಹವೂ ಆಗಿವೆ. ಹಾಗೆಯೇ ಸಂಸ್ಕೃತ ಸಾಹಿತ್ಯದ ವಿಶಯದಲ್ಲೂ ಕೂಡ ಕರ್ನಾಟಕವು ಹೆಮ್ಮೆ ಪಟ್ಟುಕೊಳ್ಳಬಹುದಾಷ್ಟು ದೊಡ್ಡ ಪ್ರಮಾಣದ ಮತ್ತು ಅಷ್ಟೇ ಗುಣಮಟ್ಟದ ಕೋಡುಗೆಯನ್ನು ಕೊಟ್ಟಿದೆ. ಸಂಸ್ಕೃತ ಸಾಹಿತ್ಯದ ವಿಭಿನ್ನ ಪ್ರಕಾರಗಳಲ್ಲಿ ಕನ್ನಡ ನೆಲದ ಕವಿಗಳು ಸಾಕಷ್ಟು ಕೃತಿ ರಚನೆಗೈದಿರುವದಾದರೂ, ವಿಶೇಷತಃ ಚಂಪೂ ಶೈಲಿಯ ಹಾಗೂ ವಿಶ್ವಕೋಶಾತ್ಮಕ ಕೃತಿಗಳ ರಚನೆಯಲ್ಲಿ ಕರ್ನಾಟಕದ ಕೊಡುಗೆ ಅನನ್ಯವೂ ಅಪೂರ್ವವೂ ಆಗಿದೆ.

ಕರ್ನಾಟಕದ ಪ್ರಸಿದ್ದ ರಾಜವಂಶಗಳಾದ ಕದಂಬ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಗಂಗ, ಸೇವುಣ, ಹೊಯ್ಸಳ ಮತ್ತು ವಿಜಯನಗರದ ಅರಸರು ಹಾಗೂ ಇಕ್ಕೇರಿಯ ನಾಯಕರಂಥ ಹಲವು ಸಾಮಂತ ದೊರೆಗಳು ಶಾಸ್ತ್ರ ಕಲೆ, ಸಾಹಿತ್ಯಗಳ ದೊಡ್ಡ ಅಭಿಮಾನಿಗಳೂ, ಪೊಷಕರೂ ಆಗಿದ್ದರು. ಅವರಲ್ಲಿ ಅದೆಷ್ಟೋ ಜನ ಅರಸರು ಸ್ವತಃ ಕವಿಗಳೂ, ವಿದ್ವಾಂಸರೂ ಆಗಿದ್ದುದನ್ನು ಗಮನಿಸಬಹುದು.

ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಕಾಲವು ಸಂಸ್ಕೃತದ ಅನೇಕ ಉತ್ಕೃಷ್ಟ ಸಾಃಇತ್ಯ ಕೃತಿಗಳು ಮತ್ತು ಶಾಸ್ತ್ರ ಕೃತಿಗಳ ರಚನೆಗೆ ಸಾಕ್ಷಿಯಾಗಿದೆ. ಅನೇಕ ಕಾವ್ಯ, ಕೃತಿಗಲ್ಲದೇ ದರ್ಮಶಾಸ್ತ್ರ, ಆಡಳಿತ, ಸಂಗೀತ, ವ್ಯಾಕರಣ, ಗಣಿತಶಾಸ್ತ್ರ ಮುಂತಾದ ಹಲವು ವಿಭಿನ್ನ ಕ್ಷೇತ್ರಗಳಲ್ಲಿ ವೈಶಿಷ್ಟ

ಪೂರ್ಣವಾದ ಪ್ರೌಢ ಗ್ರಂಥಗಳು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ವಿಫುಲವಾಗಿ ಮೂಡಿ ಬಂದವು. ಸವಿಖ್ಯಾತ ಜೈನಯತಿಯೂ, ಶ್ರೇಷ್ಠ ಕವಿಯೂ ಆಗಿದ್ದು ವಾದಿರಾಜನು ಕ್ರಿ. ಶ ೧೦೧೬ ರಿಂದ ೧೦೪೨ ರ ವರೆಗೆ ಆಳಿದ ಇಮ್ಮಡಿ ಜಯಸಿಂಹನ ಅಸ್ಥಾನದಲ್ಲಿ ವಿಶೇಷ ಗೌರವ ಹಾಗೂ ಮುನ್ನಣೆಯನ್ನು ಪಡೆದಿದ್ದನು. ಇತನು ಷಣ್ಮುಖನೆಂಬ ಹೆಸರಿನಿಂದಲೂ ಕರೆಯಲ್ಪಡುತ್ತಿದ್ದನಲ್ಲದೇ ದ್ವಾದಶ ವಿದ್ಯಾಪತಿ ಎಂದೂ ಹೆಸರುವಾಗಿದ್ದನು. ಪ್ರಾಯಃ ಹನ್ನೆರಡು ವಿದೆ ಅಥವಾ ಶಾಸ್ತ್ರಗಳ ಮೇಲೆ ಪ್ರಭುತ್ವವನ್ನು ಅವನು ಸಾದಿಸಿದ್ದಿರಬಹುದು ಎಂಬುದನ್ನು ಇದು ಸೂಚಿಸುತ್ತದೆ. ಆದರೆ ಇವನ ನಿಜವಾದ ಹೆಸರುದ್ದುದು ಕನಕಸೇನ ಭಟ್ಟಾರಕ ಎಂದು. ಅನೇಕ ಜೈನ ಶಾಸನಗಳು, ಇವನನ್ನು ಮಹಾಜ್ಞಾನಿ ಕವಿ, ವಾದಕೋವಿದ ಮತ್ತು ಮುನಿ ಶ್ರೇಷ್ಠನೆಂದು ಹಾಡಿ ಹೊಗುಳುತ್ತವೆ.

ಶಿಲಾಶಾಸನಗಳ ಸಂಖ್ಯೆ ತುಂಬ ದೊಡ್ಡದು. ಅದ್ಯಾಗೂ ಕಲ್ಯಾಣ ಚಾಲುಕ್ಯರ ಕಾಲದ ಕೆಲವು ಸಂಸ್ಕೃತ ಶಾಸನಗಳು ಸಾಹಿತ್ಯಿಕ ದೃಷ್ಟಿಯಿಂದ ಮಹತ್ವ ಪಡೆದವುಗಳಾಗಿವೆ.ಉದಾಹರಣೆಗೆ, ಇಂದಿನ ಮಹಾರಾಷ್ಟ್ರ ರಾಜ್ಯದ ನಾಂದೇಡ ಜಿಲ್ಲೆಯ ದೆಗಲೂರ ತಾಲೂಕಿನ ಹೊಟ್ಟೂಲ ಎಂಬ ಗ್ರಾಮದಲ್ಲಿ ದೊರೆತ ಸಂಸ್ಕೃತ ಶಾಸನವೊಂದು ಅಭಿಜಾತ ಕಾವ್ಯ ಶೈಲಿಯಲ್ಲಿ ರಚಿತವಾಗಿದೆ. ಈ ಶಾಸನದಲ್ಲಿ ಅದರ ಕಾಲನಿರ್ದೇಶನವಿಲ್ಲ. ಆದರೆ ಶಾಸನವನ್ನು ಸಂಪಾದಿಸಿದ ಡಾ. ಶ್ರೀನಿವಾಸ ರೀತಿಯವರು ಅದು ಎರಡನೇ ಸೋಮೇಶ್ವರನ ಕಾಲಕ್ಕೆ (ಕ್ರಿ. ಶ ೧೦೬೮-೧೦೭೬) ಸೇರಿದುದೆಂದು ನಿರ್ಣಯಿಸಿದ್ದಾರೆ. ಶಾಸನದ ಪಠ್ಯವು ಒಟ್ಟು ೪೩ ಸಂಸ್ಕೃತ ಪದ್ಯಗಳಲ್ಲಿ ರಚಿತವಾಗಿದೆ. ಶಾಸನದಲ್ಲಿ ಅದರ ಕವಿಯ ಹೆಸರಿನ ಉಲ್ಲೇಖವಿಲ್ಲ ಶಾಸನದ ಕೊನೆಗೆ ಲಕ್ಷ್ಮಣಎಂಬುವವನೂ ಶಾಸನವನ್ನು ಬರೆದವನು ಬರೆದವನು (ಲಿಖಿತಂ ಲೇಖಜ - ಲಕ್ಷ್ಮಣೇನ) ಎಂದು ಹೇಳಲಾಗಿದ್ದರೂ ಅವನು ಕೇವಲ ಶಾಸನದ ಪಠ್ಯವನ್ನು ಕಲ್ಲಿನ ಮೇಲೆ ಬರೆದವನಾಗಿರಬೇಕೆ ಹೊರೆತು ಕವಿಯಾಗಿರಲಾರ. ಅಜ್ಞಾತನಾಗಿದ್ದರೂ ಈ ಶಾಸನದ ಕವಿಯು ಶ್ಲಾಘ್ಯವಾದ ಕಾವ್ಯ ಪ್ರತಿಭೆಯನ್ನು ತೋರಿದ್ದಾನೆ. ಶಾಸನವನ್ನು ಒಂದು ಪುಟ್ಟ ರಸವತ್ಕಾವ್ಯವನ್ನಾಗಿಸುವ ಪ್ರಯತ್ನ ಮಾಡಿದ್ದಾನೆ. ಕಾವ್ಯಶಾಸ್ತ್ರಾನುಸಾರವಾಗಿ ವಿಭಿನ್ನ ಛಂದಸ್ಸುಗಳನ್ನೂ, ಅಲಂಕಾರಗಳನ್ನೂ ಬಳಿಸಿದ್ದಾನೆ. ಶಾರ್ದೂಲವಿಕ್ರೀಡಿತ, ಸ್ರಗ್ಧರಾ, ವಸಂತತಿಲಕ, ಮಂದಾಕ್ರಾಮತ, ಸ್ವಾಗತ, ಇಂದ್ರವಜ್ರ, ಉಪಜಾತಿ ಮತ್ತು ಅನುಷ್ಟುಪ್- ಹಿಗೇ ಎಂಟು ಬಗೆಯ ಛಂದಸ್ಸುಗಳನ್ನು ಇಲ್ಲಿ ಉಪಯೋಗಿಸಿಲಾಗಿದೆ. ಕವಿ ಮತ್ತು ಕಾವ್ಯದ ಬಗೆಗಿರುವ ಅಪಾರ ಅಭಿಮಾನ ಮತ್ತು ಶ್ರದ್ಧೆಯನ್ನು ಶಾಸನದ ರಚನಾಕಾರನು ಹೀಗೆ ಪ್ರಕಟಪಡಿಸುತ್ತಾನೆ.

ಬಸವಕಲ್ಯಾಣ ಚಾಲುಕ್ಯರ ಕಾಲದ ಸಂಸ್ಕೃತ ಸಾಹಿತ್ಯ

ಡಾ. ಕೇಯೂರ ಕರಗುದರಿ

ಕವ್ಯಾಮೃತೈವಾರ್ಥ ಕಥಾಮೃತೈರ್ವಾ ಅದ್ಯಾಪಿ ಜೀವಂತ
ಮೃತಾ ಮಹೀಶಾಃ!
ಪೂರ್ವಪ್ರಸಾದಾತ್ಕವಿಪುಂಗವಾನಾಂ ನೃಪಸ್ಯ
ತಸ್ಮಾತ್ಕವಿರೇವ ಮಿತ್ರಮ್ !!

(ಮೃತರಾದ ರಾಜರು, ಕವಿವರೇಣ್ಯರು ರಚಿಸಿದ ಕಾವ್ಯಮೃತದಿಂದಲೇ ಇಂದಿಗೂ ಜಿವಂತವಾಗಿದ್ದಾರೆ. ಹಾಗಾಗಿ ಕವಿಯೇ ರಾಜನ ನಿಜವಾದ ಮಿತ್ರನು) ಈ ಶ್ಲೋಕವನ್ನು ಈ ಹಿಂದೆ ಉಲ್ಲೇಖಿಸಲಾಗಿರುವ ಬಿಲ್ಹಣನು ವಿಕ್ರಮಾಂಕ ದೇವಚರಿತದ 'ಸ್ವೇಚ್ಛಾಭಂಗುರಭಾಗ್ಯ ...' ಎಂಬ ಪದ್ಯದೊಂದಿಗೆ ಹೋಲಿಸಬಹುದು. ತನ್ನ ಒಡೆಯನಾದ ಸಿದ್ದುಗಿ ಎಂಬುವವನನ್ನು ಅತಿಶಯವಾಗಿ ಕೊಂಡಾಡುತ್ತ ಕವಿಯು ಹೀಗೆ ಹೇಳುತ್ತಾನೆ. – ಶ್ರೀ ಸಿದ್ದುಗಿಯು

ಸ್ವೇಚ್ಛಾಭಂಗುರಬಾಗ್ಯಮೇಘತಡಿತ : ಶಕ್ಯಾನ ರೋದ್ಧುಂ
ಶ್ರಿಯಃ
ಪ್ರಾಣಾನಾಂಸತತಂ ಪ್ರಯಾಣಪಟಹಶ್ರದ್ಧಾನ ಮಿಶ್ರಾಮ್ಯತಿ !
ತ್ರಾಣಂ ಯೇತ್ರ ಯಶೋಮಯೇ ವಪು ವಃ ಕುರ್ವಂತಿ
ಕಾವ್ಯಾಮೃತೈಃ
ತಾನಾರಾಧ್ಯ ಗುರೂನ್ವಿಧತ್ತ ಸುಕವೀನ್ ನಿರ್ಗರ್ವ
ಮುರ್ವೀಶ್ವರಾ : !!

ಆರನೇ ವಿಕ್ರಮಾದಿತ್ಯನ ಆಶ್ರಯದಲ್ಲಿ ಬೆಳೆದು ದೊಡ್ಡ ಹೆಸರನ್ನುಗಳಿಸಿದ ಮತ್ತೊಬ್ಬ ಸಂಸ್ಕೃತ ವಿದ್ವಾಂಸನೆಂದರೆ ವಿಜ್ಞಾನೇಶ್ವರ. ಈತನು ಯಾಜ್ಞವಲ್ಕ್ಯಸ್ಮೃತಿಗೆ ಮಿತಾರಾ ಎಂಬ ಅತ್ಯಂತ ಪಾಂಡಿತ್ಯ ಪೂರ್ಣವಾದ ವ್ಯಾಖ್ಯಾನವನ್ನು ಬರೆದಿದ್ದಾನೆ. ಬಾರತೀಯ ಧರ್ಮಶಾಸ್ತ್ರ (ಕಾನೂನು) ಪರಂಪರೆಯಲ್ಲಿ ಇದಕ್ಕೆ ಅತ್ಯಂತ ಮಹತ್ವ ಪುರ್ಣವಾದ ಸ್ಥಾನವಿದ್ದು ಜಗತ್ತಿನೆಲ್ಲೆಡೆ ಪ್ರಸಿಧ್ಧಿಯನ್ನು ಗಳಿಸಿದೆ. ಮಿತಾಕ್ಷರದ ಕುರಿತಾಗಿ ಮಹಾಮಹೋಪಾಧ್ಯಾಯ ಡಾ. ಪಿ.ವಿ. ಕಾಣೆಯವರು ಹೀಗೆ ಹೇಳುತ್ತಾರೆ. " ಸಮಗ್ರ ಧರ್ಮಶಾಸ್ತ್ರವಾಙ್ಮಯದಲ್ಲಿ ಮಿತಾಕ್ಷರಾ ವ್ಯಾಖ್ಯಾನಕ್ಕಿರುವ ಸ್ಥಾನಮಾನವು ಅನ್ಯಾದೃಶ್ಯವಾದುದ್ದು. ಇದು ವ್ಯಾಕರಣ ಶಾಸ್ತ್ರದಲ್ಲಿ ಪತಂಜಲಿಯ ಮಹಾಭಾಷ್ಯಕ್ಕೊ, ಕಾವ್ಯಶಾಸ್ತ್ರದಲ್ಲಿ ಮಮ್ಮಟನ ಕಾವ್ಯಪ್ರಕಾಶಕ್ಕೊ ಇರುವ ಸ್ಥಾನಮಾನಕ್ಕೆ ಸಂವಾದಿಯಾಗಿದೆ. ಸಾವಿರಾರು ವರ್ಷಗಳಿಂದ ಮುಂದುವರೆದುಕೊಂಡು ಬಂದಿರುವ ಧರ್ಮಶಾಸ್ತ್ರದ ಸೂಕ್ಷ್ಮಾತಿಸೂಕ್ಷ್ಮವಾದ ತಾರ್ಕಿಕ ಚರ್ಚೆ, ವಿಮರ್ಶೆಗಳ ಸಾರವನ್ನು ಅದು ಪ್ರತಿನಿಧಿಸುತ್ತದೆ. ಭಾರತೀಯ ಸಂವಿಧಾನದ ರಚನೆಯಲ್ಲಿ, ಹಿಂದೂ ಕಾನೂನಿಗೆ ಸಂಬಂಧಿಸಿದ ದತ್ತು ಸ್ವೀಕಾರ,

ವಾರಸುದಾರಿಕೆ, ಆಸ್ತಿ ಹಂಚಿಕೆ ಹೀಗೆ ಅನೇಕ ವಿಷಯಗಳನ್ನು ನಿರ್ಣಯಿಸುವಾಗ ಮಿತಾಕ್ಷರವು ಒಂದು ಅಧಿಕೃತವಾದ ಪ್ರಮಾಣವಾಗಿ ಪರಿಗಣಿಸಲ್ಪಟ್ಟಿರುವುದನ್ನು ಕಾಣಬಹುದು ವಿಜ್ಞಾನೇಶ್ವರನು ತನ್ನ ಮಿತಾಕ್ಷರಾ ಕೃತಿಯ ಬಗ್ಗೆ ಅದರ ಕೊನೆಯಲ್ಲಿ ಹೀಗೆ ಹೇಳಿಕೊಂಡಿದ್ದಾನೆ.

ಇತಿ ಯಾಜ್ಞವಲ್ಕ್ಯಮುನಿಆಸ್ತ್ರಗತಾ ವಿವೃತಿರ್ನ ಕಸ್ಯ ವಿಹಿತಾ

ವಿದುಷಃ

ಪ್ರಮಿತಾಕ್ಷರಾಪಿ ವಿಪುಲಾರ್ಥವತೀ ಪರಿಷಿಂಚತಿ

ಶ್ರವಣಯೋರಮೃತಮ್

ಮಿತಾಕ್ಷರವು ಕೇವಲ ಯಜ್ಞವಲ್ಕಸ್ಮೃತಿಯ ಮೇಲಿನ ವ್ಯಾಖ್ಯಾನವಷ್ಟೇ ಆಗಿರದೇ, ಪೂರ್ವ ಮೀಮಾಂಸಾಶಾಸ್ತ್ರ ವಿಹಿತವಾದ ಭಾಷ್ಯ – ವ್ಯಾಖ್ಯಾನನಿಯಮಗಳಿಗೆ ಅನುಸಾರವಾಗಿ ವಿವಿಧ ಸ್ಮೃತಿಗಳ ನಡುವೆ ಇರುವ ಸಾಮ್ಯ – ವೈಷಮ್ಯಗಲ ವಿವರಣೆಯನ್ನೂ ನೀಡುವ ಮೂಲಕ ಧರ್ಮಶಾಸ್ತ್ರಾಧ್ಯೇತ್ಯಗಳಿಗೆ ಒಂದು ಪರಮೋಪಕಾರಿಯಾದ ಕೈಪಿಡಿಯಾಗಿದೆ.

ಕಲ್ಯಾಣ ಚಾಲುಕ್ಯರ ಕಾಲದಲ್ಲಿಯೇ ಅಪರಾರ್ಕನೆನ್ನುವ ಮತ್ತೋರ್ವ ಘನ ವಿದ್ವಾಂಸನು ಯಾಜ್ಞವಲ್ಕ್ಯ ಸ್ಮೃತಿಯ ಮೇಲೆ **ಯಾಜ್ಞಾವಲ್ಕೀಯಧರ್ಮಶಾಸ್ತ್ರನಬಂಧನಮ್** ಎಂಬ ಪ್ರಗಲ್ಬವಾದ ವ್ಯಾಖ್ಯಾನವನ್ನು ಬರೆದನು. ಇದು ಮಿತಾಕ್ಷರದಂತಲ್ಲದೇ ಗಾತ್ರದಲ್ಲಿ ತುಂಬ ದೊಡ್ಡದಾಗಿದ್ದು ಗೃಹ್ಯಸೂತ್ರಗಳು, ಧರ್ಮಸೂತ್ರಗಳು, ಸ್ಮೃತಿಗಳು ಹಾಗೂ ಪುರಾಣಗಳೇ ಮೊದಲಾದವುಗಳ ವಾಕ್ಯಗಳನ್ನು ಧಾರಾಳವಾಗಿ ಉದ್ಧರಿಸಲಾಗಿದೆ. ಈ ಅಪರಾರ್ಕನು ಅಪರಾದಿತ್ಯನೆಂಬ ಹೆಸರಿನಿಂದಲೂ ಪ್ರಸಿದ್ಧನಾಗಿದ್ದು ಕೊಂಕಣ ಭಾಗದಲ್ಲಿ ಆಳುತ್ತಿದ್ದ ಶಿಲಾಹಾರ ರಾಜಮನೆತನೆಕ್ಕೆ ಸೇರಿದವನಾಗಿದ್ದನು.

ಆರನೇ ವಿಕ್ರಮಾದಿತ್ಯನ ಮಗನಾದ ಭೂಲೋಕಮಲ್ಲ ಸೋಮೇಶ್ವರ ಅಥವಾ ಮೂರನೇ ಸೋಮೇಶ್ವರನು ಸ್ವತಃ ದೊಡ್ಡ ಸಂಸ್ಕೃತ ಪಂಡಿತನಾಗಿದ್ದನು. ಈತನು ರಚಿಸಿದ ಮಾನಸೋಲ್ಲಾಸ ಅಥವಾ ಅಭಿಲಷಿತಾರ್ಥಚಿಂತಾಮಣಿ ಜಗತ್ಪ್ರಸಿದ್ಧವಾಗಿದೆ. ಪ್ರಾಯಃ ಇದನ್ನು ಸಂಸ್ಕೃತದ ಮೊದ ವಿಶ್ವಕೋಶಾತ್ಮಕ ಕೃತಿಯೆನ್ನಬಹುದು. ಸಮಾಜದ ಎಲ್ಲ ವರ್ಗಗಳಿಗೂ ಸಂಬಂಧಿಸಿದ ವಿಷಯಗಳನ್ನು ಇದು ಒಳಗೊಂಡಿದೆ. ಇದೊಂದು ಬೃಹತ್ ವಿಶ್ವಕೋಶವಾಗಿದ್ದು, ಪ್ರತಿಯೊಂದರಲ್ಲೂ ಇಪ್ಪತ್ತು ಉಪವಿಭಾಗಗಳುಳ್ಳ ಐದು ಅಧ್ಯಾಯಗಳಲ್ಲಿ ಒಟ್ಟು ೮೦೦೦ ಶ್ಲೋಕಗಳನ್ನು ಒಳಗೊಂಡಿದೆ. ಈ ರೀತಿಯಲ್ಲಿ ಮಾನಸೋಲ್ಲಾಸವು ಒಟ್ಟು ನೂರು ಅಧ್ಯಾಯಗಳನ್ನು ಹೊಂದಿದ್ದು ವೈದ್ಯಶಾಸ್ತ್ರ, ಸಂಗೀತ ಶಾಸ್ತ್ರ, ಮನೋರಂಜನೆ ಮುಂತಾದವುಗಳೂ

ಸೇರಿದಂತೆ ಒಟ್ಟು ನೂರು ವಿವಿಧ ವಿಷಯಗಳನ್ನು ಒಳಗೊಂಡಿದೆ. ವಿಶೇಷವಾಗಿ ರಾಜಪರಿವಾರದ ಸದಸ್ಯರ ಶಿಕ್ಷನಕ್ಕಾಗಿ ಈ ಗ್ರಂಥವು ರಚಿತವಾಗಿರುವುದೆಂದು ತೋರುತ್ತದೆ. ಮಾನಸೋಲ್ಲಾಸಕಾರನು ಅದರ ಮೊದಲ ಅಧ್ಯಾಯವನ್ನು ರಾಜ್ಯ ಪ್ರಾಪ್ತಿಕರಣವಿಂಶತಿ ಎಂದು ಹೆಸರಿಸಿದ್ದಾನೆ.

ಈ ಅಧ್ಯಾಯವು ಸಾಮ್ರಾಜ್ಯವನ್ನು ಪಡೆದುಕೊಳ್ಳಲು ಬೇಕಾದ ಸಾಧನ, ಮಾರ್ಗೋಪಾಯಗಳನ್ನು ಕುರಿತು ವಿವರಿಸುತ್ತದೆ. ಎರಡನೆಯ ಅಧ್ಯಾಯಾದ ಹೆಸರು ಪ್ರಾಪ್ತರಾಜ್ಯಸ್ಥಿರೀಕರಣ ವಿಂಶತಿ ಎಂದು. ಹೆಸರೇ ಸುಚಿಸುವಂತೆ ಗಳಿಸಿಕೊಂಡ ಸಾಮ್ರಾಜ್ಯವು ಸುಭದ್ರವಾಗಿ ನೆಲೆಗೊಳ್ಳಲು ಬೇಕಾದ ಉತ್ತಮ ವ್ಯವಸ್ಥೆ ಮತ್ತು ಅದರ ನಿರ್ವಹಣೆಯ ಕುರಿತಾಗಿ ಈ ಅಧಾಯವು ಹೇಳುತ್ತದೆ. ಮೂರನೆಯ ಅಧ್ಯಾಯವು ಉಪಭೋಗವಿಂಶತಿ ಎಂದಿದ್ದು ಇದರಲ್ಲಿ ಮುಖ್ಯವಾಗಿ ವಾಸ್ತುಶಿಲ್ಪ, ಚಿತ್ರಕಲೆ ಮುಂತಾದ ವಿಷಯಗಳ ವಿಸ್ತಾರವಾದ ವಿವರಣೆಯಿದೆ. ನಾಲ್ಕನೆಯ ಅಧ್ಯಾಯವಾದ ವಿನೋದ ವಿಂಶತಿಯು ವಿವಿಧ ಪ್ರಕಾರದ ಮನೋರಂಜನೆ ಹಾಗೂ ವೈನೋದಿಕ ಸಾಧನಗಳ ವಿಶದವಾದ ವಿವರಣೆಯನ್ನೊಳಗೊಂಡಿದೆ. ಐದನೆಯ ಹಾಗೂ ಕೊನೆಯ ಅಧ್ಯಾಯವು ಕ್ರೀಡೆಗಳನ್ನು ಕುರಿತಾಗಿದೆ. ಮಾನಸೋಲ್ಲಾಸಕಾರನು ಸಂಗೀತಕ್ಕೆ ಅಗ್ರತಾಂಬೂಲವನ್ನಿತ್ತಿದ್ದು ಒಟ್ಟು ೨೫೦೦ ಶ್ಲೋಕಗಳನ್ನು ಸಂಗೀತಶಾಸ್ತ್ರ ಮತ್ತು ವಿವಿಧ ಸಂಗೀತೋಪಕರಣಗಳಿಗಾಗಿ ವಿನಿಯೋಗಿಸಿದ್ದಾನೆ. ಪ್ರಬಂಧಗಳೇ ಮೊದಲಾದ ಸಂಗೀತದ ವಿಶಿಷ್ಟ ಸಂಗತಿಗಳನ್ನೂ ಚರ್ಚಿಸಿದ್ದಾನೆ. ಎಂ ಕೃಷ್ಣಮಾಚಾರಿಯರ್ ಅವರು ಈ ಕುರಿತಾಗಿ ಹೀಗೆ ಬರೆಯುತ್ತಾರೆ – ಸೋಮೇಶ್ವರನು ಮಾನಸೋಲ್ಲಾಸದಲ್ಲಿ ಸಂಗೀತದೆಡೆಶಿ ವಿಷಯದಲ್ಲಿ ಆಸಕ್ತಿಹಾಗೂ ಶ್ರದ್ಧೆಯನ್ನು ತೋರಿದಾನೆ ಇದರ ಪ್ರಭಾವ ಯಾವ ಮಟ್ಟದೆಂದರೆ ಆತನು ಕರ್ನಾಟಕದ ದೊರೆಯಾದ್ದರಿಂದ ದಕ್ಷಿಣ ಭಾರತೀಯ ಸಂಗೀತ ಕರ್ನಾಟಕ ಪ್ರಚಾರಕೆ ಬಂದಿತ್ತು ಇದರ ಮುಂದೆ ಮಾನಸೋಲ್ಲಾಸವು ಆ ಕಾಲದಲ್ಲಿ ವಿಭಿನ್ನ ವಿಷಯಗಳ ಬಗ್ಗೆ ಇದ್ದ ಜ್ಞಾನಪಸ್ತರವನ್ನು ಅರಿಯುವ ನಿಟ್ಟಿನಲ್ಲಿ ಒಂದು ಹೆಗ್ಗುರುತಾಗಿ ನಿಲ್ಲುತ್ತದೆ. ಮೂರನೇ ಸೋಮೇಶ್ವರನು **ವಿಕ್ರಾಮಾಂಕಾಭ್ಯುದಯ** ಎಂಬ ಗದ್ಯಕಾವ್ಯವೊಂದನ್ನೂ ರಚಿಸಿದ್ದಾನೆ. ಆದರೆ ಅದು ಪೂರ್ಣವಾಗಿ ಉಪಲಬ್ಧವಿಲ್ಲ. ಬಿಲ್ಹಣನ ವಿಕ್ರಮಾದಿತ್ಯನ ಯಶೋಗಾಥೆಯನ್ನು ವಿಷಯ ವಸ್ತುವನ್ನಾಗಿ ಹೊಂದಿದೆ.

ಕಲ್ಯಾಣ ಚಾಲುಕ್ಯರ ಕಾಲದ ಮತ್ತೊಬ್ಬ ಅಪ್ರತಿಮ ಪ್ರತಿಭಾಶಾಲಿಯಾದ ವಿದ್ವತ್ಕವಿ ವಿದ್ಯಾಮಾಧವ. ನಾಲ್ಕನೇ ಸೋಮೇಶ್ವರನ ಆಸ್ಥಾನದಲ್ಲಿದ್ದ ಇವನು ಪಾರ್ವತಿ ರುಕ್ಮಣೀಯಮ್ ಎಂಬ ಪ್ವಾಶಶ್ರಯಕಾವ್ಯವನ್ನು ರಚಿಸಿದ್ದಾನೆ. ಶಿವ – ಪಾರ್ವತಿ ಹಾಗೂ ಕೃಷ್ಣ – ರುಕ್ಮಣೀಯರ ವಿವಹಾದ ಕಥೆಯನ್ನು ದ್ವಿಸಂಧಾನ ರೂಪದಲ್ಲಿ ಚಮತ್ಕಾರಿಕವಾಗಿಯೂ ಮನೋಹರವಾಗಿಯೂ ವರ್ಣಿಸುವ ಈ ಮಹಾಕಾವ್ಯವು ಒಂಬತ್ತು ಸರ್ಗಗಳಲ್ಲಿ ರಚಿಸಲ್ಪಟ್ಟಿದೆ.

ಕಲ್ಯಾಣ ಚಾಲುಕ್ಯ ವಂಶದ ಮತ್ತೊಬ್ಬ ರಾಜ ಇಮ್ಮಡಿ ಜಗದೇಕಮಲ್ಲನು ಸಂಗೀತಚೂಡಾಮಣಿ ಎಂಬ ಸಂಗೀತಶಾಸ್ತ್ರಗ್ರಂಥವೊಂದನ್ನು ರಚಿಸಿದ್ದಾನೆ. ಕಲ್ಯಾಣ ಚಾಲುಕ್ಯರ ಸಾಮಂತರಾಗಿದ್ದ ಸೌಂದತ್ತಿ ರಟ್ಟ ಅರಸರ ಆಶ್ರಯದಲ್ಲಿದ ಪಾರ್ಶ್ವದೇವನೆಂಬ ಜೈನಾಚಾರ್ಯನು ಸಂಗೀತ ಸಮಯಸಾರ ವೆಂಬ ಕೃತಿಯನ್ನು ರಚಿಸಿದ್ದಾನೆ.

ಶಾಸನ ಸಾಹಿತ್ಯ, ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಸಂಸ್ಕೃತ ಶಾಸನಗಳ ಸಂಖ್ಯೆ ತುಂಬ ಕಡಿಮೆ ಎಂದೇ ಹೇಳಬೇಕು. ಆ ಕಾಲಕ್ಕಾಗಲೇ ಕನ್ನಡವು ಜನಪ್ರಿಯ ಶಾಸನ ಭಾಷೆಯಾಗಿ ಹೊರಹೊಮ್ಮಿತ್ತು. ಅಲ್ಲದೇ ಆ ಕಾಲದ ತಾಮಪತ್ರ ಶಾಸನಗಳಿಗೆ ಹೋಲಿಸಿದರೆ ಶ್ರವಣಬೆಳಗೊಳದ ಸಂಸ್ಕೃತ ಶಾಸನವೊಂದು ಪದ್ಯವೊಂದನ್ನು ಇಲ್ಲಿ ಉದಾಹರಣೆಗಾಗಿ ನೋಡಬಹುದು

ವಾಗ್ದೇವಿ ಸುಚಿರಪ್ಯೋಗಸುದೃಢಪ್ರೇಮಾಣಮಪ್ಯಾದರಾದಾದತ್ತೇ
ಮಮ ಪಾರ್ಶ್ವತೋಯಮಧುನಾ
ಶ್ರೀವಾದಿರಾಜೋ ಮುನಿಃ!
ಭೋ ಭೋ ಪಶ್ಯತ ಪಶ್ಯತೈಷ ಯಮಿನಾಂ ಕೀ ಧರ್ಮ
ಇತ್ಯುಚ್ಚಕೈ-
ರಬ್ರಹ್ಮಣ್ಯಪರಾ ಪುರಾತನಮುನೇರ್ವಾಗ್ವೃತ್ತಯ : ಪಾರಿತು
ವಃ!!

ಈ ಕನಕಸೇನ ಭಟ್ಟಾರಕನು **ಯಶೋಧರಚರಿತ** ಮತ್ತು **ಪಾರ್ಶ್ವನಾಥಚರಿತ** ಗಳೆಂಬ ಎರಡು ಸುಂದರವಾದ ಕಾವ್ಯಗಳನ್ನು ರಚಿಸಿದ್ದಾನೆ. ಜೈನ ಮತಾನುತಾಯಿಯಾಗಿದ್ದು ರಾಜರ್ಷಿಯಂತಿದ್ದ ಉಜ್ಜಯಿನಿಯ ಅರಸು ಯಶೋಧರನ ಜೀವನಗಾಥೆಯೇ ಯಶೋಧರಚರಿತ ಮತ್ತು ಪಾರ್ಶ್ವನಾಥಚರಿತಗಳೆರಡೂ ಕಾಳಿದಾಸನ ಮಹಾಕಾವ್ಯಗಳ ನಂತರ ಬಂದ ಆ ಮಾದರಿಯ ಉತ್ತಮ ಕಾವ್ಯಕೃತಿಗಳೆಂದು ಡಾ. ಕೆ. ಕೃಷ್ಣಮೂರ್ತಿಯವರು ಅಭಿಪ್ರಾಯ ಪಡುತ್ತಾರೆ. ಇವಲ್ಲದೇ ವಾದಿರಾಜನು **ನ್ಯಾಯವಿನಿಶ್ಚಯ ವಿವರಣ, ಪ್ರಮಾಣನಿರ್ಣಯ** ಮತ್ತು **ಏಕೀಭಾವಸ್ತೋತ್ರಗಳೆಂಬ** ಕೃತಿಗಳನ್ನು ರಚಿಸಿದ್ದಾನೆ. ಪಾರ್ಶ್ವನಾಥಚರಿತದಲ್ಲಿ, ವಾದಿರಾಜನಯ ತಾನು ಆ ಕಾವ್ಯವನ್ನು ಶಕ ೯೪೭ (ಕ್ರಿ. ಶ ೧೦೨೫) ರಲ್ಲಿ ದೊರೆ ಜಯಸಿಂಹನ ಆಶ್ರಯದಲ್ಲಿ ಬರೆದನೆಂದೂ ಮತ್ತು ಶ್ರೀಪಾಲಮುನಿಯ ಶಿಷ್ಯನಾಗಿದ್ದ ಮತಿಸಾಗರನು ತನ್ನ ಗುರುವೆಂಥೂ ಹೇಳಿಕೊಂಡಿದ್ದಾನೆ. ವಾದಿರಾಜನಿಗೆ ಸಮಕಾಲೀನನಾಗಿದ್ದ ಮತ್ತೊಬ್ಬ ಜೈನಯತಿ

ದಯಾಪಾಲಮುನಿಯು **ರೂಪಿಸಿದ್ಧಿ** ಎಂಬ ವಿದ್ವತ್ಪೂರ್ಣವಾದ ಸಂಸ್ಕೃತಿ ವ್ಯಾಕರಣ ಗ್ರಂಥವೊಂಧನ್ನು ಬರೆದಿದ್ದಾನೆ. ಈ ವ್ಯಾಕರಣ ಗ್ರಂಥವು ಶಾಕಟಾಯನ ಅಥವಾ ಪಾಲ್ಯಕೀರ್ತಿಯ (ಕ್ರಿ. ಶ ೮೧೭-೮೭೭) ಸಂಪ್ರದಾಯಕ್ಕೆ ಸೇರಿದುದ್ದಾಗಿದೆ. ಈ ದಯಾಪಾಲಮುನಿಯು ತನ್ನ ಗುರು ಮತಿಸಾಗರರ ಬಳಿಯಲ್ಲಿ ವಿದ್ಯಾರ್ಜನೆ ಮಾಡುತ್ತಿದ್ದಾಗ ವಾದಿರಾಜನು ಸಹಪಾಠಿಯಾಗಿದ್ದನೆಂದು ತಿಳಿದು ಬರುತ್ತದೆ. ಇದಕ್ಕೆ ಸಮರ್ಥನೆಯಾಗಿ ಶ್ರವಣಬೆಳಗೊಳದ ಪಾರ್ಶ್ವನಾಥ ಬಸದಿಯಲ್ಲಿನ ಶಾಸನವೊಂದು, ಗುರು ಮತಿಸಾಗರರಿಗೆ ದಯಾಪಾಲಮುನಿ ಹಾಗೂ ವಾದಿರಾಜ ಎಂಬ ಇಬ್ಬರು ಪ್ರತಿಭಾಶಾಲಿಗಳಾದ ಶಿಷ್ಯರಿದ್ದರೆಂದು ತಿಳಿಸುತ್ತದೆ.

ಯಸ್ಯ ಶ್ರೀ ಮತಿಸಾಗರೋ ಗುರುರಸೌ
ಚಂಚದ್ಯಶಶ್ಚಂದಸೂಃ
ಶ್ರೀಮಾನ್ಯಸ್ಥ ಸ ವಾದಿರಾಜಗುಣಭೃತ್ ಸಬ್ರಹ್ಮಚೌರೀ
ವಿಭೋಃ
ಏಕೋತೀವ ಕೃತೀ ಸ ಏವ ಹಿ ದಯಾಪಾಲವ್ರತೀ ಯನ್ಮನ-
ಸ್ಯಸ್ತಾಮನ್ಯಪರಿಗ್ರಹಗ್ರಹಕಥಾ ಸ್ವೇ ವಿಗ್ರಹೇ ವಿಗ್ರಹ ಃ

ವಾದೀಭಸಿಂಹನೆಂಬ ಮತ್ತೋರ್ವ ಜೈನಕವಿಯು ಹಲವಾರು ಶ್ರೇಷ್ಠ ಸಂಸ್ಕೃತ ಕೃತಿಗಳನ್ನು ರಚಿಸುವ ಮೂಲಕ ಸಂಸ್ಕೃತವಾಙ್ಮಯಕ್ಕೆ ಸಂಪ್ರದಾಯಕ್ಕೆ ಕರ್ನಾಟಕದ ಕೋಡುಗೆಯನ್ನು ವಿಸ್ತಿರಿಸಿದ್ದಾನೆ ಈತನು ದಿಶಿಬಿರ ಜೈನ ಸೇರಿದದವನಾಗಿದ್ದು ಪುಷ್ಪಸೇನನೆಂಬ ಜೈನಯತಿಯ ಶಿಷ್ಯನಾಗಿದ್ದನೆಂದು ತಿಳಿದು ಬರುತ್ತದೆ. ಇವನ ನಿಜವಾದ ಹೆಸರು ಒಡೆಯದೇವ ಎಂದು. ಇವನು **ಗದ್ಯಚಿಂತಾಮಣಿ** ಮತ್ತು **ಕ್ಷಾತ್ರಚಿಂತಾಮಣಿ** ಎಂಬ ಎರಡು ಶ್ರೇಷ್ಠ ಸಂಸ್ಕೃತ ಗದ್ಯಕೃತಿಗಳನ್ನು ರಚಿಸಿದ್ದಾನೆ. ಇವುಗಳಲ್ಲಿ ಕ್ಷಾತ್ರಚಿಂತಾಮಣಿಯು ಕೆಲವು ಐತಿಹಾಸಿಕ ಮಾಹಿತಿಗಳನ್ನೊ ಒಳಗೊಂಡಿದೆ. ಗದ್ಯಚಿಂತಾಮಣಿಯು ೧೧ ಲಂಭಗಳುಳ್ಳ ಮನೋಜ್ಞ ಕೃತಿಯಾಗಿದ್ದು ಜೀವಂಧರನ ಮಗನಾದ ಸತ್ಯಧರ ಮಹಾರಾಜನ ಜಿವನವನ್ನು ಕುರಿತಾಗಿದೆ.

ಕಲ್ಯಾಣ ಚಾಲುಕ್ಯರ ಕಾಲದ ಮತ್ತೊಂದು ಮಹತ್ವದ ಸಂಸ್ಕೃತ ಗ್ರಂಥವೆಂದರೆ ಜಯಕೀರ್ತಿಯು ರಚಿಸಿದ **ಛಂದೋನು ಶಾಸನ.** ಸಂಸ್ಕೃತ ಛಂದಃಶಾಸ್ತ್ರದ ಪರಂಪರೆಯ ಒಂದು ಮಹತ್ವದ ಗ್ರಧ್ಧವಿದಾಗಿದ್ದು ಸಂಸ್ಕೃತ ವೃಂದಃ ಶಾಸ್ತ್ರದ ಬೆಳವಣಿಗೆಯಲ್ಲಿ ಕೇದಾರಭಟ್ಟನ ವೃತ್ತರತ್ನಾಕರ ಮತ್ತು ಹೇಮಚಂದ್ರನ ಛಂದೋನುಶಾಸನಗಳೆರಡರ ಮಧ್ಯೆ ನಿಲ್ಲುವ ಮಹತ್ತ್ವ ಪೂರ್ಣವಾದ ಛಂದೋಗ್ರಂಥವಾಗಿದೆ. ಅಷ್ಟೇ ಅಲ್ಲದೇ ಕನ್ನಡ ಛಂದಸ್ಸು ಮತ್ತು ಸಾಗಿತ್ಯದ ಪ್ರಾಚೀನತೆಯನ್ನು ಅರ್ಥ ಮಾಡಿಕೊಳ್ಳುವ ನಿಟ್ಟಿನಲ್ಲಿಯೂ ಈ ಗ್ರಂಥವು ಸಹಕಾರಿಯಾಗಿದೆ.

ಕಲ್ಯಾಣ ಚಾಲ್ಯುಕರ ಕಾಲದ ಇರ್ನ್ನೋರ್ವ ಜೈನಾಚಾರ್ಯ, ಕವಿ ಮಲ್ಲಿಷೇಣನು ಹಲವು ಸಂಸ್ಕೃತ ಕೃತಿಗಳನ್ನು ರಚಿಸಿದ್ದಾನೆ. ಇವನಿಗೆ ಕವಿ ಶೇಖರಗಾರುಡ, ಮಂತ್ರವೇದಿ ಎಂಬ ಬಿರುದುಗಳಿದ್ದವಲ್ಲದೇ ಈತನು ಸಂಸ್ಕೃತ ಮತ್ತು ಪ್ರಾಕೃತಗಳೆರಡರಲ್ಲೂ ಅಗಾಧ ಪಾಂಡಿತ್ಯವನ್ನು ಹೊಂದಿದ್ದನೆಂದು ತಿಳಿದು ಬರುತ್ತದೆ. ಇವನು ಸಂಸ್ಕೃತದಲ್ಲಿ **ಮಹಾ ಪುರಾಣ, ಸರಸ್ವತಿಮಂತ್ರಕಲ್ಪ, ಕಾಮಾಚಾಂಡಾಲೀಕಲ್ಪ ಭೈರವತಿಕಲ್ಪ, ಜ್ವಾಲಿನೀಕಲ್ಪ, ಸಜ್ಜನಚಿತ್ತಕಲ್ಪ ಮತ್ತು ನಾಗಕುಮಾರಕಾವ್ಯ** ಎಂಬ ಏಳು ಕೃತಿಗಳನ್ನು ರಚಿಸಿದ್ದಾನೆ. ನಾಗಕುಮಾರ ಕಾವ್ಯಕ್ಕೆ **ವ್ರತಪಂಷಮೀಕಥಾ** ಎಂಬ ಹೆಸರೂ ಇದ್ದು ಒಟ್ಟು ಐದು ಸರ್ಗಗಳಲ್ಲಿ ರಚಿತವಾಗಿದೆ. ಸಜ್ಜನಚಿತ್ತ ವಲ್ಲಭವು ನೀತಿಭೋದಕವಾದ ಮುಕ್ತಕಗಳ ಮಾದರಿಯ ಇಪ್ಪತ್ತೈದು ಪದ್ಯಗಳನ್ನು ಒಳಗೊಂಡ ಪುಟ್ಟ ಕೃತಿಯಾಗಿದೆ.

ಸಂಸ್ಕೃತದ ಸುಪ್ರಸಿದ್ಧ ಐತಿಹಾಸಿಕ ಮಹಾಕಾವ್ಯಗಳಲ್ಲೊಂದಾದ **ವಿಕ್ರಮಾಂಕದೇವಚರಿತ** ವನ್ನು ಕಾಶ್ಮೀರದ ಕವಿಯಾದ ಬಿಲ್ಹಣನು, ಕಲ್ಯಾಣ ಚಾಲುಕ್ಯದೊರೆ ಆರನೇ ವಿಕ್ಕಾಮಾದಿತ್ಯನ (ಕ್ರಿ.ಶ ೧೦೭೬-೧೧೨೭) ಆಶ್ರಯದಲ್ಲಿ ರಚಿಸಿದನು. ಕಾಶ್ಮೀರದ ಪ್ರವರಪುರ ಬಿಲ್ಹಣನ ಮೂಲ ಸ್ಥಳ. ವ್ಯಾಕರಣ, ಕಾವ್ಯಶಾಸ್ತ್ರ, ತರ್ಕ ಮುಂತಾದ ಅನೇಕ ವಿಷಯಗಳಲ್ಲಿ ಪಾಂಡಿತ್ಯವನ್ನು ಗಳಿಸಿದ ಇವನು ಕಾಶ್ಮೀರದಿಂದ ದಕ್ಷಿಣದ ಕಡೆಗೆ ಪ್ರಯಾಣ ಬೆಳಸಿ ಕೊನೆಗೆ ಕಲ್ಯಾಣ ಚಾಲುಕ್ಯರ ಅತ್ಯಂತ ಪ್ರಸಿದ್ಧ ಚಕ್ರವರ್ತಿ ತ್ರಿಭುಜನಮಲ್ಲ ವಿಕ್ರಮಾದಿತ್ಯನ ಆಶ್ರಯವನ್ನು ಪಡೆದನು. ತನ್ನ ಆಶ್ರಯದಾತನ ಜೀವನ ಮತ್ತು ಸಾಧನೆಗಳನ್ನು ಈ ಸುಂದರವಾದ ಮಹಾಕಾವ್ಯದಲ್ಲಿ ಚಾಮತ್ಕೃತಿಜಯಕವಾದ ಶೈಲಿಯೊಂದಿಗೆ ಚಿತ್ರಿಸಿದ್ದಾನೆ ಚಾಲುಕ್ಯರ ವಿಸ್ತಾರವಾದ ವಂಶಾವಳು, ವಿಕ್ರ ಮಾದಿತ್ಯನು ತನ್ನ ಅಣ್ಣ ಇಮ್ಮಡಿ ಸೋಮೇಶ್ವರರನ್ನು ಸರಿಸಿ ಸಿಂಹಾಸನಾರೂಢನಾದ ಪ್ರಸಂಗ, ವಿಕ್ರಮಾದಿತ್ಯನ ವಿವಾಹ, ಅವನ ದಿಗ್ವಿಜಯ, ವಿಶೇಷತೆ ಅವನು ಜೋಳರನ್ನು ಸೋಲಿಸಿ ಪರಿ ಹೀಗೆ ಅವನಸಮಗ್ರ ಜೀವನ ವೃತ್ತಾಂತವನ್ನು ೧೮ ಸರ್ಗಗಳ ಈ ಮಹಾಕಾವ್ಯದಲ್ಲಿ ಸಮನೋಹರವಾದ ವೈದರ್ಭೀ ಶೈಲಿಯ್ಲಲಿ ವರ್ಣಿಸಿದ್ದಾನೆ. ಹಾಗಾಗಿ ಐತಿಹಾಸಿಕ ದೃಷ್ಟಿಯೊಂದಲೂ ಮತ್ತು ಸಾಹಿತ್ಯಿಕ ದೃಷ್ಟಿಯಿಂದಲೂ ಈ ಕೃತಿಯು ತುಂಬ ಮಹತ್ತ್ವ ಪಡೆದಿದೆ. ಬಿಲ್ಹಣನ ರಚನಾ ಪದ್ಧತಿ ಅತ್ಯಂತ ರಸಪೇಶಲವೂ, ಸಹೃದಯಾಸ್ವಾದ್ಯವೂ ಆಗಿದೆ. ಉದಾಹರಣೆಗಾಗಿ ಒಂದೆರಡು ಪದ್ಯಗಳನ್ನು ಅವಲೋಕಿಸಬಹುದು.

ಅನನ್ಯಸಾಮಾನ್ಯಗುಣತ್ವಮೇವ ಭವತ್ಯನರ್ಥಾಯ
ಮಹಾಕವಿನಾಮ್!

ಜ್ಞಾತುಂ ಯದೇಷಾಂ ಸುಲಭಾಃ ಸಭಾಸು ನ ಜಲ್ಪಮಲ್ಪ

ಪ್ರತಿಬಾಃ ಕ್ಷಮಂತೇ!!

ಕೀರ್ತಿಶರೀರಗಳಾಗಿ ಅಮರರಾಗಬೇಕಾದರೆ ರಾಜರು ಸತ್ಯವಿರಗಳನ್ನು ಗೌರವಿಸಬೇಕೆಂದು ಈ ರೀತಿಯಲ್ಲಿ ಕಿವಿ ಮಾತನ್ನು ಹೇಳುತ್ತಾನೆ.ಪರ್ಶಿಯನ್ ಭಾಷೆಯ ಶಾಸನ ಕೋಟೆಯಲ್ಲಿರುವ ರಾಜಮಹಲ ದಕ್ಷಿಣದ ಹೊರೆ ಗೋಡೆಯಲ್ಲಿದ್ದು, ಈ ಶಾಸನ ಅದಿಲ್‌ಶಾನ ಅಧಿಕಾರ ಖಾನ್ ಖವಾಸಖಾನ್ ಕೋಟೆಯ ಬುರ್ಜುಗಳನ್ನು ಕಟ್ಟಿಸಿರುವ ಬಗ್ಗೆ ತಿಳಿಸುತ್ತದೆ. ಈ ಶಾಸನದ ವಿವರಗಳು ಅಳಿಸಿ ಹೋಗಿರುವುದರಿಂದ ಇನ್ನುಳಿದ ವಿವರಗಳು ಅಸ್ಪಷ್ಟವಾಗಿವೆ.

ಪರ್ಶಿಯನ್ ಭಾಷೆಯ ಶಾಸನವು ಕೋಟೆಯ ಮದ್ದು ಗುಂಡಿನ ಮನೆಯ ಬಾಗಿಲ ಮೇಲಿದೆ. ಮಹಮ್ಮದ ಆದಿಲ್ ಷಹನ ಕಲ್ಯಾಣ ಜಿಲ್ಲೆ (ಮಾಮ್ಲಾ)ಯ ಹವಾಲ್ದಾರ ಸಿದ್ದಿ ದಿಲಾವರಖಾನ ಎಂಬ ಅಧಿಕಾರವು ಭದ್ರವಾದ ಅರಮನೆ ಮತ್ತು ಉನ್ನತವಾದ ಕಾವಲು ಗೋಪುರ ನಿರ್ಮಾಣ ಮಾಡಿರುವುದನ್ನು ದಾಖಲಿಸುತ್ತದೆ.

ಬೀದರ ಜಿಲ್ಲೆಯಲ್ಲಿರುವ ಆದಿಲ್ ಶಾಹಿಗಳ ದಾರ್ಮಿಕೇತರ ಕಟ್ಟಡಗಳನ್ನು ವಿಶ್ಲೇಷಿಸಿದಾಗ ಸುಲ್ತಾನರ ಸ್ಥಾನಮಾನಗಳಿಗೆ ಎಷ್ಟು ಗೌರವ ವಿತ್ತೋ ಅಷ್ಟೇ ಗೌರವ ರಾಜ ಪ್ರತಿನಿಧಿಗಳಿಗೂ ಹಾಗೂ ದಂಡನಾಯಕರಿಗೂ ಕೂಡ ಇತ್ತು. ಕಾಮಿಲ್ ಖಾನ, ದಿಲವಾರಖಾನ ಹಾಗೂ ಖವಾಸಖಾನ ಬಸವಕಲ್ಯಾಣದ ಮುಖ್ಯ ಅಧಿಕಾರಿಗಳಾಗಿ ಕೋಟೆ, ಬುರುಜು, ಅರಮನೆಗಳನ್ನು ನಿರ್ಮಿಸಿದರು. ಬೀದರದಲ್ಲಿ ೨ನೇ ಇಬ್ರಾಹಿಂ ಆದಿಲ್ ಶಾಹಿ ಕೇವಲ ೧೦ ವರ್ಷಗಳ ಕಾಲ ಆಳ್ವಿಕೆ ಮಾಡಿ, ದಖ್ಖನಿ ಶೈಲಿಯಲ್ಲಿರುವ ಅರಮನೆಗಳನ್ನು ದರವಾಜಾಗಳನ್ನು ನಿರ್ಮಿಸಿದನು. ಇಲ್ಲಿರುವ ಟರ್ಕಿಶ್ ಅರಮನೆಗೆ ಸೋಲಾಕಂಬ ಮಸೀದಿ ಸಮೀಪದ ಬಾವಿಯಿಂದ ನೀರು ಸರಬರಾಜು ಮಾಡುವ ತಂತ್ರಜ್ಞಾನ ಟರ್ಕಿ ದೇಶದಲ್ಲಿನ ಶೈಲಿಯನ್ನು ಇಲ್ಲಿ ಅಳವಡಿಸಿದ್ದಾರೆ. ಬಿಜಾಪುರದ ಆದಿಲ್‌ಶಾಹಿಗಳು ಗಾರೆ ಹಾಗೂ ಕುಸುರಿ ವಾಸ್ತುಶಿಲ್ಪಕ್ಕೆ ಮಹತ್ವ ನೀಡಿದರು. ಬಸವಕಲ್ಯಾಣದಲ್ಲಿರುವ ಅನೇಕ ಕಟ್ಟಡಗಳು ಟರ್ಕಿ ಮತ್ತು ಬಹುಮನಿ ವಾಸ್ತುಶಿಲ್ಪದಿಂದ ಕೂಡಿವೆ, ೨ನೇ ಇಬ್ರಾಹಿಂ ಆದಿಲ್‌ಶಾಹಿಯೂ ವಿಜಯನಗರದ ವಾಸ್ತುಶಿಲ್ಪವನ್ನು ಬಸವಕಲ್ಯಾಣದ ರಂಗಿನ ಮಹಲದಲ್ಲಿ ಅಳವಡಿಸಿದ್ದಾನೆ. ರಂಗಿನ ಮಹಲ್ ಮುಂಭಾಗದಲ್ಲಿರುವ ಉದ್ಯಾನಗಳು ಬೀದರದಲ್ಲಿರುವ ಉದ್ಯಾನ ಕಾಂಜಿಗಳನ್ನು ಹೋಲುವಂತಿವೆ. ಈ ಜಿಲ್ಲೇಯಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ಬಸವಕಲ್ಯಾಣ ಮತ್ತು ಬೀದರನ್ನು ಹೊರೆತು ಪಡಿಸಿ ಬೇರೆ ಸ್ಥಳಗಳಲ್ಲಿ ಆದಿಲ್‌ಶಾಹಿಗಳ ಧಾರ್ಮಿಕೇತರ ಕಟ್ಟಡಗಳು ಕಂಡು ಬಂದಿರುವುದಿಲ್ಲ.

ಕ್ರಿ.ಶ. ೧೫೬೮ ರ ಪರ್ಶಿಯನ್ ಬಾಷೆಯ ಗದ್ಯ, ಪದ್ಯ ಮಿಶ್ರಿತ ಶಾಸನವು ಹುಸ್ಸೈನಿ ಬುರ್ಜನ್ನು ಸುಲ್ತಾನ ಅಬ್ದುಲ್-ಮುಜಾಪಿಯರ ಷಾ ಅಲೀ ಆದಿಲ್‌ಶಾನ್ ಖಾನರ ಖಾನನಾದ ಕಾಮಿಲ್ ಖಾನ ನಾಯಿಬ್-ಇ-ಘಬತ, ಮಲಿಖುಷ್ - ಶರ್ಖಮಲಿಕನ ಅಜ್ಞೆಯ ಮೇರೆಗೆ ಈ ಬುರ್ಜನ್ನು ನಿರ್ಮಾಣ ಮಾಡಿರುವುದನ್ನು ತಿಳಿಸುತ್ತದೆ.

ಪರ್ಶಿಯನ ಭಾಷೆಯ ಬಲ್ಲಮ್ ಬುರ್ಹಿನಲ್ಲಿರುವ ಶಾಸನ ೧ನೇ ಅಲಿ ಆದಿಲ್‌ಶಾನ್ ಖಾನ್ ಕಾಮಿಲ್‌ಖಾನ್ ನಾಯಿಬ್-ಇ-ಘಬನ (ರಾಜ ಪ್ರತಿನಿಧಿ)ನ ಆಡಳಿತಾವಧಿಯಲ್ಲಿ ಈ ಬುರ್ಜನ್ ೧೯.೦೩.೧೫೭೩ ರಲ್ಲಿ ನಿರ್ಮಾಣ ಮಾಡಿರುವುದನ್ನು ಹಾಗೂ ಕಾಮಿಲ್ ಖಾನ ಎಂದೆಂದಿಗೂ ಜಯವಾಗಲಿ ಎಂದು ತಿಳಿಸುತ್ತದೆ.

ಕ್ರಿ. ಶ. ೧೫೮೦ ಏಪ್ರಿಲ್ ೨೦ ರಂದು ಪರ್ಶಿಯನ್ ಹಾಗೂ ನಸ್ಖ ಲಿಪಿಯಲ್ಲಿರುವ ಈ ಶಾಸನ ಚಾಂದನಿ ಚಬೂತರ ಎಂಬ ಬುಜಘನ್ನು ೧ನೇ ಅಲಿ ಆದಿಲ್‌ಶಾನ್ ನಾಯಿಬ್-ಇ-ಘಬನ ಮಾಮ್ಲಾ (ಜಿಲ್ಲಾ ರಾಜಪ್ರತಿನಿಧಿ) ನ ಕಾಲದಲ್ಲಿ ಖಾನರಖಾನ್ ದಿಲಾವರಖಾನ್ ಎಂಬುವನು ೬ ಸಾವಿರ ಹೊನ್ನುಗಳ ಖರ್ಚಿನಲ್ಲಿ ಕಲ್ಯಾಣದಲ್ಲಿರುವ ಕೋಟೆ ಗೋಡೆಯನ್ನು ನಿರ್ಮಾಣ ಮಾಡಿರುವುದನ್ನು ದಾಖಲಿಸುತ್ತದೆ.

ಕ್ರಿ. ಶ. ೧೫೯೨ -೯೩ ರ ಪರ್ಶಿಯನ್ ಭಾಷೆಯ ಶಾಸನ ರಾಜಮಹಲ್ಲಿನ ದಕ್ಷಿಣ ಗೋಡೆಯ ಕಮಾನಿನ ಮೇಲಿರುವ ಶಾಸನದ ಉಲ್ಲೇಖದಂತೆ ೨ನೇ ಇಬ್ರಾಹಿಂ ಆದಿಲ್‌ಷಾನ ಅಧಿಕಾರಿ ನಿಜಾಮುದ್ದೀನಕಾನ್ ರಾಜಮಹಲ ಎಂಬ ಅರಮನೆಯನ್ನು ನಿರ್ಮಾಣ ಮಾಡಿರುವ ವಿಷಯವನ್ನು ತಿಳಿಸುತ್ತದೆ. ಈ ಕಟ್ಟಡ ವಿಶಾಲವಾಗಿದ್ದು, ಅಷ್ಟಕೋನಾಕೃತಿಯ ಕಮಾನುಗಳನ್ನು ಹಜಾರ ಹಾಗೂ ಕೋಟೆಯನ್ನು ಹೊಂದಿದೆ. ಇದನ್ನು ಗಾರೆ ವಾಸ್ತುಶಿಲ್ಪದಿಂದ ಅಲಂಕರಿಸಲಾಗಿದೆ. ಈ ಕಟ್ಟಡವನ್ನು ಅದಿಲ್‌ಶಾಹಿ ಟರ್ಕಿ ಶೈಲಿಯಲ್ಲಿ ನಿರ್ಮಾಣ ಮಾಡಿದ್ದಾನೆ. ಇದು ಬಿಜಾಪುರದಲ್ಲಿರುವ ಗಗನ ಮಹಲದ ಶೈಲಿಯನ್ನು ಹೊಂದಿದೆ.

ಕ್ರಿ. ಶ. ೧೬೪೬ ಪೇಬ್ರುವರಿಯಲ್ಲಿ ಪರ್ಶಿಯನ ಭಾಷೆ ಹಾಗೂ ನಸ್ಖ ಲಿಪಿಯಲ್ಲಿ ಷೇಖ್- ಹುಸೇನ್ ದಬೀರ್ (ಕಾರ್ಯದರ್ಶಿ) ಮೊಹಮ್ಮದ ಆದಿಲ್‌ಶಾನ್ ಆಜ್ಞೆ ಮೇರೆಗೆ ಶಾಸನ ಬರೆದನು. ಈ ಶಾಸನ ರಾಜಮಹಲದ ಪೂರ್ವ ಗೋಡೆಯಲ್ಲಿ ಬರೆಯಲಾಗಿದೆ. ಈಗಾಗಲೇ ಅಸ್ತಿತ್ವದಲ್ಲಿದ್ದ ಕೋಟೆಯನನ್ನು ಭದ್ರಪಡಿಸಿ ಅದಕ್ಕೆ ಬುರ್ಜಗಳನ್ನು ಹಾಗೂ

ಆಳ್ವೇರಿಗಳನ್ನು ಜೋಡಿಸಿರುವ ವಿಚಾರ ಮತ್ತು ಸಿದ್ದಿ ದಿಲಾವರಖಾನನ್ನು ಕಲ್ಯಾಣದ ಅಧಿಕಾರ ಹುದ್ದೆ ನೀಡಿರುವ ಸಂಗತಿಯನ್ನು ತಿಳಿಸುತ್ತದೆ.

ಬಸವಕಲ್ಯಾಣ : ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಇಲ್ಲಿನ ಕೋಟೆ ನಿರ್ಮಾನಗೊಂಡು, ಕಲಚೂರಿಗಳು, ಸೇವಣರು, ವಿಜಯನಗರ ಹಾಗೂ ಆದಿಲ್ ಶಾಹಿಗಳ ಕಾಲದಲ್ಲಿ ಜೀರ್ಣೋದ್ದಾರ ಕಾರ್ಯ ನಡೆಯಿತು. ಇದು ಮೂರು ಸುತ್ತಿನ ಕೋಟೆ ಹಾಗೂ ದೀರ್ಘ ವೃತ್ತಾಕಾರವನ್ನು ಹೊಂದಿದೆ. ಮೊದಲನೆಯ ಹಾಗೂ ಎರಡನೆಯ ಸುತ್ತನ್ನು ಬೆಟ್ಟದ ಬುಡದಲ್ಲಿ ಕಟ್ಟಲಾಗಿದೆ. ಇವೆರೆಡು ಮಧ್ಯದಲ್ಲಿ ಆಳವಾದ ಕಂದಕವಿದೆ. ಕೈಪಿಡಿ ಗೋಡೆಯಲ್ಲಿ ಬಂದೂಕನ್ನು ಇಟ್ಟು ಚಲಾಯಿಸುವಂತೆ ರಂಧ್ರಗಳಿವೆ. ಬೆಟ್ಟದ ಮೇಲಿರುವ ಮೂರನೆಯ ಕೋಟೆ ಹೃದಯದಂತಿದೆ. ಹೊರ ಕೋಟೆಗೆ ಏಳು ಮಹಾದ್ವಾರಗಳಿವೆ. ದಕ್ಷಿಣ ದಿಕ್ಕಿನಲ್ಲಿರುವ ವೇದಿಕೆ ಸುಲ್ತಾನರು ಆನೆಯನ್ನು ಹತ್ತಲು ನೆರವಾಗಿದೆ. ಕೋಟೆಯ ಒಳಭಾಗದಲ್ಲಿ ಕೈಸಾಲೆ, ಕಾರಂಜಿ, ಉದ್ಯಾನ, ರಾಜಮಹಲ್, ಹೈದರಮಹಲ್ ಕಬೂತರಖಾನ್ (ಪಾರಿವಾಳ ಮನೆ), ಗರಡಿಮನೆ, ಬಾವಿ ಮುಂತಾದ ಕಟ್ಟಡಗಳಿವೆ. ಅರಮನೆ ಪ್ರವೇಶ ದ್ವಾರದ ಎರಡು ಬದಿಯಲ್ಲಿ ವಿಶಾಲವಾದ ವೃತ್ತಾಕಾರದ ಬುರುಜಗಳಿವೆ. ಇವುಗಳನ್ನು ಕೆಂಪು ಕಲ್ಲು, ಕಬ್ಬಿಣ ಹಾಗೂ ಗಾರೆಯಿಂದ ಅಲಂಕರಿಸಲಾಗಿದೆ. ಎತ್ತರದ ಗೋಡೆ ಇವುಗಳಿಗೆ ಹೊಂದಿಕೊಂಡಂತೆ ೧೪ ಬುರುಜುಗಳಿವೆ.ಹೊರಗಡೆಯಲ್ಲಿ ೧೧ ಬುರುಜುಗಳು ಮತ್ತು ತೋಪುಗಳಿವೆ. ಹೈದರ ಮಹಲದಲ್ಲಿರುವ ನವಗಂಜ್ ತೋಪು ೭.೯೪ ಮೀಟರ್ ಉದ್ದವಿದೆ.

ಕ್ರಿ. ಶ. ೧೫೩೩ – ೬೫ಕ್ಕೆ ಸಂಬಂಧಿಸಿದ ಪರ್ಶಿಯನ್ ಭಾಷಯ ಶಾಸನ–ಆದಿಲ್ ಷಾನ ಪುತ್ರ ಮುಬಾರಕ ಷಾ. ಸುಲ್ತಾನನ ಆಜ್ಞೆ ಮೇರೆಗೆ ಕೋಟೆ ಬುರುಜಿನಲ್ಲಿರುವ ತೋಪನ್ನು ನಿರ್ಮಾಣ ಮಾಡಿರುವ ಉಲ್ಲೇಕವಿದೆ.

ಕ್ರಿ. ಶ. ೧೫೩೩ – ೬೪ಕ್ಕೆ ೧ನೇ ಆದಿಲ್ ಷಾನ ಕಾಲದ ಪರ್ಶಿಯನ್ ಭಾಷೆ ನಸ್ಕ ಲಿಪಿಯಲ್ಲಿರುವ ಈ ಶಾಸನ ಸಿದ್ಧ ಬುರುಜಿನ ಗೋಡೆಯಲ್ಲಿದೆ ಈ ಬುರುಜನ್ನು ರಚಿಸಲು ಅಂದು ಪವಿತ್ರ ಸಮಯವಾಗಿತ್ತು. ಅವನ ಜೀವನ ಪರ್ಯಂತ ಅಭಿವೃದ್ಧಿಯಲ್ಲಿರಲಿ ಮತ್ತು ಕಾಮಿಲ್ ಖಾನನು ಎಂದೆಂದೂ ಜಯಶಾಲಿಯಾಗಿ ಜಯಭೇರಿ ಬಾರಿಸಲಿ. ಖಾನರ ಖಾನನಾದ ನಾಯಿಬ್ – ಇ – ಘಬತ್, ಖಾನ್–ಇ–ಆಜಮ್ ರುಸ್ತುಮ ಖಾನನ ಆಜ್ಞೆ ಮೇರೆಗೆ ಕಾಮಿಲ್ ಖಾನ ಸಿದ್ಧಿ ಬುರ್ಜುನ್ನು ನಿರ್ಮಾಣ ಮಾಡಿದ್ದರ ಬಗ್ಗೆ ಶಾಸನ ದಾಖಲಿಸುತ್ತದೆ.

ಕ್ರಿ. ಶ. ೧೫೬೭ರ ಪರ್ಶಿಯನ ಭಾಷೆ ಹಾಗೂ ನಸ್ಹ ಲಿಪಿಯಲ್ಲಿರುವ ೧ನೇ ಆದಿಲ್ ಷಾನ ಕಾಲದ ಈ ಶಾಸನ ನಾಯಿಬ್ –ಇ–ಘಬತ ಸಯ್ಯದ ಮಹಮ್ಮದನ ಆಡಳಿತದಲ್ಲಿ ಖಾರನ ಖಾನನಾದ ಕಾಂಇಲ್ ಖಾನ ಮಂಗನಿ ಬುರ್ಜನ್ನು ನಿರ್ಮಿಸಿರುವುದನ್ನು ಉಲ್ಲೇಖಿಸುತ್ತದೆ.

ಗಗನಮಹಲ್, ರಂಗಿನಮಹ಼ಲ್ ಚಾಂದಗಿ, ಚುನುತರಾ ಸೋಲಾಕಂಬ ಮಸೀದಿ ಎಂಬ ಕಟ್ಟಡಗಳನ್ನು ನಿರ್ಮಿಸಿದರು. ಈ ಮೇಲಿನ ಕಟ್ಟಡಗಳು ದಖ್ಖನಿ ಹಾಗೂ ಟರ್ಕಿ ಶೈಲಿಯಲ್ಲಿ ನಿರ್ಮಿಸಿದ್ದಾರೆ. ಅರಮನೆ ಹಾಗೂ ದರ್ವಾಜಗಳನ್ನು ಬಿಜಾಪುರದ ಶ್ರೇಷ್ಠ ಸುಲ್ತಾನನಾದ ೨ನೇ ಇಬ್ರಾಹಿಂ ಆದಿಲ್ ಶಾಹಿ ಬೀದರನ್ನು ಗೆದ್ದ ಬಳಿಕ ಜೀರ್ಣೋದ್ಧಾರ ಮಾಡಿರುವ ಬಗ್ಗೆ ಮೂರು ಪರ್ಶಿಯನ ಶಾಸನಗಳಲ್ಲಿ ಉಲ್ಲೇಖವಾಗಿವೆ.

ಬೀದರನಲ್ಲಿರುವ ಕೋಟೆ ನಿರ್ಮಾಣ ಕ್ರಿ. ಶ ೧೪೨೪ ರಿಂದ ೧೪೨೩ ರವರೆಗೆ ಕಟ್ಟಲ್ಪಟ್ಟಿದೆ. ಬೀದರದ ಹೊರಕೋಟೆ ೪ ಕಿ.ಮೀ ಸುತ್ತಳತೆ ಹಾಗೂ ೮ ದರ್ವಾಜಗಳಿಂದ ಕೂಡಿದೆ. ಶಾರ್ಜಾ ದರ್ವಾಜ ಇಲ್ಲಿಯ ಮುಖ್ಯ ದ್ವಾರವಾಗಿದೆ. ಈ ಕೋಟೆಯಲ್ಲಿ ೩೭ ಬುರುಜುಗಳು ಹಾಗೂ ೮ ಬತೇರಿಗಳಿದ್ದು, ಆಳವಾದ ಕಂದಕವಿದೆ. ಒಳಕೋಟೆ ೫ ದರ್ವಾಜಗಳಿಂದ ಕೂಡಿದೆ. ಕೋಟೆಯ ಒಳ ಆವರಣದಲ್ಲಿ ಸುಂದರವಾದ ಅರಮನೆಗಳು, ಮಸೀದಿಗಳು ಕುಸುರಿ ಕೆಲಸ, ಕಬ್ಬಿಣ, ಇಟ್ಟಂಗಿ, ಕಲ್ಲು ಹಾಗೂ ಕುಸುರಿ ಕೆಲಸದಿಂದ ನಿರ್ಮಾಣವಾಗಿದೆ. ಇವುಗಳಲ್ಲಿನ ಅನೇಕ ಕಟ್ಟಡದಗಳು ಬಿಜಾಪುರದ ೨ನೇ ಇಬ್ರಾಹಿಂ ಆದಿಲ್‌ಶಾಹಿಯಿಂದ ಜೀರ್ಣೋಧಾರಗೊಂಡಿವೆ ಬಿಜಾಪುರದ ಸುಲ್ತಾನರು ೨ನೇ ಇಬ್ರಾಹಿಂ ಅದಿಲ್ ಶಾಹಿ ರಾಜನಾಗಿದ್ದಂತೆಯೂ ಔದರ್ಯದಲ್ಲಿ ಅವನಿಗೆ ಸಮಾನರಾದವರು ಯಾರೂ ಇಲ್ಲವೆಂದು ಅವನು ಗೆದ್ದಂತೆಯೂ ಉಲ್ಲೇಖಿಸುತ್ತದೆ.

ಕ್ರಿ. ಶ. ೧೬೧೮–೧೯ ರಿಂದ ೧೬೨೮ ರವರೆಗವೆ ಬೀದರದಲ್ಲಿ ಆಳ್ವಿಕೆ ಮಾಡಿದರು ಕ್ರಿ. ಶ ೧೬೧೮–೧೯ ಪರ್ಶಿಯನ ಭಾಷೆ ಹಾಗೂ ನಸ್ತಲೀಖ ಲಿಪಿಯ ಶಾಸನ ಪದ್ಯ ರುಪದಲ್ಲಿದೆ. ಈ ಶಾಸನ ರಂಗಿನ ಮಹಲ್ ಸಮೀಪದ ಪಾಳುಬಿದ್ದುರುವ ಅರಮನೆಯಲ್ಲಿ ದೆರೆತಿದೆ..

ಕ್ರಿ. ಶ. ೧೬೧೯ ರಲ್ಲಿ ೨ನೇ ಇಬ್ರಾಹಿಂ ಅದಿಲ್ ಶಾಹಿಯೂ ಬೀದರನ ಒಳಕೋಟೆಯಲ್ಲಿ ನವರಸ ದರವಾಜನ್ನು ನಿರ್ಮಿಸಿದನು. ಇದು ನಗರದ ಮುಖ್ಯ ಪ್ರವೇಶ ದ್ವಾರವಾಗಿದ್ದು ೧೭ ಅಡಿ ಉದ್ದ ೧೨ ಅಡಿ ೬ ಇಂಚು ಅಗಲವಾಗಿದೆ. ಕ್ರಿ. ಶ ೧೬೫೬ ರಲ್ಲಿ ಔರಂಗಜೇಬ ಇದಕ್ಕೆ ಫತ್ತೆ ದರವಾಜ ಎಂದು ಹೆಸರಿಟ್ಟನು (ಗೆಲವು).

ಕ್ರಿ. ಶ. ೧೬೨೭ –೨೮ರ ಪರ್ಶಿಯನ ಭಾಷೆಯ ಶಾಸನ ಅರಮೆಯ ಅಡಿಗೆ ಮನೆ ಆವರಣದಲ್ಲಿ ದೊರೆತಿದೆ. ಇಬ್ರಾಹಿಂ ಆದಿಲ್ ಶಾಹಿಯ ಅಧಿಕಾರಿ ಅಮರಜಾನ ಎಂಬುದನಯ ಇಲ್ಲಿಯ ಕೋಟೆ, ಅರಮನೆ, ಮಸೀದಿ ಹಾಗೂ ರಾಜ ಸಭಾಂಗಣ ಕೊಠಡಿಗಳನ್ನು ಜೀರ್ಣೋದ್ಧಾರ ಕಾರ್ಯವನ್ನು ಮಾಡಿಸಿದನೆಂದು ತಿಳಿಸುತ್ತದೆ. ಟರ್ಕಿ ಮಹಲದ ಎರಡನೇ ಮಹಡಿ ಕಟ್ಟಡದ ಜಿರ್ಣೋದ್ಧಾರವನ್ನು ಇಬ್ರಾಹಿಂ ಆದಿಲ್‌ಶಾಹಿ ಮಾಡಿದ್ದಾನೆ.

೨. ಭಾಲ್ಕಿ ಕೋಟೆ : –

ಕ್ರಿ. ಶ. ೧೩೨೧ ರಲ್ಲಿ ಮೊಹಮ್ಮದ್ ಬಿನ್ ತುಘಲಕ್‌ನು ದಾಳಿ ಮಾಡಿ ಕಲ್ಯಾಣ ಬೀದರ ಕೋಟೆಗಳನ್ನು ವಶಪಡಿಸಿಕೊಂಡಿದ್ದನೆಂದು ಫೇರಿಸ್ತಾಣ ಎಂಬ ಪ್ರವಾಸಿ ಹೇಳಿರುವುದರಿಂದ ಭಾಲ್ಕಿ ಕೋಟೆಯು ಸಹ ಆತನ ಆಳ್ವಿಕೆಗೊಳಪಟ್ಟಿರಬೇಕು. ಕ್ರಿ. ಶ. ೧೩೪೭ ರಿಂದ ಬಹುಮನಿ, ಬರಿದಶಾಹಿ, ಆದಿಲ್‌ಶಾಹಿಗಳು ಈ ಪ್ರದೇಶವನ್ನು ಆಳಿದ್ದಾರೆ. ಔರಂಗಜೇಬನು ಕ್ರಿ. ಶ. ೧೬೫೫ ರಲ್ಲಿ ಆದಿಲ್‌ಶಾಹಿಗಳನ್ನು ಸೋಲಿಸಿ ಈ ಭಾಗವನ್ನು ವಶಪಡಿಸಿಕೊಂಡನು. ಕ್ರಿ. ಶ. ೧೭೧೪ ರಿಂದಲೇ ಕೋಟೆಯ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಂಡು ನಾಲ್ಕೈದು ವರ್ಷಗಳಲ್ಲಿ ಪೂರ್ಣಗೋಳಿಸಿದ್ದರು. ಚಂದ್ರಸೇನ ಜಾಧವ.

ಈ ಕೋಟೆಯು ಎರಡು ಪ್ರವೇಶ ದ್ವಾರಗಳನ್ನೊಳಗೊಂಡಿದೆ. ಭಾಲ್ಕಿಯ ಕೋಟೆಗೆ ಆರು ತೊಟ್ಟಿಲುಗಳಿವೆ. ಕರಿಕಲ್ಲಿನಿಂದ ಕಟ್ಟಲಾದ ಈ ಕೋಟೆ ಚಿಕ್ಕದಾಗಿದ್ದರೂ ಭದ್ರವಾಗಿದೆ. ಸುಂದರವಾದ ರಂಗಮಹಲ ಹೊಂದಿರುವ ಬುರುಜ್ ೧೦ ಕಂಬಗಳ ಮಂಟಪ ನೆಲ, ಮಾಳಿಗೆಗಳು, ಕಮಾನು, ತಟಾಕುಗಳು ಸುಂದರವಾಗಿವೆ. ಕೋಟೆಯ ಗೋಡೆಯಲ್ಲಿ ಎಲ್ಲ ದಿಕ್ಕುಗಳಿಗೂ ಗುಂಡು ಹಾರಿಸಲು ಬರುವಂತೆ ಕಿಂಡಿ, ತೆನೆಗಳನ್ನು ಬಿಡಲಾಗಿದೆ. ಕೋಟೆಯ ಪಕ್ಕದಲ್ಲಿರುವ ಭವ್ಯವಾದ ಭಾವಿಯನ್ನು ಸಹಾ ಚಂದ್ರಸೇನ ಜಾಧವ್ ಅವನ ಮಗನಾದ ರಾಮಚಂದ್ರ ಜಾಧವನ ಕಾಲದಲ್ಲಿ ಈ ಎಲ್ಲ ಗೋಡೆಯ ಕೆಲಸ ಕಾರ್ಯ ಸಂಪೂರ್ಣಗೊಂಡಿವೆ.

೩. ಭಾತಂಬ್ರಾ ಕೋಟೆ : –

ಪ್ರಾಚೀನ ಕಾಲದಿಂದಲೂ ಸಿರಿದೇವಿಯ ಮಡಿಲಿನಲ್ಲಿ ಕಂಗೋಳಿಸುತ್ತಿರುವ 'ಭಾತಂಭ್ರಾ' ಬೀದರ ಜಿಲ್ಲೆಯ ಪ್ರಮುಖ ಗ್ರಾಮವಾಗಿದೆ. ವಿಶಿಷ್ಟವಾದ ಐತಿಹಾಸಿಕ, ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ. ಇಲ್ಲಿಯ ಹವಾಗುಣ ಆಹ್ಲಾದಕರವೂ, ಚೈತನ್ಯದಾಯಕವೂ ಆಗಿದೆ. ಕರಿ ಹಾಗೂ ಬಿಳಿ ಮಣ್ಣಿನಿಂದ ಕೂಡಿರುವ ಸಮತಟ್ಟಾದ ಈ ಭೂಬಾಗವು ಫಲವತ್ತತೆಯಿಂದ

ಕೂಡಿದೆ. ಪುರಾತನ ಕಾಲದಿಂದಲೂ ಈ ಊರು ಮಾವಿನ ಹಣ್ಣಿನ ಗಣಿ ಎಂದು ಪ್ರಖ್ಯಾತಿ ಪಡೆದಿದೆ. ಗತಕಾಲದ ಆಳರಸರಿಗೆ, ಮಂತ್ರಿಗಳಿಗೆ, ಆಸ್ಥಾನ ಪಂಡಿತರಿಗೆ, ಅಧಿಕಾರಿಗಳಿಗೆ, ಗೌಡ ಕುಲಕರ್ಣಿಗಳಿಗೆ ರಸಭರಿತ ಮಾವಿನ ಹಣ್ಣುಗಳನ್ನು ಈ ಗ್ರಾಮದಿಂದಲೇ ಕಳುಹಿಸುತ್ತಿದ್ದರು. ಈ ಗ್ರಾಮದ ಭೌಗೋಳಿಕ ವಿಸ್ತೀರ್ಣ ೭೪೯ ಎಕರೆ, ೨೧ ಗುಂಟೆ ಇದೆ. ೧೩೫ ಎಕರೆ ಭೂ ಪ್ರದೇಶದಲ್ಲಿ ಹರಡಿಕೊಂಡಿದೆ.

ಈ ನೆಲವು ಕಲ್ಯಾಣ ಚಾಲುಕ್ಯರ ಬರೀದ ಶಾಹಿಗಳು ಬಿಜಾಪೂರ ಸುಲ್ತಾನರ, ಮರಾಠರ ಮತ್ತು ನಿಜಾಮರ ಆಳ್ವಿಕೆಗೆ ಒಳಪಟ್ಟಿದೆ. ಚಾರಿತ್ರಿಕವಾಗಿ ಚಾಲುಕ್ಯರ ಕಾಲದಲ್ಲಿ ಈ ಭಾಗದ ಜನರು ಸೈನ್ಯದಲ್ಲಿ ಸೇರಿ ನಾಡಿನ ರಕ್ಷಣೆ, ಸ್ವಾಭಿಮಾನ ಪ್ರತಿಷ್ಠೆ ಬೆಳೆಸಿಕೊಳ್ಳುವಲ್ಲಿ ಮಹತ್ವದ ಪಾತ್ರವಹಿಸಿವರಂತೆ ಕಂಡು ಬರುತ್ತದೆ.

'ಭತ್ತ ಮುರಾರಿ' ಎಂದು ಉಚ್ಚರಿಸುತ್ತಾರೆ. ಮೋರಿಗೆಯ ಸಂಸ್ಕೃತ ಮೂಲ ಮಯೂರಿಕಾ ಅಂದರೆ ನವಿಲುಗಳನ್ನು ಹೊಂದಿರುವ ಭೂದೇವಿ ಎಂದರ್ಥ ಚಾಲುಕ್ಯರ ಕಾಲದ ಶಾಸನಗಳಲ್ಲಿ ಭಟ್ಟಸಂಗವೆಯ ಹತ್ತಿರದಲ್ಲಿರುವ ಮೋರಿಗೆಯನ್ನು ಭಟ್ಟಮೋರಿಗೆ ಎಂದು ಕರೆಯಲಾಗಿದೆ. ಕ್ರಿ. ಶ. ೧೧೦೪-೧೧೦೫ ರ ಇಂಚೂರಿನ ಶಾಸನದಲ್ಲಿ ಅಟ್ಟಳೆಯ ಕೋಂಕರಸರು ಭಟ್ಟ ಮೋರಿಗೆಯ ದೋರೇಶ್ವರ ದೇವರಿಗೆ ತಾವಾಗೆ ೧೨ ರೋಳಗಣ ಇಂಚೆವೂರಿನ ಮೂಡಣ ದಿಕ್ಕಿನಲ್ಲಿ ಭೂದಾನ ಮಾಡಿರುವ ಉಲ್ಲೇಖವಿದೆ.

ಕೋಟೆಯ ಪೂರ್ವಾರ್ಧದಲ್ಲಿದ್ದ ಸ್ಮಶಾನ ಭೂಮಿಯ ಮೇಲಿನ ನೀರು ಊರೋಳಗೆ ಹರಿದು ಬರುತ್ತಿತ್ತು ಅಂದರೆ ಪ್ರಸ್ತುತ ಸ್ಥಿತಿಯಲ್ಲಿರುವ ಗ್ರಾಮವು ಮೊದಲು ಕೋಟೆಯ ಪಶ್ಚಿಮ ಭಾಗದಲ್ಲಿತ್ತು. ಸ್ಮಶಾನ ನೀರನ್ನು ಅನಿಷ್ಟವೆಂದು ಭಾವಿಸಿ ಮತ್ತು ನೀರಿನಿಂದಾಗುವ ಅನಾಹುತವನ್ನು ತಪ್ಪಿಸುವ ಸಲುವಾಗಿ ಭಾತಾಂಬ್ರಾ ಗ್ರಾಮದ ಮೂಲಕ ಪಗಡೆ ಬಟಾರ್ ಮಾದರಿಯಲ್ಲಿ ೧೮೦೧ ರಲ್ಲಿ ಪುನರ್ ನಿರ್ಮಾಣ ಮಾಡಲಾಯಿತು. ನಾಲ್ಕು ದಿಕ್ಕಿಗೆ ವೀರಭದ್ರ ಅಗಸೆ, ಖಿಲ್ಲಾ ಅಗಸೆ, ಹುಮನಾಬಾದ ಅಗಸೆ, ಮತ್ತು ಭಾಲ್ಕಿ ಅಗಸೆ ಎಂದು ಹೆಸರಿಸಲಾಯಿತು.

ಕೋಟೆಯ ವಿವರ : –

ಪ್ರಾಚೀನ ಕಾಲದ ಕೋಟೆಯ ರಚನೆ ಕುರಿತು ಪ್ರಸಿದ್ಧ ಕವಿಯಾದ ೧೨ ನೇ ಶತಮಾನದ ಹರಿಹರ ತನ್ನ "ಗಿರಿಜಾ ಕಲ್ಯಾಣ" ಎಂಬ ಕಾವ್ಯದಲ್ಲಿ ಕೊಟ್ಟಿರುವ ವಿವರ ಹೀಗಿದೆ.

ಹಳೆಗನ್ನಡದ ಕಾವ್ಯಗಳಲ್ಲಿ ಬಂದಿರುವ "ಕೋಟೆಯೇ ಹೊಸಗನ್ನಡದ ಕೋಟೆ" ಸ್ಪಟಿಕದಂತ ಕೋಟೆ ಎಂಬುದು ಕವಿಯ ಕಲ್ಪನೆ. ತೆನೆಯಾಕಾರದ ರಚನೆಯು ಕೋಟೆಗೆ

ಅಂದವನ್ನು ಕೋಡುತ್ತದೆ. ಹಾಗೂ ಎರಡು ತೆನೆಗಳ ನಡುವೆ ಮೆಲ್ಲಗೆ ತಲೆ ಹಾಕಿ ಕೆಳ್ಳಕೆ ಇಣುಕಿ ನೋಡಿ ಅವುಗಳ ಹಿಂದೆಯೇ ಕುಳಿತು "ಅಂಬುಗಂಡಿ" ಬಾಣಗಳ ಕಿಂಡಿಯಿಂದ ಬಾಣಗಳನ್ನು ಪ್ರಯೋಗಿಸಲು ಅನುಕೂಲವಾಗುತ್ತಿತ್ತು. ಒಂದು ವಿಶ್ರಾಂತಿ ತಾಣವನ್ನು ಕೋಟೆ ಗೋಡೆಯ ಹಿಂದುಗಡೆ ಕಟ್ಟುತ್ತಿದ್ದರು.

ಅಟಲಗಳು (ಮೇಲರುಝಾವಣಿ) ವೀಕ್ಷಣಾ ಕೇಂದ್ರಗಳಿದ್ದು ಹಾಗೆ ಅಟಲ ಮೇಲೆ ರಾಜನ ಲಾಂಛನ ಇರುವ ರಾಜ್ಯ ಹಾರಾಡುತ್ತಿದ್ದವು. ಪ್ರತಿ ಕೋಟೆಯ ನಾಲ್ಕು ಅಥವಾ ಎಂಟು ದಿಕ್ಕುಗಳಲ್ಲಿಯೂ ಒಂದೊಂದು ಕೊತ್ತಲಗಳಿರುತ್ತಿದ್ದವು. ಕೋಟೆಯ ಆಳುವೇರಿ ಅಂದರೆ ಎತ್ತರವಾದ ಬಲಿಷ್ಠವಾದ ಗೋಡೆ ಎಂದರ್ಥ ಡೆಂಕಣೆ ಎಂಬ ಆಯುಧವನ್ನು ಬಳಸುತ್ತಿದ್ದರು.

ಕೋಟೆಗಳ ಸುತ್ತಲೂ ಆಳವಾದ "ಕಂದಕ" ಅಥವಾ ಅಗಳು ತೋಡಿಸಿ ಅವುಗಳ ತುಂಬ ನೀರು ತುಂಬಿಸುತ್ತಿದ್ದರು. ಶತ್ರುಗಳು ಸುಲಭವಾಗಿ ರಾಜಧಾನಿಗೆ ನುಗ್ಗದಂತೆ ಮಾಡಲು ಏನೇನು ಸಾಧ್ಯವೋ ಅದನೆಲ್ಲ ಸಾಧನಗಳನ್ನು ಬಳಸುತ್ತಿದ್ದರು.

ವಿವಿಧ ರೀತಿಯ ಕೋಟೆಗಳು : –

ಕೋಟೆಗಳು ಯಾವ ಯಾವ ರೀತಿ ರಚಿತವಾಗುತ್ತಿದ್ದವು ಹಾಗೂ ಅವುಗಳ ರಚನೆ ವಿನ್ಯಾಸವೇನೆಂಬುದನ್ನು ತಿಳಿಯಬೇಕಾದರೆ ನಾವು ಶಾಸನ ಹಾಗೂ ಕಾವ್ಯಗಳಲ್ಲಿ ನೋಡಬಹುದು ಕನ್ನಡ ಶಾಸನಗಳು ಮೂರು ರೀತಿಯ ದುರ್ಗಗಳನ್ನು ತಿಳಿಸುತ್ತದೆ. ಗಿರಿದುರ್ಗ, ವನದುರ್ಗ, ಜಲದುರ್ಗ, ದುರ್ಗಸಿಂಹ ಎಂಬ ಕನ್ನಡ ಕವಿ "ಪಂಚತಂತ್ರವನ್ನು ಕನ್ನಡದಲ್ಲಿ ಬರೆದಿದ್ದಾನೆ. ಅದರ ಜೊತೆಗೆ ಸ್ಥಲದುರ್ಗ"ವೆಂಬ ನಾಲ್ಕನೆಯ ಕೋಟೆಯೊಂದನ್ನು ತಿಳಿಸಿದ್ದಾರೆ. ಒಟ್ಟಾರೆ ಎಂಟು ದುರ್ಗಗಳ ವಿವರ ನೀಡಿದ್ದಾರೆ.

ಜಲದುರ್ಗ : – ಎರಡು ನಾಡಿಗೂ ಸಂಗಮದ ಮಧ್ಯದ ದುರ್ಗ.

ಗಿರಿದುರ್ಗ : – ಬಹಳ ಎತ್ತರವಾದ ಬೆಟ್ಟದ ತುದಿಗಳು ನಾಲ್ಕು ಕಡೆಯಿದ್ದು ಒಂದೇ ಬಾಗಿಲು ಉಳ್ಳ ದುರ್ಗಗುಹ್ಯ.

ಸ್ಥಲದುರ್ಗ : – ದುರ್ಗದ ಹೊರಗೆ ಉಪ್ಪು ನೀರು ಕುಡಿಯಲು ಬಾರದ ನೀರು ಅಥವಾ ಸ್ವಲ್ಪ ಮಾತ್ರವೇ ನೀರು ಇರುವಂಥ ದುರ್ಗ.

ವನದುರ್ಗ : – ಸುತ್ತ ನೀರು ತುಂಬಿದ ಜಲಾಶಯ ಹೆದರಿಸುವಷ್ಟು ತಡೆಯಲು ಅಸಾಧ್ಯ ಎನಿಸುವಷ್ಟು ಅತಿ ಶೀತಿಲವಾದ ಕೆಸರುಳ್ಳದ್ದು ಅನೇಕ ಮರಗಳಿಂದ ಆವೃತವಾಗಿರುವ ದುರ್ಗ.

ಕ್ರಿ. ಶ. ೧೭೧೧ ರಲ್ಲಿ ಪೇಶ್ವೆ, ಬಾಲಾಜಿ, ವಿಶ್ವನಾಥ ಮತ್ತು ಮರಾಠಿ ಪರಿವಾರ ಚಂದ್ರಸೇನ, ಜಾಧವನ ನಡುವೆ ವೈಮನಸ್ಸು ಉಂಟಾಯಿತು.ಅವರ ಲಾಭವನ್ನು ಪಡೆಯಲು ನಿಜಾಮರು ನಿರ್ಧರಿಸಿ ಮೋಘಲ್ ರಾಜನಾದ ಬಹದ್ದೂರ್ ಶಾಹನ ಪ್ರತಿನಿದಿ ಹಾಗೂ ಔರಂಗಬಾದಿನ ಸುಬೇದಾರನ ನವಾಬನಾಗಿದ್ದ ದಾವೂದ್‌ಖಾನ್ ಪನ್ನಿ ಮುಖಾಂತರ ಚಂದ್ರಸೇನ ಜಾಧವವನ್ನು ೧೭೧೪ ರಲ್ಲಿ ಭಾಲ್ಕಿಯ ಸಾಮಂತನಾಗಿ ನೇಮಿಸಲಾಗುತ್ತದೆ. ಈ ನಡುವೆ ನಿಜಾಮನು ಮರಾಠರಿಗೆ ಕೊಡುತ್ತಿದ್ದ ಚೌತ್ ಮತ್ತು ಸರದೇಶಮುಖಿ ತೆರಿಗೆಯನ್ನು ಕೊಡುವ ಬದಲು ಕೆಲವು ಪ್ರದೇಶಗಳನ್ನು ಬಿಟ್ಟು ಕೊಟ್ಟನು. ಇದರಿಂದ ಈ ಭಾಗದಲ್ಲಿ ಮರಾಠರ ಅಧಿಕಾರ ಅಥವಾ ಪ್ರಾಬಲ್ಯ ಹೆಚ್ಚಾಯಿತು.

ಚಂದ್ರಸೇನ ಜಾಧವನ ಆಳ್ವಿಕೆಯಲ್ಲಿ ಪ್ರಸ್ತುತ ಸ್ಥಿತಿಯಲ್ಲಿರುವ ಕೋಟೆಯನ್ನು ಪುನರ್ ನಿರ್ಮಾಣ ಮಾಡಲಾಗಿದ್ದು ಅದರ ಕಾಲಾವಧಿ ೧೭೧೪ ರಿಂದ ೧೭೨೪ ಎಂದು ಗುರುತಿಸಲಾಗುತ್ತದೆ. ರಂಗಮಹಲಿನ ಪ್ರವೇಶ ದ್ವಾರದ ಮೇಲ್ಭಾಗದ ಲಲಾಟಬಿಂದು, ಮತ್ತೆರಡು ಕಡೆಗಳಲ್ಲಿರುವ ಚಂದ್ರನ ಉಬ್ಬು ಶಿಲ್ಪವೇ ಈ ಕೋಟೆಯ ನಿರ್ಮಾತೃ ಚಂದ್ರಸೇನ ಎಂದು ಹೇಳಲಾಗುತ್ತದೆ. ಮತ್ತೊಂದು ಆಧಾರ ಕ್ರಿ. ಶ. ೧೭೨೪ ರಲ್ಲಿ ನಿಜಾಮನು ತನ್ನ ಸೈನ್ಯಾಧಿಕಾರಿಗಳ ಸಹಾಯದಿಂದ ಚಂದ್ರಸೇನ ಜಾಧವನನ್ನು ಕರಕನಳ್ಳಿ ಘಟಕ್ಕೆ ನಂಬಿಸಿ ಕರೆದೊಯ್ದು ಕೊಲೆ ಮಾಡಿದ ಮೇಲೆ ಈ ಕೋಟೆ ನಿಜಾಮನ ವಶವಾಯಿತು. ೧೭೨೪ ರಲ್ಲಿ ನಿಜಾಮ ಅರಸರು ಈ ಕೋಟೆಗೊಬ್ಬ ಅಧಿಕಾರಿಯನ್ನು ನೇಮಿಸಿದ್ದರು. ಆತನನ್ನು ನಮ್ಮ ಹಿರಿಯ ತಲೆಮಾರಿನವರು ಕೋಟೆಯಲ್ಲಿ ಕಂಡಿದ್ದೇವೆ ಎಂದು ಹೇಳುತ್ತಾರೆ.

ಕೋಟೆಯ ವಿಸ್ತರಣೆ ಮತ್ತು ವಿವರ : –

ಎಂಟು ಎಕರೆ ಭೂಪ್ರದೇಶದಲ್ಲಿ ಕರಿಕಲ್ಲಿನಿಂದ ಕಟ್ಟಲಾದ ಈ ಭದ್ರವಾದ ಕೋಟೆ ಇದು ಚೌಕಾಕಾರದ ಮಾದರಿಯಲ್ಲಿದ್ದು, ಕೋಟೆಯು ಉತ್ತರ ದಿಕ್ಕಿನಲ್ಲಿ ಪ್ರವೇಶ ದ್ವಾರವಿದ್ದರೂ ಅದು ಪೂರ್ವಾಭಿಮುಖವಾಗಿದೆ. ಈ ದ್ವಾರದ ಮೇಲ್ಭಾಗದಲ್ಲಿ ಚಂದ್ರನ ರೇಖಾಚಿತ್ರ ಹಾಗೂ ಲಲಾಟ ಬಿಂದುಗಳಿವೆ. ಇದು ನೆಲಪಾತಳಿಯಿಂದ ಸುಮಾರು ೧೦ ಅಡಿ ಎತ್ತರದಲ್ಲಿದೆ. ಕೋಟೆಯೊಳಗೆ ಪ್ರವೇಶಿಸಲು ಕಲ್ಲು ಚಪ್ಪಡಿಗಳ ಹಾಸಿಗೆಯುಳ್ಳ ಏರು ರಸ್ತೆ ಇತ್ತು. ಜನರು ಈ ಕಲ್ಲು, ಮಣ್ಣು ಹೊತ್ತುಕೊಂಡು ಹೋಗಿರುವುದರಿಂದ ಈ ಪ್ರವೇಶದ್ವಾರದ ಮೂಲಕ ಕೋಟೆಯ ಒಳಗೆ ಪ್ರವೇಶಿಸಲು ಆಗುವುದಿಲ್ಲ. ಕೋಟೆಯ ಪಶ್ಚಿಮ ದಿಕ್ಕಿನಲ್ಲಿ ನಿರ್ಮಿಸಲಾಗಿರುವ ಕಿಂಡಿಯ ಮೂಲಕ ಒಳಗೆ ಪ್ರವೇಶಿಸಬಹುದು. ಈ ಕೋಟೆಯು ಆಳವಾದ ಒಂದು ಸುತ್ತಿನ ಕಂದಕ ಭವ್ಯವಾದ ಪ್ರವೇಶದ್ವಾರ ವಿಶಾಲವಾದ ಪ್ರಾಂಗಣಹೊಂದಿದೆ. ಬಿಜ್ಜಳ ಹಾಗೂ ಹಲವಾರು ಅಂತಹ ಗೋಪುರಗಳನ್ನು ಒಳಗೊಂಡಿದೆ. ಸುಮಾರು ೧೫೦ ಅಡಿಗಳಷ್ಟು ಎತ್ತರವಾಗಿದೆ. ಭದ್ರತೆಯ

ದೃಷ್ಟಿಯಿಂದ ಈ ಕೋಟೆಯನ್ನು ಬಹಳಷ್ಟು ಸುವ್ಯವಸ್ಥೆಯಿಂದ ನಿರ್ಮಿಸಲಾಗಿದೆ. ಕೋಟೆಯ ಪ್ರಾಂಗಣದ ಕೆಳಗಡೆ ಸಾವಿರಾರು ಜನರು ನಿಲ್ಲಬಹುದಾದ ತಳಮಾಳಿಗೆ ಇದೆ. ಇದರ ಮುಂದೇ ಕೋಟೆಗೆ ಒಟ್ಟು ಏಳು ಬುರುಜುಗಳಿವೆ. ಪ್ರತಿ ಬುರುಜಿನ ಮೇಲೆ ತೋಪುಗಳನ್ನಿಡಲು ವ್ಯವಸ್ಥೆ ಮಾಡಲಾಗಿದೆ. ಮಧ್ಯದ ಬುರುಜು ಗಗನ ಚುಂಬಿಯಾಗಿದೆ. ನಾಲ್ಕೈದು ಜನರು ಕುಳಿತುಕೊಳ್ಳಬಹುದಾದಷ್ಟು ಸಿಂಹಾಸನ ಮಾದರಿಯ ಈ ಬುರುಜು ಆಕರ್ಷಕವಾಗಿದೆ. ಈ ಬುರುಜಿನ ವಿಶೇಷತೆ ಏನೆಂದರೆ ಅದು ಒಂದು ಕಿಲೋಮಿಟರ್ ದೂರದಲ್ಲಿರುವ ಭಾಲ್ಕಿ ಅಗಸಿ ಹನುಮಾನ ದೇವರ ವಿಗ್ರಹ ದೇವಾಲಯದಲ್ಲಿರುವ ನಂದಾದೀಪವನ್ನು ನೇರವಾಗಿ ಕಾಣುವಲ್ಲಿ ೨೫ ರಿಂದ ೨೫ ಅಡಿಗಳ ವಿಸ್ತೀರ್ಣದ ಏಳು ಕೊತ್ತಲುಗಳಿಗೂ ಹಲವಾರು ತೆನೆಗಳಿವೆ. ಪ್ರತಿ ಕೊತ್ತಲುಗಳ ಮೇಲೆ ತೋಫುಗಳನ್ನಿಡಲು ಸೈನಿಕರು ಪ್ರತಿದಾಳಿಕಾರರಿಂದ ರಕ್ಷಣೆ ಪಡೆಯಲು ಅನುಕೂಲವಾಗುವಂತೆ. ಮದ್ದುಗುಂಡುಗಳನ್ನು ಸಂಗ್ರಹಿಸಿಡಲು ಕೊತ್ತಲುಗಳ ಒಳ ಆವರಣಗಳಲ್ಲಿ ಕೈಗಾಡಿ ಬಂಡಿಗಳ ಸುಗಮ ಸಂಚಾರಕ್ಕಾಗಿ ಸಾಕಷ್ಟು ಸ್ಥಳವಿದೆ.

ಡಾ॥ ಬಸವರಾಜ. ಎ. ಭಾಗಾ

೪ ಬೀದರ ಕೋಟೆ

ಕ್ರಿ. ಶ ೧೪೪೯ರಲ್ಲಿ ಯೂಸುಫ್ ಆದಿಲ್‌ಶಾಹಿ ಸ್ವತಂತ್ರವಾಸ ಸಾಮ್ರಾಜ್ಯವನ್ನು ದಖ್ಖನ ಭಾರತದಲ್ಲಿ ಸ್ಥಾಪಿಸಿದನು. ಒಟ್ಟು ೯ ಜನ ಸುಲ್ತಾನರು ೨೦೦ ವರ್ಷಗಳ ಕಾಲ ಬಿಜಾಪುರವನ್ನು ರಾಜಧಾನಿ ಮಾಡಿಕೊಂಡು ದಕ್ಷಿಣ ಭಾರತದಲ್ಲಿ ಅನೇಕ ರಾಜ ಮನೆತನಗಳ ಸೋಲಿಸುವುದರ ಮುಖಾಂತರ ದಖ್ಖನದಲ್ಲಿ ತಮ್ಮ ˆಅಧಿಪತ್ಯವನ್ನು ಸ್ಥಾಪಿಸಿದ್ದಾರೆ. ಅದರಲ್ಲಿ ಬೀದರ ಜಿಲ್ಲೆ ಒಂದಾಗಿದೆ. ಈ ಜಿಲ್ಲೆಯಲ್ಲಿ ಅನೇಕ ಧಾರ್ಮಿಕೇತರ ಕಟ್ಟಡಗಳನ್ನು ನಿರ್ಮಿಸಿದ್ದಾರೆ. ಇವುಗಳ ಬಗ್ಗೆ ೧೪ ಪ್ರಕಟಿತ ಪರ್ಶಿಯನ್ ಮತ್ತು ಅರೆಬೀಕ್ ಬಾಷೆಯ ಶಾಸನಗಳಲ್ಲಿ ದಾಖಲಿಸಿದ್ದಾರೆ. ನ್ನ ಸಂಶೋಧನಾ ಮಹಾ ಪ್ರಬಂಧದ ವಿಷಯಸ ಕುರಿತಂತೆ ಈ ಭಾಗದಲ್ಲಿ ಕ್ಷೇತ್ರ ಕಾರ್ಯಕೈಗೊಂಡು ಆದಿಲ್ ಶಾಹಿಗಳ ಧಾರ್ಮಿಕೇತರ ಕಟ್ಟಡಗಳ ಸಮಗ್ರ ಜಾತ್ರೆಯ ಪುನರ ರಚನೆಯ ಹಿನ್ನಲೆಯಲ್ಲಿ ಸಂಶೋಧನಾತ್ಮಕ ಲೇಖನವನ್ನು ಸಿದ್ಧಪಡಿಸಿದೇನೆ ಬೀದರ ಜಿಲ್ಲೆಯಲ್ಲಿ ಇದರ ಮುಂದೇ ೧ ನೇ ಅಲಿ ಆದಿಲ್ ಶಾಹಿ, ೨ನೇ ಇಬ್ರಾಹಿಂ ಆಸಿಲ್ ಶಾಹಿ ಹಾಗೂ ಮಹಮ್ಮದ ಆದಿಲ್ ಶಾಹಿಗೆ ಸಂಬಂಧಿಸಿದ ಶಾಸನಗಳು ಬೀದರದಲ್ಲಿ ೪ ಹಾಗೂ ಬಸವಕಲ್ಯಾಣದಲ್ಲಿ ಬಸವಕಲ್ಯಾಣದಲ್ಲಿ ೧೦ ಶಾಸನಗಳನ್ನು ಆಧರಿಸಿ ಈ ಕೆಳಗುನಂತೆ ವಿಶ್ಲೇಷಣೆಗೆ ಒಳಪಟಿಸಿದ್ದೇನೆ. ಧಾರ್ಮಿಕೇತರ : ಕಟ್ಟಡಗಳೆಂದರೆ ಪೂಜೆ ಮತ್ತು ಪ್ರಾಥನೆಗಳು ಮಾಡದೇ ಇರುವಂತಹ ಸ್ಥಳಗಳಾಗಿವೆ ಉದಾಹರಣೆಗೆ ಮಸೀದಿ ಮತ್ತು ದರ್ಗಾಗಳು ಧಾರ್ಮಿಕ ಕಟ್ಟಡಗಳಾಗಿವೆ. ಇವುಗಳನ್ನೂ ಹೋರತು ಪಡೆಸಿದ ಕಟ್ಟಡಗಳೇ ಧಾರ್ಮಿಕೇತರ ಕೋಟೆಗಳು ಕೊತ್ತಲಗಳು, ಅರಮನೆಗಳು, ಬುರುಜುಗಳು ಆಡಳಿತ ಕಛೇರಿಗಳು ಸಂಗೀತ ಮಹಲಗಳು, ನ್ಯಾಯಲಯಗಳು, ಕೆರೆ, ಬಾವಿ, ಕಾಲುವೆ, ಗೋರಿಗಳು ಮುಂತಾದವುಗಳಾಗಿವೆ.

ಬೀದರ ಕರ್ನಾಟಕ ಉತ್ತರ- ಪೂರ್ವ ಭಾಗದಲ್ಲಿರುವ ಬೀದರ ಜಿಲ್ಲೆಯು ಉತ್ತಮ ಹವಮಾನ ಪ್ರಕೃತಿ ಸೌಂದರ್ಯದಿಂದ ಕೂಡಿದೆ. ಇದರ ವಿಸ್ತೀರ್ಣ ೫೪೫೧ ಚ. ಕಿ.ಮೀ ಹೊಂದಿದೆ. ಬಿದಿರೂರುಪುರ, ಮೊಹಮ್ಮದಾಬಾದ ಬೀದರ, ಜಾಫರಬಾದ ಬೀದರ ಎಂದು ಈ ಸ್ಥಳಕ್ಕೆ ಕರೆಯುತ್ತಾರೆ. ಕಲ್ಯಾಣದ ಚಾಲ್ಯುಕ್ಯರು. ಕಲಚೂರುಗಳು, ತುಘಲಕ್, ವಿಜಯನಗರ, ಬಹುಮನಿಗಳು. ಆದಿಲ್ ಶಾಹಿಗಳು, ಬರೀದ್ ಶಾಹಿ ಹಾಗೂ ಔರಂಗಜೇಬನ ಆಳ್ವಿಕೆಗೆ ಒಳಪಟ್ಟಿತ್ತು. ೧ನೇ ಅಹಮ್ಮದ ಷಾ ಎಂಬ ಬಹುಮನಿ ಸುಲ್ತಾನ ಕ್ರಿ.ಶ ೧೪೨೪ ರಲ್ಲಿ ಗುಲಬರ್ಗಾದಿಂದ - ಬೀದರಗೆ ರಾಜಧಾನಿ ಬದಲಾವಣೆ ಮಾಡಿದ ಬಳಿಕ ಇಲ್ಲಿ ಭದ್ರವಾಸ

ಬೀದರ ಜಿಲ್ಲೆಯ ಬಜಾಪುರ ಅದಿಲ್‌ಶಾಹಿಗಳ ದಾಮಿಕೇತರ ಕಟ್ಟಡಗಳು
ಪ್ರೊ. ಎಮ್. ಎನ್. ಬೆನ್ನೂರ

ಕೋಟೆ,ಕೊತ್ತಳ, ಬುರುಜು, ಕಂದಕ,ಕಾಲುವೆ, ಬಾವಿ, ಕೆರೆ, ಟರ್ಕಿಶ್ ಮಹಲ್, ತಖ್ತ ಮಹಲ್, ತರ್ಕಷ್ ಮಹಲ್, ರಂಗೀನ ಮಹಲ್, ಗಗನ ಮಹಲ್, ಅರಮನೆಗಳು, ಅಡಿಗೆ ಮನೆ, ದರ್ಬಾರ್ ಸಭಾಂಗಣ, ಸೋಲಾಖಂಬ್, ಮಸೀದಿ, ನೌಬತ್‌ಖಾನಾ, ಮದ್ದಿನ ಮನೆಗಳು, ಕೆರೆ, ಬಾವಿ ಮುಂತಾದವುಗಳಿವೆ. ಗುಂಬಜ್ ದರ್ವಾಜದಿಂದ ಮಾಂಡು ದರ್ವಾಜಕ್ಕೆ ಹೋಗುವ ದಾರಿಯ ಎಡ ಭಾಗದಲ್ಲಿ ಒಂದು ದೊಡ್ಡ ಮದ್ದಿನ ಮನೆಯಿದೆ. ಇದರಲ್ಲಿ ಅರ್ಧ ಭಾಗ ನೆಲ ಮಟ್ಟದಿಂದ ಕೆಳಗಿರುವ ಎರಡು ಕೊಠಡಿಗಳ ಮಧ್ಯದಲ್ಲಿವೆ. ಅವುಗಳ ಸುತ್ತಲು ಮೂರು ದಿಕ್ಕಿಗೆ ಉಳಿದ ಕೊಠಡಿಗಳಿವೆ. ಈ ಕೋಠಡಿಗಳಿವೆ. ಈ ಕೊಠಡಿಗಳಿಗೆ ಗುಮ್ಮಟಗಳ ಮೇಲೆ ಕಿಂಡಿಗಳಿವೆ. ಹತ್ತಿರದಲ್ಲಿ ಅಗಲ ಮತ್ತು ಆಳವಾಗ ಹತ್ತು ಒರಳು ಕಲ್ಲುಗಳಿವೆ. ಇವುಗಳನ್ನು ಮದ್ದು ತೈಯಾರಿಸಿಸಲು ಉಪಯೋಗಿಸಲಾಗುತಿತ್ತು.

ಕೋಟೆಯ ದಕ್ಷಿಣಕ್ಕಿರುವ ನಗರ ಸುತ್ತಲು ಮತ್ತೊಂದು ಕೋಟೆಯಿದೆ. ೧೫ ನೇಯ ಶತಮಾನದಲ್ಲಿ ಕಟ್ಟಿರಬಹುದಾದ ಈ ಕೋಟೆಯಲ್ಲಿ ಶಾಹಗಂಜ್ ದರ್ವಾಜ್, ದುಲಹನ್ ದರ್ವಾಜ ಮತ್ತು ತಲಘಾಟ್ ದರ್ವಾಜವೆಂಬ ೫ ಬಾಗಿಲುಗಳ ೩೭ ಬುರುಜುಗಳು ಮತ್ತು ೮ ಬತೇರಿಗಳಿವೆ. ಕೋಟೆಯ ಹೊರಗೆ ಆಳ ಮತ್ತು ಅಗಲವಾದ ಕಂದಕವಿದೆ. ಪಶ್ಚಿಮ ದಿಕ್ಕಿಗಿರುವ ಮುಂಡಾ ಬುರುಜಿನ ಮೇಲೆ ೬.೧೫ ಮೀ ಉದ್ದವಿರುವ 'ಖಾಸಿಮ್ ಬರೀದ ಶಾಹನ' ಕಾಲದಲ್ಲಿ ಕ್ರಿ. ಶ. ೧೫೯೧ ರಲ್ಲಿ ತೈಯಾರಿಸಿದ ತೋಪ-ಇ-ಮುಹಮ್ಮದ್ ಶಾಹಿ' ಎಂಬ ಹೆಸರಿನ ದೊಡ್ಡ ತೋಪಿದೆ. ಈ ಕೋಟೆಯೊಳಗೆ ಮಹಮ್ಮುದ, ಮಹಮ್ಮದ ಗವಾನ, ಮದರಸಾ, ಚೌಬಾರ, ಮಸೀದಿಗಳು, ಗೋರಿಗಳು ಮುಂತಾದವುಗಳಿವೆ.

ಬರೀದ್ ಶಾಹಿ ಅರಸರು.

೧. ಖಾಸಿಮ್ ಬರೀದ್ (ಕ್ರಿ.ಶ ೧೫೦೪).
೨. ಅಮೀರ್ ಅಲಿ (ಕ್ರಿ.ಶ ೧೫೦೪-೪೩)
೩. ಅಲಿ ಬರಿದ್ (ಕ್ರಿ.ಶ ೧೫೪೩-೮೦).
೪. ಇಬ್ರಾಹಿಮ್ (ಕ್ರಿ.ಶ ೧೫೪೩-೮೦).
೫. ಕಾಸಿಮ ಬರೀದ್ (ಕ್ರಿ.ಶ ೧೫೮೭-೯೨).
೬. ಅಮೀರ್ ಬರೀದ್ (ಕ್ರಿ.ಶ ೧೫೯೨-೧೬೦೦).
೭. ಮಿರ್ಜಾ ಅಲಿ (ಕ್ರಿ.ಶ ೧೬೦೦-೧೬೦೯).
೮. ಅಮೀರ್ ಬರೀದ್ (ಕ್ರಿ.ಶ ೧೬೦೯-೧೯).

ಮೂರನೆಯ ಮಹಮ್ಮದ ಶಾಷನ ಕಾಲದಲ್ಲಿ ಕ್ರಿ ಶ ೧೪೬೩-೮೨ ಸಿಡಿಮದ್ದಿನ ಬಳಕೆ ಹೆಚಾದಾಗ ಅದಕ್ಕೆ ತಕ್ಕಂತೆ ಕೋಟೆಯ ರಚನೆಯನ್ನು ಮಾರ್ಪಡಿಸಿ ತೋಪುಗಳನ್ನು ಅಳವಡಿಸಿ ಗೋಡೆಗಳನ್ನು ಮತ್ತಷ್ಟು ಬಲಪಡಿಸಲಾಯಿತು. ಬಹಮನಿ ಅರಸರ ನಂತರ ಅಧಿಕಾರಕ್ಕೆ ಬಂದ ಬರೀದ್, ಬಿಜಾಪೂರದ ಆದಿಲ್ ಷಾಹಿ ಅರಸರ ವಶವಾದರೂ ತನ್ನ ಮಹತ್ವ ವೈಶಿಷ್ಟ್ಯತೆ ಕಳೆದುಕೊಳ್ಳಲಿಲ್ಲ. ಇಬ್ರಾಹಿಂ ಆದಿಲ್ ಷಾಹನ ಆದಿಕಾರಿಯಾಗಿದ್ದ ಮಲ್ಲಿಕ್ ಮರ್ಜಾನನ್ನು ಬೀದರಿನ ಕೋಟೆ ಮತ್ತು ಅರಮನೆಗಳನ್ನು ದುರಸ್ತಿ ಪಡಿಸಿದ. ಮೋಘಲ್ ಚಕ್ರವರ್ತಿ ಔರಂಗಜೇಬನು ಕ್ರಿ. ಶ ೧೬೫೬ ರಲ್ಲಿ ಬೀದರನ್ನು ಗೆದ್ದು ತನ್ನ ಆದಿಪತ್ಯಕ್ಕೆ ಅಥವಾ ರಾಜ್ಯಕ್ಕೆ ಸೇರಿಸಿಕೊಂಡು. ಇದರ ಹೆಸರನ್ನು ಜಾಫರಾಬಾದ ಎಂದು ಹೆಸರನ್ನಿಟ್ಟನು. ಕೊನೆಗೆ ಕ್ರಿ. ಶ. ೧೭೨೪ ರಲ್ಲಿ ಹೈದ್ರಾಬಾದಿನ ನಿಜಾಮ್ ಉಲ್‌ಮುಲ್ಕ್ ಆಸಫ್‌ರನ್ನೂ ಈ ಪಟ್ಟಣವನ್ನು ತನ್ನ ರಾಜ್ಯದಲ್ಲಿ ಸೇರಿಸಿಕೊಂಡನು. ಅಲ್ಲಿಂದ ಇದು ರಾಜಧಾನಿ ಪಟ್ಟಣವನ್ನು ಕಳೆದುಕೊಂಡು ಜಿಲ್ಲಾ ಕೇಂದ್ರವಾಗಿ ಉಳಿದು ತನ್ನ ಮಹತ್ವವನ್ನು ಕಳೆದುಕೊಂಡಿತು.

ಕೋಟೆಗಳು :

ಕೋಟೆಗಳನ್ನು ಅನಿಯತಕಾರದ ಭೂಶಿರದ ಮೇಲೆ ಅದರ ಆಕಾರಕ್ಕನುಗುಣವಾಗಿ ಕಟ್ಟಿದೆ. ಭೂಶಿರ ಭಾಗವು ಉತ್ತರ ಮತ್ತು ಪೂರ್ವಕ್ಕೆ ಅತಿ ಎತ್ತರವಾಗಿದ್ದು ಕ್ರಮೇಣ ಕಡಿಮೆಯಾಗುತ್ತ ದಕ್ಷಿಣಕ್ಕೆ ಸುತ್ತಲಿನ ನೆಲಮಟ್ಟದಲ್ಲಿದೆ. ಕೋಟೆಯ ಸುತ್ತಲು ಹುಟ್ಟು ಬಂಡೆಯಲ್ಲಿ ಕೊರೆದ ಅಗಲ ಮತ್ತು ಆಳವಾದ ಕಂದಕವಿದೆ. ಉತ್ತರ ಭಾಗದಲ್ಲಿ ಭೂಶರವನ್ನು ಕಂದಕ ಮಾಡುವುದಕ್ಕಾಗಿ ಕೊರೆದಿರುವುದರಿಂದ ಬದಿಯನ್ನು ಕತ್ತರಿಸಿದ ಬೆಟ್ಟದ ಮೇಲೆ ಕೋಟೆಯನ್ನು ಕಟ್ಟಿದಂತೆ ಕಾಣುತ್ತದೆ. ದಕ್ಷಿಣ ಮತ್ತು ಪಶ್ಚಿಮ ಭಾಗದಲ್ಲಿ ಕೋಟೆಯನ್ನು ನೆಲಮಟ್ಟದಲ್ಲಿ ಕಟ್ಟಿರುವುದರಿಂದ ಇಲ್ಲಿ ಕಂದಕದ ಅಗಲ ಇನ್ನೂ ಹೆಚ್ಚಾಗಿದ್ದು ಮಧ್ಯದಲ್ಲಿ ಬಂಡೆಗಳಲ್ಲಿನ ಭಾಗಗಳನ್ನು ಕೊರೆಯದೆ ಗೋಡೆಯಂತೆ ಬಿಟ್ಟು ಮೂರು ಭಾಗಗಳಲ್ಲಿ ವಿಭಾಗಿಸಿದೆ. ೬ ಮೀ. ಆಳವಾಗಿರುವ ಕಂದಕದ ಒಳಗಿನ ಎರಡು ಭಾಗಗಳು ಸುಮಾರು ೧೦-೫೦ ಮೀ, ಅಗಲ ಮತ್ತು ಹೊರಬಾಗ ಸುಮಾರು ೧೫, ೧೩ ಮೀ ಅಗಲವಾಗಿವೆ.

ಈ ಮುಮ್ಮಡಿ ಕಂದಕವು ಬೀದರ ಕೋಟೆಯ ವೈಶಿಷ್ಟವಾಗಿದೆ. ಕೋಟೆಯ ಕೆಲವು ಬಾಗಿಲುಗಲಿವೆ. ಸುತ್ತಳತೆ ಸುಮಾರು ೪ ಕಿ.ಮೀ ಕೋಟೆಯಲ್ಲಿ ೩೭ ಬುರುಜುಗಳು ಮತ್ತು ೮ ಬಾಗಿಲುಗಳಿವೆ. ಬಾಗಿಲುಗಳ ಹೆಸರುಗಳು ಈ ಕೆಳಗಿನಂತಿವೆ.

೧. ಶೆರ್ಜದರ್ವಾಜ ಇಲ್ಲಿ

೨. ಮಾಂಡುದರ್ವಾಜ

೩. ಗುಜಂಜ್ ದರ್ವಾಜ (ಬಾಗಿಲು)

೪. ಕಲಮಡಿನ ದರ್ವಾಜ

೫. ಅನಾಮಿಕ ದರ್ವಾಜ

೬. ಅನಾಮಿಕ ದರ್ವಾಜ (ಬಾಗಿಲು)

೭. ದಿಲ್ಲಿ ದರ್ವಾಜ (ಬಾಗಿಲು)

೮. ಕರ್ನಾಟಕ ದರ್ವಾಜ (ಬಾಗಿಲು)

ಕಪ್ಪು ಬಣ್ಣದ ಜ್ವಾಲಾಮುಖಿ ಕಲ್ಲುಗಳಿಂದ ಕಟ್ಟಿದ ಬಲಿಷ್ಠವಾದ ಕೋಟೆಯ ಕೆಲವು ಬುರುಜುಗಳು ದೊಡ್ಡ ಗಾತ್ರದವುಗಳಾಗಿವೆ. ಬುರುಜುಗಳು ಸಾಮಾನ್ಯವಾಗಿ ವೃತ್ತಾಕಾಎ ಮತ್ತು ಅಷ್ಟಭುಜಾಕೃತಿಯಾಗಿದ್ದರೂ ಕೆಲವು ಔಕಾಕಾರವಾಗಿವೆ. ಕೆಲವು ಬುರುಜುಗಳನ್ನು ಕೋಟೆಯ ಗೋಡೆಗಳಿಂದ ಬೇರ್ಪಡಿಸಿ ಒಳಗೆ ಸ್ವಲ್ಪ ದೂರದಲ್ಲಿ ಕಟ್ಟಿದ್ದು ಇವು ಕೋಟೆಗಳಿಗಿಂತ ಎತ್ತರವಾಗಿರುವುದರಿಂದ ಬಲಿಷ್ಠವಾದ ತೋಪುಗಳನ್ನು ಹೊಂದಿವೆ. ದಿಲ್ಲಿ ದರ್ವಾಜದಿಂದ ಎತ್ತರದ ತುದುಯವೆಗಿನ ಎತ್ತರವಾದ ತೆನೆಗಳಿವೆ. ಅವುಗಳಲ್ಲಿ ಬಂದೂಕುಗಳಿಗಾಗಿ ಹಾಗೂ ಚಿಕ್ಕ ಚಿಕ್ಕ ತೋಪುಗಳಿಗಾಗಿ ಮಾಡಿದ ಅಗಲವಾದ ಕಿಂಡಿಗಳಿವೆ. ಮುಖ್ಯ ಬಾಗಿಲಾಗಿರುವ ಶೆರ್ಜ ದರ್ವಾಜದ ಹತ್ತಿರ ಗೋಡೆಯು ಹಲವು ಬಾರಿ ದುರಸ್ತಿಯಾಗಿದೆ. ಮೊದಲ ಕಟ್ಟಿದ ಗೋಡೆಯನ್ನು ದೊಡ್ಡ ಕಲ್ಲು ಮತ್ತು ಗಾರೆಯಿಂದ ಕಟ್ಟಿದೆ. ಕಲ್ಲುಗಳ ಜೋಡಣೆ ಅಚ್ಚು ಕಟ್ಟಾಗಿದ್ದು, ಮಧ್ಯದಲ್ಲಿರುವ ಗಾರೆ ಕಾಣುವುದಿಲ್ಲ. ನಂತರ ಕಟ್ಟಿದ ಗೋಡೆಯಲ್ಲಿ ಚಿಕ್ಕ ಕಲ್ಲುಗಳಿಂದ ಮತ್ತು ಕಲ್ಲುಗಳು ಮಧ್ಯದಲ್ಲಿಯ ಗಾರೆ ಎದ್ದು ಕಾಣುತ್ತದೆ.

ನಗರದೊಳಗಿನಿಂದ ಆಗ್ನೇಯ ದಿಕ್ಕಿನಲ್ಲಿ ಕೋಟೆಗೆ ಪ್ರವೇಶ ನೀಡುವ ಶೆರ್ಜ ದರ್ವಾಜವೇ ಮುಖ್ಯ ಬಾಗಿಲು. ಈ ಬಾಗಿಲು ಸಂಕೀರ್ಣದಲ್ಲಿ ಹೊರಬಾಗಿಲ ಕಂದಕಗಳನ್ನು ಆನೆಯ ದಾಳಿಯಿಂದ ರಕ್ಷಿಸಲು ಅವುಗಳಿಗೆ ಚೂಪಾದ ಶೂಲಗಳನ್ನು ಮತ್ತು ದಪ್ಪ ತಲೆಯ ಮೊಳೆಗಳನ್ನು ಜೋಡಿಸಲಾಗಿದೆ. ಪ್ರದೇಶದ ಒಳ ಮಾಳಿಗೆ ಕಮಾನಿನಾಕಾರದಲ್ಲಿದೆ. ಇದನ್ನು ಮೊಘಲರ ಪ್ರಾಂತ್ಯಾಧಿಕಾರಿ ಮುಖ್ತಾರ್‌ಖಾನ್ ಅಲಿ ಹುಸೈನಿ ಕ್ರಿ. ಶ ೧೬೮೩ ರಲ್ಲಿ ಮೊಘಲರು ಕಟ್ಟಿಸಿರುವುದು ಶಾಸನದಿಂದ ತಿಳಿದು ಬರುತ್ತದೆ. ಹೊರ ಮತ್ತು ಮಧ್ಯದ ಬಾಗಿಲುಗಳ ನಡುವೆ ಇರುವ ತೆರೆದ ಆವರಣದ ಸುತ್ತಲು ಕಾವಲುಗಾರರ ಕೊಠಡಿಗಳಿವೆ. ಮಧ್ಯದ ಅಥವಾ ಎರಡನೆಯ ಬಾಗಿಲಿನ ಮೇಲೆ ಹುಲಿಗಳ ಎರಡು ಶಿಲ್ಪಗಳು ಇರುವುದರಿಂದ ಇದನ್ನು ಶೆರ್ಜ

ದರ್ವಾಜವೆಂದು ಕರೆಯುತ್ತಾರೆ. ಅಲ್ಲಿಯ ಪ್ರತಿರೂಪವಾದ ಹುಲಿಗಳು ಬಾಗಿಲನ್ನು ವೈರಿಗಳಿಂದ ರಕ್ಷಿಸುತ್ತವೆಂಬ ನಂಬಿಕೆಯಿತ್ತು.

ಕೋಟೆಯ ಒಳಗೆ ಉತ್ತರ ತುದಿಯಲ್ಲಿ ಕೋಟೆಯಿದೆ ಇಲ್ಲಿಯ ಕಾವಲುಕಾಂಕೆ ದಕ್ಷಿಣ ಭಾಗದಲ್ಲಿ ಕೋಟೆ ಗೋಡೆಯಿದ್ದು ಅದರಲ್ಲಿ ಒಂದು ಬಾಗವಿದೆ. ಕೋಡೆಯೊಳಗೆ ತಖ್ತಾ ಮೇಲ್ಭಾಗದಲ್ಲಿ ಸಂಗೀತ ಕೋಠಡಿಯಿದೆ. ಈ ಬಾಗಿಲನ್ನು ಬಹುಮನಿ ಮಹಮ್ಮದ್‌ಷಾನ ಆಳ್ವಿಕೆಯಲ್ಲಿ ಕ್ರಿ. ಶ ೧೫೦೩ ರಲ್ಲಿ ಕಟ್ಟಿಸಿರುವುದು ಶಾಸನದಿಂದ ತಿಳಿದು ಬರುತ್ತದೆ. ಎರಡನೆಯ ಮತ್ತು ಮೂರನೆಯ ಬಾಗಿಲುಗಳ ನಡುವೆ ಇರುವ ಉದ್ದವಾದ ದಾರಿಯ ಎರಡೂ ಬದಿಗಳಲ್ಲಿ ಕೋಟೆಗಳ ಗೋಡೆಗಳಿವೆ. ಮೂರನೆಯ ಬಾಗಿಲಿನ ಮೇಲೆ ಗುಮ್ಮಟವಿರುವುದರಿಂದ ಇದನ್ನು ಗುಂಬಜ್ ದರ್ವಾಜವೆಂದು ಕರೆಯುತ್ತಾರೆ. ಎರಡು ವೃತ್ತಕಾರದ ಬುರುಜುಗಳ ಮಧ್ಯದಲ್ಲಿರುವ ಈ ಬಾಗಿಲು ವಾಸ್ತು ವಿನ್ಯಾಸದ ದೃಷ್ಟಿಯಿಂದ ಬಹಳ ಪ್ರಮುಖವಾಗಿದೆ. ಮೇಲೆ ಹೋಂದತೆ ದಪ್ಪ ಕಡಿಮೆಯಾಗುವ ಇದರ ವಿನ್ಯಾಸ ಗೊಡೆಗಳು ಕಡಿಮೆ ಎತ್ತರದ ವಕ್ರಾಕಾರದ ಮೇಲ್ಭಾಗವುಳ್ಳ ತೆನೆಗಳ ಕೈಪಿಡಿ ಗೊಡೆ ಅನೇಕ ವಲಯಗಳ ಗೋಪುರುಗಳು ಮತ್ತು ಗೋಲಾಕಾರದ ಗಮ್ಮಟ ಸಮಕಾಲಿನ (೧೪-೧೫ ನೆಯ ಶತಮಾನದಗಳ) ದಲ್ಲಿಯ ವಾಸ್ತು ವಿನ್ಯಾಸದ ಆಂಶಗಳನ್ನು ಸೂಚಿಸುತ್ತದೆ. ಅದರೆ ಮುಂದಿನ ಕಮಾನಿನ ಅಳತೆ ಮತ್ತು ಆಕಾರ ಪರ್ಶಿಯಾದ ಪ್ರಭಾವವನ್ನು ತೋರಿಸುದೆ. ಪ್ರವೇಶ ಅಷ್ಟಭುಜಕೃತಿಯಲ್ಲಿದ್ದು. ಪಾರ್ಶ್ವಗಳಲ್ಲಿ ಕಾವಲುಗಾರರ ಕೊಠಡಿಗಳು ಇವೆ. ಈ ಬಾಗಿಲನು ಕೋಟೆ ಕಟ್ಟಲು ಪ್ರಾರಂಭಿಸಿದಾಗ ಕ್ರಿ. ಶ ೧೪೨೯ ರಲ್ಲಿ ಕಟ್ಟಿದಂತೆ ತೋರುತ್ತದೆ.

ಪೂರ್ವ ದಿಕ್ಕಿಗಿರುವ ಮಾಂಡು ದರ್ವಾಜ ರಚನೆಯಲ್ಲಿ ವಿಶೇಷವಾಗಿದೆ. ವಿಭಿನ್ನವಾಗಿದೆ. ಬಾಗಿಲ ಮುಂದುವರೆದೆ ಸುತ್ತಲು ಗೊಡೆಗಳಿರುವ ಆವರಣವಿದೆ. ಇದನ್ನು ಕೊಟೆಯ ಹೊರಭಾಗದಿಂದ ನೋಡಿದಾದ ಬಹುಭುಜಾಕೃತಿಯ ಬುರುಜಿನಂತೆ ಕಾಣುತ್ತದೆ ಆವರಣದ ಮಧ್ಯಭಾಗದಲ್ಲಿ ನೆಲಮಟ್ಟಕಿಂತ ಕೆಳಗೆ ಅಷ್ಟಭುಜಾಕೃತಿಯ ಕಾವಲುಗಾರರ ನೆಲಕಾವಲುಗಾರರ ನೆಲ ಕೋಠಡಿಗಳಿವೆ. ಕೊಠಡಿಗಳ ಮೇಲೆ ಮಾಳಿಗೆಯಿದೆ. ಉಳಿದ ಎರಡು ಬದಿಗಳಲ್ಲಿ ಒಂದು ಬದಿಯಿಂದ ಮತ್ತೊಂದು ಬದಿಗೆ ಇಳಿಜಾರು ಮೆಟ್ಟಿಲುಗಳು ದಾರಿಯಿದೆ. ಕೋಟೆಯ ಹೊರಗಿನ ಕಂದಕದಿಂದ ಕೋನೆಯದಾದ ಸುರಂಗ ಮಾರ್ಗವು ವಾಯವ್ಯದಿಂದ ಗೋಡೆಯ ಕೆಳಗಿನಿಂದ ಮೊದಲು ಆಗ್ನೇಯಕ್ಕೆ ನಂತರ ಪೂರ್ವಕ್ಕೆ ಹೋಗಿ, ತಕ್ಷಣ ಏಕ್ಕಬಾಗಿ ಪಶ್ಚಿಮಕ್ಕೆ ತಿರುಗಿ ನೆಲಮನೆಯನ್ನು ಸೇರಿ ಅಲ್ಲಿಂದ ವಾಯುವ್ಯ ದಿಕ್ಕಿನಲ್ಲಿ ಮೇಲೆರುತ್ತದೆ. ನಂತರ ಆವರಣದಲ್ಲಿಯ ಬಾಗಿಲನ್ನು ಸೇರುತ್ತದೆ. ಸುರಂಗ ಮಾರ್ಗವು ಸುತ್ತಲು ಆರು ಕೊಠಡಿಗಳಿರುವ ನೆಲಮನೆಯಲ್ಲಿ ಹೊರಬರುವುದರಿಂದ ಇದರ ಮೂಲಕ ಬರುವ ವೈರಿ ಇಲ್ಲಿರುವ ಕಾವಲುಗಾರರ ಕೈಯಲ್ಲಿ ಸುಲಭವಾಗಿ ಹತ್ಯನಾಗುತಿದ್ದ. ಕಂದಕದಲ್ಲಿ ಕೆಳಮಟ್ಟದಲ್ಲಿರುವ ಸುರಂಗ ಮಾರ್ಗವು

ನೆಲಮಟ್ಟದಲ್ಲಿ ಓಡಾಡುವ ವೈರಿಗೆ ಗೋಚರಿಸುವುದಿಲ್ಲ. ಮತ್ತು ಕೋಟೆಯ ಬಾಗಿಲನ್ನು ಅದರ ಮುಂದಿರುವ ಗೋಡೆಯು ಯಾವುದೇ ಬಾಗಿಲನ್ನು ಹೊಂದಿರದೆ. ಕೋತ್ತಳದಂತೆ ಸುತ್ತುವರಿಸಿರುವುದರಿಂದ ಇದೊಂದು ಬುರುಜ ಎಂದು ಭಾವಿಸಬೇಕಾಗುತ್ತದೆ. ಕೋಟೆಯ ಬಾಗಿಲ ಪ್ರವೇಶದಲ್ಲಿ ಎರಡು ಕಾವಲುಗಾರರ ಕೊಠಡಿಗಳಿವೆ. ಕೋಟೆಯ ಬುರುಜಗಳ ಮೇಲೆ ತೋಪುಗಳಿವೆ, ಮಾಂಡು ದರ್ವಾಜದ ಹತ್ತಿರದ ಬುರುಜಿನ ಮೇಲೆ ಒಂದು ಬಹಳ ದಪ್ಪವಿರುವ ತೋಪಿದೆ. ಉದ್ದ ಪಟ್ಟಿ ಮತ್ತು ಬಳೆಗಳಿಂದ ಮಾಡಿದ ಈ ತೋಪುನ ಉದ್ದ ೪.೫೬ ಮೀ. ಮತ್ತು ಇದರ ಬಾಯಿಯ ವ್ಯಾಸ ೧.೦೬ ಮೀ ಇದರ ಮೇಲೆ ಆರು ಶಾಸನಗಳಿವೆ. ಇದನ್ನು 'ಅಲಿ ಬರೀದನ' ಕಾಲದಲ್ಲಿ ಕ್ರಿ. ಶ ೧೫೭೨ ರಲ್ಲಿ ತಯಾರಿಸಲಾಗಿದೆ. ಕೊಡೆಯ ಉತ್ತರ ತುದುಭಾಗದಲ್ಲಿರುವ ಒಂದು ಬುರುಜಿನ ಮೇಲೆ ಎಂಟು ಶಾಸನಗಳುಳ್ಳ ಫತ್‌ಲಷ್ಕರ್ (ಸೈನ್ಯದ ಜಸಯ) ಹೆಸರಿನ ತೋಪಿದೆ. ೩.೪೬ ಮೀ ಉದ್ದ ಮತ್ತು ೨.೩೬ ಮೀ ಸುತ್ತಳತೆಯು ಈ ತೋಪನ್ನು ಇಬ್ರಾಹಿಮ್ ಬರೀದನ ಕಾಲದಲ್ಲಿ ಕ್ರಿ.ಶ ೧೫೮೦ ರಲ್ಲಿ ತಯಾರಿಸಲಾಯಿತ್ತು. ದಿಲ್ಲಿ ದರ್ವಾಜದ ಹತ್ತಿರದ ಕಲ್ಯಾಣಿ ಬುರುಜಿನ ಮೇಳೆ ಮಹಮ್ಮದ್ ಖಾಸಿಮ್ ಹೆಸರಿದೆ. ಇವನು ಕ್ರಿ.ಶ ೧೭೬೩ ರಿಂದ ೧೮೦೩ ರವರೆಗೆ ಆಳಿದ. ಹೈದ್ರಾಬಾದಿನ ನವಾಬ್ " ನಿಜಾಮ್ ಅಲಿಖಾನ್" ಬಹದ್ದೂರನ ಕಾಳದಲ್ಲಿ ತೋಪುಗಳ ಅಧಿಕಾರಿಯಾಗಿದ್ದನು.

ಮಹಮ್ಮದ್ ಖಾಸಿಮ್‌ನ ಹೆಸರಿನ ಕ್ರಿ.ಶ ೧೭೭೯ ರಲ್ಲಿ ಕಯಾರದ ಮತ್ತೊಂದು ತೋಪು ಪೇಟ್ಲಾ ಬುರುಜಿನ ಮೇಲಿದೆ. ನೈರುತ್ಯ ದಿಕ್ಕಿನಲ್ಲಿರುವ ಲಾಲ ಬುರುಜನ್ನು ಕೆಂಪು ಕಲ್ಲಿನಿಂದ ಕಟ್ಟಿದೆ. ಇದು ಕೋಟೆಯ ಒಳಬಾಗದಲ್ಲಿ ಗೋಡೆಗೆ ತಾಗಿರದೆ ಸ್ವಲ್ಪ ದೂರದಲ್ಲಿದೆ. ಇದರ ಮೇಲೆ ೩.೭೮ ಮೀ. ಉದ್ದವಿರುವ ತೋಪ್-ಇ-ಹೈದರ್ ಹೆಸರಿನ ದೊಡ್ಡ ತೋಪಿದೆ. ಇದರ ನಿರ್ಮಾಣ ಎರಡನೆಯ ಖಾಸಿಮ್ ಬರೀದ್‌ನ ಕಾಲದಲ್ಲಿ ಕ್ರಿ.ಶ ೧೫೮೭ – ೧೫೯೧) ಪ್ರಾರಂಭವಾಗಿ ಕ್ರಿ.ಶ ೧೫೯೬ ರಲ್ಲಿ ಮುಗಿಯಿತು. ಲಾಲ್ ಬುರುಜಿನ ಹತ್ತಿರವಿರುವ ಕಾಲಾ ಬುರುಜನ್ನು ಕರಿ ಕಲ್ಲಿನಿಂದ ಕಟ್ಟಿದೆ. ಇದೂ ಸಹಾ ಕೋಟೆಯ ಗೋಡೆಯಿಂದ ದೂರದಲ್ಲಿದೆ. ಇದರ ಮೇಲೆ ೫.೬೦ ಮೀ ಉದ್ದವಿರುವ 'ಅಲಿ ಬರೀದ್‌ನ' ಕಾಲದಲ್ಲಿ ಕ್ರಿ. ಶ ೧೫೫೯ ರಲ್ಲಿ ತಯಾರಿಸಿದ ದೊಡ್ಡ ತೋಪಿದೆ. ಕೋಟೆಯ ಒಳ ಭಾಗದಲ್ಲಿ ಕೋಟೆ, ಗೋಡೆಯಿಂದ ಬಹಳ ದೂರಲ್ಲಿಯ ವೀರ ಸಂಗಯ್ಯನ ದೇವಾಲಯದ ಪಕ್ಕದ ಬುರುಜಿನ ಮೇಲೆ ಎರಡು ತೋಪುಗಳಿವೆ. ಇವುಗಳಲ್ಲಿ ೮.೮೪, ೮.೮೪ ಮೀ ಉದ್ದವಿರುವ ದೊಡ್ಡ ತೋಪನ್ನು ಹಿಂದೂ ಶೈಲಿಯಲ್ಲಿ ಸರಪಳಿ, ಖಡ್ಗ, ರುದ್ರಾಕ್ಷಿ, ಹೂ. ಎಲೆ ಮತ್ತು ಪಕ್ಷಿಗಳಿಂದ ಸುಂದರವಾಗಿ ಅಲಮಕರಿಸಲಾಗಿದೆ.

ಬೀದರ ಕೋಟೆಯ ನಿರ್ಮಾಣವನ್ನು ಸುಲ್ತಾನ ಆಹಮ್ಮದನು. ಕೋಟೆ ಅತ್ಯಂತ ಚಿತ್ತಾಕರ್ಷಕವಾಗಿದೆ. ಸಮುದ್ರ ಮುಟ್ಟದಿಂದ ಸುಮಾರು ಮೂರು ಸಾವಿರ ಅಡಿ ಎತ್ತರ ಪ್ರಸ್ಥಭೂಮಿಯ ಮೇಲೆ ಸುಸ್ಥಿರವಾದ ಸ್ಥಳದಲ್ಲಿ ನೆಲೆಸಿದೆ. ಗೊಡೆಗಳನ್ನು ಅಖಂಡವಾದ ಉಸುಗು, ಕಲ್ಲುಗಳಿಂದ ಕಟ್ಟಲಾಗಿದೆ. ಇದು ದಕ್ಕ ಬೇರೆ ಅದರೂ, ಎಂಟು ಸಲ ಮುತ್ತಿಗೆ ಹಾಕಿದರೂನ್‌ನಿಂದ ಇದು ವೈರಿಗಳಿಗೆ ಜಗ್ಗಲಿಲ್ಲ. ಕೋಟೆಯ ಗೋಡೆಗಳು ಐವತ್ತು ಅಡಿ ಎತ್ತರ ಮತ್ತು ಪರಧಿ ಮೂರು ಮೈಲಿ ಇವೆ. ಗೋಡೆಯೋಳಗೆ ಕಾಲುವೆ ನಿರ್ಮಿಸಲಾಗಿದೆ. ಬುರುಜುಗಳನ್ನು ಕಟ್ಟಲಾಗಿದೆ. ಗೋಡೆಗಳಿಗೆ ಹೊರ ಭಾಗದಲ್ಲಿ ಸಂರಕ್ಷಣೆಯನ್ನು ಒದಗಿಸಲಾಗಿದೆ. ಕೋಟೆಯ ಎರಡು ಕಡೆಗೆ ಮೂವತ್ತು ಅಡಿ ಪ್ರಪಾತವಿದೆ. ಬುರುಜುಗಳು ಬಹಳ ವಿಶಾಲವಾಗಿದ್ದು ಮೇಲೆ ತೋಪುಗಳನ್ನು ನಿಲ್ಲಿಸುವ ಅನುಕೂಲ ಇವೆ. ಇಲ್ಲಿಯ ತೊಪುಗಳನ್ನು ಅಚ್ಚ ನೀಲ ವರ್ಣದ ಲೋಹದಿಂದ ನಿರ್ಮಿಸಲಾಗಿದ್ದು, ವಿಶೇಷ ರೀತಿಯಿಂದ ಸಂಸ್ಕರಿಸಲಾಗಿದೆ. ಕೆಲವು ತೋಪುಗಳ ಮೇಲೆ ನಿರ್ಮಾಪಕರ ಹೆಸರು ಇದೆ. ಹೇಗೆ ಉಪಯೋಗಿಸಬೇಕೆಂದು ಮದ್ದುಗಳ ವಿವರಣೆಯಿದೆ. ಅಗಳ್ತೆಯನ್ನೊಳಗೊಂಡು ಸಾಲು ಸಾಲಾಗಿ ಸಂರಕ್ಷಣೆವ್ಯೊಹಗಳಿವೆ. ದಾಳಿಕಾರರ ಮೇಲೆ ನೇರವಾಗಿ ಕುದಿಯುವ ಎಣ್ಣೆ ಸುರಿಯಲು ಚತುರ ವಿಧಾನಗಳಿವೆ. ತೋಪುಗಳನ್ನು ಕೂಡಿಸಲು ರಂಧ್ರಗಳಿವೆ. ಮುದ್ದಿನ ಆಕರಗಲಿವೆ. ಕೋಟೆಯಲ್ಲಿ ನೆಲದೊಳಗೆ ಗುಪ್ತ ಮಾರ್ಗಗಳಿವೆ. ನೀರು ಪುರೈಕೆಗಾಗಿ ೧೫೦ ಅಡಿ ಆಳವಾದ ಒಂದು ಒಂದು ಸ್ನಾನಗೃಹ ಮತ್ತು ಒಂದು ಆಯುಧ ಶಾಲೆ ಇದೆ. ಕೋಟೆಯ ನಿರಂತರ ರಕ್ಷಣೆಗಾಗಿ ೭೫ ಅಡಿ ಅಗಲ ಮತ್ತು ೪೫ ಅಡಿ ಆಳವಾದ ಮೂರುಸುತ್ತಿನ ಕಂದಕವಿದೆ. ಇದನ್ನು ಅಖಂಡ ಬಂಡೆಯೊಂದರಲ್ಲಿಯೇ ಕೊರೆಯಲಾಗಿದೆ. ಥಿವೆನಾಟ್ ಎಂಬ ಪ್ರೇಂಚ್ ಪ್ರವಾಸಿಯು ೧೬೬೭ ರಲ್ಲಿ ಬೀದರಿಗೆ ಬೇಟಿ ಕೊಟ್ಟಿದ್ದನು. ಅವನು ಈ ಕೋಟೆಯನ್ನು ಕುರಿತು ಹೀಗೆ ಬಿಂಬಿಸಿದ್ದಾನೆ " ಇದು ಒಂದು ದೊಡ್ಡ ದುರ್ಗ ಮತ್ತು ಗೋಪುರಗಳನ್ನೊಳಗೊಂಡ ಉನ್ನತ ಗೋಡೆಗಳು ಇವನ್ನು ಸುತ್ತುವರಿದಿವೆ. ಗೋಪುರಗಳ ಮೇಲೆ ದೊಡ್ಡ ದೊಡ್ಡ ತೋಪುಗಳನ್ನಿಡಲಾಗಿದೆ. ಕೆಲವು ತೋಪುಗಳ ಬಾಯಿ ಮೂರಡಿ ಅಗಲ ಇದೆ. ಸಾಮನ್ಯವಾಗಿ ಮೂರು ಸಾವಿರ ದುರ್ಗ ರಕ್ಷಕರ ಪಡೆಯೊಂದಿದ್ದು ಅದರಲ್ಲಿ ಅರ್ದ ಅಶ್ವಾರೋಹಿಗಳಿದ್ದಾರೆ. ಉಳಿದ ಅರ್ಧ ಪಡೆಯಲ್ಲಿ ಪಧಾತಿಗಳಿದ್ದಾರೆ.

ಮೈಸೂರು ಸರಕಾರದ ಪ್ರಚಾರ ವಾರ್ತಾ ಇಲಾಖೆಯ ಪ್ರೇಕ್ಷಣಿಕೆಯ ಸ್ಥಳಗಳು ಪ್ರಕಟಣೆ.

ಈ ಪಧಾತಿಗಳಲ್ಲಿ ಏಳು ನೂರು ಸೈನಿಕ ಗೋಲಂದಾಜಿಗಳು ಈ ದುರ್ಗ ರಕ್ಷಣೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು.

ಕೋಟೆಯ ಒಳಗಡೆ ಅಪ್ರತಿಮವಾದ ರಂಗೀನ್ ಮಹಲ್ ಎಂಬ ಒಂದು ಪ್ರಸಾರವಿದೆ. ಇದನ್ನು ಕಪ್ಪು ಶಿಲೆಯಿಂದ ನಿರ್ಮಿಸಲಾಗಿದ್ದು ಮೇಲೆ ಸಿಂಪುಗಳಿಂದ ಕುಸುರಿಗೆಲಸ ಇಲ್ಲಿ ಸೋಲಾಕಂಬ್ ಎಂಬ ತೀರ ಹಳೆಯ ಮಸೀದಿ ಮತ್ತು ಶಖ್ತ ಮಹಲ್ ಎಂಬ ಸಿಂಹಾಸನಾಲಯಗಳು ಮನೋಹರವಾಗಿವೆ, ಶಖ್ತ ಮಹಲಿನಲ್ಲಿ ಅನೇಕ ಬರೀದಶಾಹಿ ಮತ್ತು ಬಹುಮನಿ ಸುಲ್ತಾನರ ಪಟ್ಟಭಿಷೇಕ ಸಮಾರಂಭಗಳಾಗಿವೆ. ಬೀದರ ನಗರಕ್ಕೆ ಎಂಟು ಮಹಾದ್ವಾರಗಳಿವೆ. ಪ್ರತಿಯೊಂದು ದ್ವಾರದ ಮೇಲೆ ಪಾರಸಿ ಶಾಸನವಿದೆ. ಕೋಟೆಯೊಳಗೆ ಹಲವಾರು ಹಳೆಯ ಅರಮನೆಗಳು, ಸಭಾಭವನಗಳು, ಕಾರಂಜಿಗಳು ಮತ್ತು ಸ್ನಾನಗೃಹಗಳು ಸುಸ್ಥಿತಿಯಲ್ಲಿವೆ. ನಗರದ ಪಶ್ಚಿಮಕ್ಕೆ ಮುತ್ತಮ್ಮನ ಬುರುಜು ಎಂದು ಕರೆಯಲಾಗುವ ಅಷ್ಟಕೋನಾಕೃತಿಯ ಸುಂದರವಾದ ಮಂಟಪವಿದೆ. ಇದರ ಮೇಲ್ಹಾವಣಿಯು ಬಿದ್ದು ಹೋಗಿದೆ.

ಮದರಸಾ :

ಬೀದರ ಐತಿಹಾಸಿಕ ಸ್ಮಾರಕಗಳ ಆಗರವಾಗಿದೆ. ಮದರಸಾ ಅತ್ಯಂತ ಪ್ರಸಿದ್ಧವಾದ ಐತಿಹಾಸಿಕ ಸ್ಮಾರಕವಾಗಿದ್ದು , ಇದು ಆಕರ್ಷಣೆಯವಾದ ಭವ್ಯ ಕಟ್ಟಡ ಮೂರನೆಯ ಮಹಮ್ಮದ್ ೧೪೭೨ ರಲ್ಲಿ ಈ ಮದರಸಾ (ಕಾಲೇಜ್) ಕಟ್ಟಿಸದನು. ಗವಾನ್ ಅರಬ್ಬಿ ಮತ್ತು ಪಾರಸಿ ಬಾಷೆಗಳಲ್ಲಿ ಮಹಾ ವಿದ್ವಾಂಸನಾಗಿದ್ದನು. ಮಹಾಮುತ್ಸದ್ಧಿ ಹಾಗೂ ಶ್ರೇಷ್ಠ ರಾಜಕಾರಣಿಯೂ, ವಿದ್ಯಾ ಪಕ್ಷಪಾತಿಯೂ ಆಗಿದ್ದನು ಎಲ್ಲಕ್ಕೂ ಮಿಗಿಲಾಗಿ ಅವನೊಬ್ಬ ಮಹಾ ಶಿಲ್ಪಿಯಾಗಿದ್ದನು. ಮದರಸಾದಲ್ಲಿ ಅರಬ್ಬಿ, ಪಾರಸಿ, ಮೊದಲಾದ ವಿದ್ಯೆಗಳನ್ನು ಕಲಿಸುವ ವ್ಯವಸ್ಥಿತ ಏರ್ಪಾಡು ಮಾಡಿದ್ದನು. ಮಹಮ್ಮದ್ ಗವಾನನ ಮದರಸಾ ಸಮರಕಂದದಲ್ಲಿರುವ ಎಲುಗ್ ಬೇಗ್ ಕಾಲೇಜನ್ನೆ ತದ್ರೂಪ ಹೋಲುತ್ತದೆ. ಆದ್ದರಿಂದ ಇದರ ಆಕೃತಿಯನ್ನು ಪರ್ಶಿಯನ್ ಶಿಲ್ಪಗಳೇ ರಪಿಸಿರಬೇಕೆಂದು ಇತಿಹಾಸಕಾರರು ಹೇಳುತ್ತಾರೆ. ಈ ಭವ್ಯ ಕಟ್ಟಡದ ಆಸ್ತಿವಾರು ೨೦೫ ಫಿ ೧೮೦ ಅಡಿ ಇದೆ. ಇದು ಮೂರಂತಸ್ತಿನ ಕಟ್ಟಡವಾಗಿತ್ತು. ಗ್ರಂಥಾಲಯ , ಉಪನ್ಯಾಸ, ಭವನ, ಮಸೀದಿ ಮುಂತಾದವುಗಳಿಗಾಗಿ ಹಲವಾರು ವಿಶಾಲವಾದ ಕೋಣೆಗಳಿದ್ದು ಈ ಕಟ್ಟಡದಲ್ಲಿ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಿಗೂ ಇರಲು ಪ್ರತ್ಯೇಕವಾದ ವಾಸದ ಕೋಣೆಗಳಿದ್ದವು. ಗ್ರಂಥಾಲಯದಲ್ಲಿ ಕೈ ಬರಹದ ३,೦೦೦ ಉದ್ಗ್ರಂಥಗಳು ಇದ್ದವೆಂದು ಹೇಳಲಾಗುತ್ತದೆ.

ಮದರಸಾದ ನಾಲ್ಕು ಕಡೆಗೂ ನಾಲ್ಕಾರು ಅಂದಚಂದದ ಉತ್ತುಂಗ ಶಿಖರಗಳಿದ್ದವು. ಇವುಗಳಿಲ್ಲಿ ಮೂರು ಶಿಖರಗಳು ಬಿದ್ದು ಹೋಗಿ ಒಂದು ಮಾತ್ರ ಉಳಿದಿದೆ. ಶಿಖರಗಳು ರಂಗು ರಂಗಿನಿಂದ ಮಾಡಿದ ಹಂಚುಗಳಿಂದ ಅಲಂಕೃತವಾಗಿದ್ದವು. ಮದರಸಾದಲ್ಲಿ ಅತ್ಯಂತ ವಿಶಾಲವಾದ ವೇದಿಕೆಯಿದೆ. ಇದು ಕಾಲೇಜಿನ ಉಪನ್ಯಾಸ ವೇದಿಕೆಯಾಗಿತ್ತೆಂದು ಚರಿತ್ರೆಕಾರರು ಹೇಳುತ್ತಾರೆ. ಮದರಸಾ ಪಾಶ್ಚಿಮ್ಯೊವಾಸ್ತು ಶಿಲ್ಪದ ಶ್ರೇಷ್ಠ ಕಟ್ಟಿಗಡಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ. ಮಹಮ್ಮದ ಗವಾನ್ ತರುವಾಯ ಬೀದರಯನ್ನು ವಶಪಡಿಸಿಕೊಂಡು ವೈರಿ ಅರಸರು ಈ ಮದರಸಾವನ್ನು ಮದ್ದು ಗುಂಡ ಸಂಗ್ರಹಿಸಲು ಬಳಸಿದ್ದರು. ಮುದ್ದಿನ ಆಕಸ್ಮಿಕ ಸ್ಫೋಟದಿಂದ ಇದರ ಬಹು ಭಾಗವು ಬಿದ್ದು ಹೋಗಿ ಸಂಪೂರ್ಣನಾಶವಾಗಿದೆ.

ದರ್ಗಾ :–

ಬೀದರನಲ್ಲಿ ಮತ್ತೊಂದು ಐತಿಹಾಸಿಕ ಪ್ರಸಿದ್ಧ ಸ್ಮಾರಕವೆಂದರೆ ' ದರ್ಗಾ' ಇದನ್ನು ಹಜರತ್‌ಷಾಹ ' ಅಬ್ದುಲ್ ಫೈಜನ ದರ್ಗಾ' ಎಂದು ಕರೆಯುತ್ತಾರೆ. ಹಜರತ್‌ಷಾಹ ಅಬ್ದುಲ್‌ಫೈಜ್ ಕಲಬುರ್ಗಿಯ ಮುಸಲ್ಮಾನ್ ಸಂತನಾದ ಖಾಜಾ ಬಂದೇನವಾಜನ ಮೊಮ್ಮಗನು. ಅಜ್ಜನಂತೆ ಈತನೂ ಪ್ರಸಿದ್ಧ ಸತ್‌ಪುರುಷನಾಗಿದ್ದನು. ಪವಾಡ ಪುರುಷನಾಗಿದ್ದನು. ದರ್ಗಾದ ಒಳಗೆ ಅಬ್ದುಲ್ ಫೈಜನ ಸಮಾದಿ ಇದೆ. ಈ ಸಮಾಧಿಯ ದರ್ಶನಕ್ಕೆ ದೇಶದ ನಾನಾ ಭಾಗಗಳಿಂದ ಮುಸಲ್ಮಾನರು ಯಾತ್ರೆ ಹೊರಟು ಬರುತ್ತಾರೆ. ಹಜರತ್‌ಷಾಹ ಅಬ್ದುಲ್ ಫಜನು ಬಹುಮನಿ ಸುಲ್ತಾನನಾದ ಮಹಮ್ಮದ್‌ಷಾಹ ಮತ್ತು ಅವನ ತರುವಾಯ ಪಟ್ಟವೇರಿದ ಮೂರು ಜನ ಸುಲ್ತಾನರ ಸಮಕಾಲೀನನಾಗಿ ಜೀವಿಸಿದ್ದನು. ಈ ಎಲ್ಲಾ ಸುಲ್ತಾನರೂ ಅಬ್ದುಲ್‌ಫೈಜನನ್ನು ಪ್ರೀತಿಸಿ ಗೌರವಿಸುತ್ತಿದ್ದರು. ಅಬ್ದುಲ್ ಫೈಜ್ ಮೂರನೆ ಮಹಮ್ಮದಷಾಹನ ಕಾಲದಲ್ಲಿ ಸತ್ತನು. ಮೂರನೆಯ ಷಾಹನೇ ಈ ಸಮಾಧಿಯನ್ನು ಕಟ್ಟಿಸಿದನೆಂದು ಹೇಳುತ್ತಾರೆ. ದರ್ಗಾ ಬಹಳ ಭವ್ಯವಾದ ಕಟ್ಟಡ ಒಳ ಆವರಣದಲ್ಲಿ ನೆರಳಿದ ಗಿಡಗಳಿವೆ. ಈ ಕಟ್ಟಡ ಬಹುಮನಿ ಕಾಲದಲ್ಲಿ ಶ್ರೇಷ್ಠ ಶಿಲ್ಪಕಲೆಯ ಮಾದರಿಯಾಗಿದೆ. ಹೊರೆಗೆ ಹಂಚುಗಳ ಮೇಲೆ ಅಲಂಕಾರಮಯ ಕುಸುರಿಗೆಲಸ ಮಾಡಲಾಗಿದೆ.

ಅಷ್ಟೂರ್ :–

ದೂರದಲ್ಲಿರುವ ಐದು ಬೃಹತ್ ಆಕಾರದ ದುರ್ಗಗಳ ಸಮೂಹ ಮತ್ತು ಸುಂದರವಾದ ಔಕಟ್ಟಿ ಬಾವಿದೃಶ್ಯಗಳು ನೋಡಲು ಮನ ಮೋಹಕವಾಗಿದೆ. ಎರಡು ರಾಜಮನೆತನಗಳ ರಾಜರಾಣಿಯರು ಹಾಗೂ ಅವರ ಸಂಬಂಧಿಗಳ ಸುಮಾರು ೪೨ ಭವ್ಯ ಬೀದರನಲ್ಲಿವೆ. ಬಿದರನಿಂದ ಸುಮಾರು ೪ ಕಿ, ಮೀ ದುರದ ಅಷ್ಟೂರ ಗ್ರಾಮದಲ್ಲಿ ಬಹುಮನಿ ರಾಜರಾಣಿಯರ

ಸುಮಾರು ೮ ಗೋರಿಗಳು ಅಪೂರ್ಣವಾಗಿವೆ. ಬಹುಮನಿ ಸಾಮ್ರಾಜ್ಯದ ರಾಜಧಾನಿಯನ್ನು ಗುಲಬರ್ಗಾದಿಂದ ಬೀದರಿಗೆ ವರ್ಗಾಯಿಸದ ಅಹಮ್ಮದ್ ಷಾ ವಾಲಿಯ ಗೋರಿ ಹಿಂದೂ ಮುಸ್ಲಿಂ ಏಕತೆಯ ಸಂಕೇತವಾಗಿದ್ದು. ವರ್ಷಕ್ಕೊಮ್ಮೆ ಅಲ್ಲಿ ನಡೆಯುವ ಜಾತ್ರೆಯನ್ನು 'ಅಲ್ಲಮ ಪ್ರಭು' ಜಾತ್ರೆ ಎಂದು ಕರೆಯುತ್ತಾರೆ. ಪ್ರತಿವರ್ಷ ಗುಲಬರ್ಗಾ ಜಿಲ್ಲೆಯ ಜಂಗಮನೊಬ್ಬ ಬಂದು ಪೂಜೆ ನೇರವೇರಿಸಿದಲ್ಲಿ ಜಾತ್ರೆ ಪ್ರಾರ್ರಂಭವಾಗಿದ್ದು, ಅಲ್ಲಿರುವ ಬಹುಮನಿಯ ಗೋರಿ ಸಿಡಿಲಿನ ಹೊಡೆತಕ್ಕೆ ಸಿಕ್ಕು ಅರ್ಧಕ್ಕಿಂತ ಹೆಚ್ಚು ಬಿದ್ದು ಹೋಗಿದೆ.

ಈ ಸಾಲು ಗೋರಿಗಳ ಸಮೀಪದಲ್ಲೇ ಮತ್ತೊಂದು ಆಕರ್ಷಕ ಗೋರಿ ಇದೆ. ಅದನ್ನು ಚೌಖಂಡಿ ಎಂದು ಕರೆಯುತ್ತಾರೆ. ಅಷ್ಟೂರ ದರ್ಗಗಳ ಸಮೀಪದಲ್ಲಿ ಇದ್ದಂತಹ ಪಟ್ಟವಾದ ಮಾವಿನ ತೋಟ ಹಾಗೂ ಜುಳು ಜುಳು ಹರಿಯುವ ಹಳ್ಳಗಳ ಶಬ್ದಗಳು ಕೇಳಿ ಬರುತ್ತದೆ, ಅವುಗಳ ಗತ ವೈಭವವನ್ನು ಪೂರ್ವದಿಂದಲೇ ಜಾತಿ, ಮತ, ಆಸ್ತಿಅಂತಸ್ತು, ಬೇಧ ಬಾವದಿಂದ ಬೀದರ ಹಾಗೂ ಸುತ್ತಮುತ್ತಲಿನ ಹಳ್ಳಿಗಳ ಜನರು ವರ್ಷಕ್ಕೊಮೆ ಅಲ್ಲಮ ಪ್ರಭು ಜಾತ್ರೆಗೆಂದು ಈ ಅಷ್ಟೂರ ದರ್ಗಕ್ಕೆ ಕುಟುಂಬ ಸಹ ಪರಿವಾರದೊಂದಿಗೆ ಜಾತ್ರೆಯ ಸವಿಯನ್ನು ಮನಮಹೋತ್ಸವದಂತೆ ಆಚರಿಸುವುದು ಒಂದು ವಾಡಿಕೆಯಾಗಿದೆ.

ಪಾಪನಾಶ :–

ಬೀದರ ಜಿಲ್ಲೆಯಾದಂತ ಅನೇಕ ಕಡೆ ಕಾಮಲಿಂಗೇಶ್ವರ ದೇವಾಲಯಗಳುಂಟು ಬೀದರನ ಪಾಪನಾಶಲಿಂಗ ಅವುಗಳಲ್ಲಿ ಪ್ರಮುಖವಾದದ್ದು ನಗರದ ಶಿವನಗರ ಬಡಾವಣೆಯ ಬಳಿ ಪಾಪನಾಶವೆಂಬ ಪುಣ್ಯಕ್ಷೇತ್ರವಿದೆ. ಅಲ್ಲಿರುವ ಲಿಂಗ ಭಗವಾನ ಶ್ರೀ ರಾಮಚಂದ್ರನಿಂದ ಸ್ಥಾಪಿಸಲ್ಪಟ್ಟಿದೆ ಎಂದು ಹೇಳುತ್ತಾರೆ.

ಇದು ದ್ವಾಪರಯುಗಕ್ಕೆ ಸೇರಿದ ಪುರಾಣ ಕಥೆಯೊಂದು ಹೇಳುತ್ತದೆ. ಹಳೆಯ ಕಾಲದ ಪ್ರಾಚೀನ ದೇವಸ್ಥಾನವಿದೆ. ಹನ್ನೆರಡು ಜೋತಿರ್ಲಿಂಗಗಳ ಸಾಲಿನಲ್ಲಿ ಇದನ್ನು ೧೨ ನೇಯ ಪ್ರಾಚೀನ ಲಿಂಗವಾಗಿ ಎಣಿಕೆ ಮಾಡುತ್ತಾರೆ. ನಗರದ ಸಮತಲದಿಂದ ಸುಮಾರು ಒಂದು ಸಾವಿರ ಅಡಿಗಳಷ್ಟು ಆಳದಲ್ಲಿರುವ ಈ ಪುಣ್ಯ ಕ್ಷೇತ್ರವು ಸುತ್ತಲೂ ವ್ಯಾಪಾಕವಾಗಿ ಹರಡಿಕೊಂಡಿರುವ ಸೃಷ್ಠಿ, ನಿಸರ್ಗ, ಸೌಂದರ್ಯದಿಂದಾಗಿ ಅತ್ಯದ್ಭುತ, ಸುಂದರ ಮನಮೋಹಕ ರಮಣೀಯವಾಗಿ ಕಂಗೋಳಿಸುತ್ತದೆ.

ಪಾಪನಾಶ ಲಿಂಗದ ಖ್ಯಾತಿ ವ್ಯಾಪಕವಾಗಿ ಹರಡಿಕೊಂಡಿದೆ. ಶ್ರಾವಣ ಮಾಸದಲ್ಲಿ ಶನಿವಾರ, ಸೋಮವಾರದಂದು ವಿಶೇಷ ಪೂಜೆ ಪುನಸ್ಕಾರಗಳು ನಡೆಯುತ್ತವೆ. ಮಹಾಶಿವರಾತ್ರಿಯ

ಸಂದರ್ಭದಲ್ಲಿ ಜಾತ್ರೆ ನಡೆಯುತ್ತದೆ. ಮೂಲೆ ಮೂಲೆಗಳಿಂದ ಆಗಮಿಸುವ ಅನೇಕ ಭಕ್ತರು ಸಮೂಹ ಜಾತ್ರಯಲ್ಲಿ ಪಾಲಗೊಳ್ಳುತ್ತಿದ್ದರು.

ರಂಜೇರು (ಇಂದಿನ ಖೇಣಿರಂಜೋಳ)

ಇತಿಹಾಸದ ಕಾಲಕ್ಕೆ ಬಂದಾಗ ಈ ಭಾಗದಲ್ಲಿ ರಾಜಕೀಯ ಘಟಕವೊಂದು ಸ್ಪಷ್ಟವಾಗಿ ಮೂಡಿ ಬಂದದ್ದು ಕ್ರಿ.ಶ ೪ನೇ ಶತಮಾನದ ಸುಮಾರಿಗೆ ಎನ್ನುವ ಅಂಶವನ್ನು ರಂಜೇರು (ಇಂದಿನ ಖೇಣಿರಂಜೋಳ) ನ ಸಿಂದರ ಶಾಸನಗಳು ಖಚಿತಗೊಳಿಸುತ್ತವೆ. ಆ ಮೊದಲು ಈ ಪ್ರದೇಶವು ಸ್ಥೂಲವಾಗಿ ನಂದರು ಹಾಗೂ ಮೌರ್ಯರಿಗೆ ಸೇರಿದ್ದಿತ್ತು. ಶಾತವಾಗನರು ಪ್ರತಿಷ್ಠಿನಪುರ (ಇಂದಿನ ಪೈಠಣ) ವನ್ನು ರಾಜಧಾನಿಯಾಗಿಸಿಕೊಂಡು ಆಳುತ್ತಿರುವಾಗ ಬೀದರನ ಬಾಗ ಅವರ ಆಳ್ವಿಕೆಯ ಸೇರಿತು ಶಾಂತವಾಹನರು ಬನವಾಸಿಯ ಕದಂಬರುಳಿದರು ಅವರ ಆಳ್ವಿಕೆ ಆರಂಭದ ಕಾಲದಲ್ಲಿ ಕದಂಬ ವಂಶ ಸ್ಥಾಪಕ ಮಯೂರ ವರ್ಮನ ಮಗಳಿಂದ ಲಕ್ಷ್ಮೀಮತಿ ಹಾಗೂ ನಿಡುದೋಳ ಸಿಂದ್ ಇವರ ನಾಲ್ಕು ಮಕ್ಕಳಲ್ಲಿ ಒಬ್ಬನಾಗಿದ್ದ ಜಗತ್‌ಸೇಬ್ಯನ ಕಾರಂಜಾ ನದಿ ತೀರದಲ್ಲಿ ಅಟ್ಟಳೆ ನಾಡಿಗೆ ಅಧಿಪತಿಯಾಗಿ ಆಳಲಾರಂಬಿಸಿದನೆಂದು ಖೇಣಿರಂಜೋಳದಲ್ಲಿರುವ ಶಾಸನಗಳು ತಿಳಿಸುತ್ತವೆ. ರಂಜೇರು ಅವರ ರಾಜಧಾನಿ ಹಾಗೂ ಬಲ್ಲುಂಕೆ ಪ್ರಮುಖ ಅಗ್ರಹಾರವಾಗಿ ಬೆಳೆಯಲಾರಂಬಿಸಿದವೆಂಬ ಅಂಶ ಅವೇ ಶಾಸನಗಳಿಂದ ತಿಳಿದು ಬರುತ್ತದೆ.

ಬನವಾಸಿ ನಾಡು, ಉತ್ತರಕನ್ನಡ ಪರಿಸರದ ಕೆಲ ಗ್ರಾಮಗಳು ಹಾಗೂ ಖೇಣಿರಂಜೋಳ (ರಂಜೇರು) ಇದರ ಸುತ್ತಣ ಕೆಲ ಗ್ರಾಮಗಳ ಹೆಸರುಗಳು ನಡುವೆ ಸಾಮ್ಯತೆ ಇರುವುದು ಈ ವಿಷಯವನ್ನು ಪುಷ್ಟಿಗೊಳಿಸುತ್ತದೆ. ಉದಾಹರಣೆಗೆ ಕಾಡವಾದ , ಶಿರಿಸಿ, ಚಟ್ಟನಹಳ್ಳಿ, ಅಣದೂರು, ಬೈರಹಳ್ಳಿ, ಕಮಟಾ, ಆಲೂರು, ಬರೂರ, ಭೆಳ್ಳನಕೇರಿ, ಬೇಲೂರ ಭೋರಿ, ದೇವಗೀಲಿ, ಗುಡಹಳ್ಳಿ, ಗೋರ್ಟಾ, ಗುರವಳ್ಳಿ, ಹಲಸಿ, ಹಣಕುಣೆ, ಇಟಗಿ, ಜಂಬಗಿ, ಕಲಕೇರಿ, ಕಲ್ಲೂರ, ಕನಹಳ್ಳಿ, ಸಿಂದೋಲ, ಮೈನಳ್ಳಿ ಮರಗಿಂದಿ, ಮರೂರ, ನಾಗೂರ, ಸಾತನಳ್ಳಿ, ಶಿವಪೂರ ಇತ್ಯಾದಿ ಅಷೇ ಅಲ್ಲ ಕೆಲ ಆಚರಣೆಗಳು ಒಂದೆ ತೆರನಾದವುಗಳು, ಆಳವಾದ ಅಧ್ಯಯನ ನಡೆಸಿದ್ದಲ್ಲಿ ಹೆಚ್ಚಿನ ಅಂಶಗಳು ತಿಳಿದುಕೊಳ್ಳಲು ಸಹಾಯಕವಾಗುತ್ತದೆ.

ನಾಗವಂಶದ ಸಿಂದ ಮನೆತನದ ನಿಡುದೋಳ ಸಿಂದನ ವಂಶಜರು ಬಹುಕಾಲ ರಂಜೇರುವಿನಿಂದ ಮಾಂಡಳಿಕರಾಗಿ ಆಳಿದರು. ನಾಲ್ಕನೇಯ ಶತಮಾನದಿಂದ ಆರಂಭಗೊಂಡ ಸಿಂದರ ಆಳ್ವಿಕೆ ೧೩ ನೇ ಶತಮಾನದವರೆಗೆ ಸಾಗಿ ಬಂದಿತ್ತು. ಕಲ್ಯಾಣಿ ಚಾಳುಕ್ಯರ ಚಕ್ರವರ್ತಿ ೬ ನೇ ವಿಕ್ರಮಾದಿತ್ಯನ ಆಳ್ವಿಕೆಯ ಕಾಲದಲ್ಲಿ ರಜ್ಜರಸನು ಅಟ್ಟಳೆ ೩೦೦ ಈ ನಾಡಿಗೆ ಮಾಂಡಳಿಕನಾಗಿದ್ದನು. ರಂಜೇರುವಿನ ಸಿಂದರು ಅನೇಕ ಕಡೆಗಳಲ್ಲಿ ಶಿವ ಮುಂದಿರಗಳನ್ನು ನಿರ್ಮಿಸಿದ ಉಲ್ಲೇಖವಿದೆ. ಆದರೆ ಅವಿಗಳು ಇಂದು ಉಳಿದಿಲ್ಲ. ರಂಜೇರು, ಹಿಲಾಲಪೂರ, ಭಲ್ಲುಂಕೆ ಮುಂತಾದ ಕಡೆಗಳಲ್ಲಿ ಅವಶೇಷಗಳು ಮಾತ್ರ ಕಾಣಸಿಗುತ್ತದೆ. ಕದಂಬರ ಆಳ್ವಿಕೆಯ ಕಾಲಕ್ಕೆ ಕಂತಲದ ಉತ್ತರಕ್ಕೆ ವಂಶಾಟಕರು ಆಳುತ್ತಿದ್ದರು. ಕದಂಬರು ನಂತರ ಬಾದಾಮಿ ಚಾಲುಕ್ಯರು ಹಾಗೂ ಕೆಂಪುಕೂಟರು ಆಳಿದರು ಬಾದಾಮಿ ಚಾಲುಕ್ಯರು ಆಳ್ವಿಕೆಯ ಕಾಲದಲ್ಲಿ ಜೈನಧರ್ಮದ ಆದ್ಯತೆ ದೊರೆಯಿತು. ಕಲ್ಯಾಣಿ, ಕಂಬಿತಾಣಾ, ಭಲ್ಲುಂಕೆ ಮುತ್ತಾಂದೆಡೆ ಜೈನ ಬಸಿದಿಗಳು ಇದ್ದವು. ಕಂಬಿತಾಣಾದಲ್ಲಿ ಜೈನ ಬಸದಿಯ ಭಾಗವನ್ನು ಕಾಣಬಹುದಾಗಿದೆ.

ಬೀದರ ಪ್ರಾಕೃತಿಕ ಸ್ವರೂಪ :–

ಮಹಾಭಾರತ್ ಕಾಲದಷ್ಟು ಪ್ರಾಚೀನತೆಯನ್ನು ಸುಮಾರು ಸಾವಿರ ವಷಗಳಷ್ಟು ಐತಿಹಾಸಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಪರಂಪರೆಯನ್ನು ಪಡೆದಿರುವ ಬೀದರ ಹತ್ತು ವರ್ಷಗಳ ಕೆಳಗೆ ಒಂಬತ್ತು ತಾಲೂಕುಗಳ ತ್ರಿಬಾಷಾ ಜಿಲ್ಲೆಯಾಗಿತ್ತು. ನವೆಂಬರ ೧೯೫೬ ರಲ್ಲಿ ಭಾಷಾವಾರು ರಾಜ್ಯಗಳನ್ನು ರಚಿಸಲು ಮರಾಠಿ ಮತ್ತು ತೆಲುಗು ಭಾಷೆಗಳ ತಾಲೂಕುಗಳನ್ನುಳಿದು ಬಿದರ ಜಿಲ್ಲೆಯು ಮೈಸೂರ ರಾಜ್ಯಕ್ಕೆ ಸೇರಿತ್ತು.

ಬೀದರ ಜಿಲ್ಲೆ ರಾಜ್ಯದ ತೀರ ಉತ್ತರಕ್ಕೆ ಇದೆ. ಇದು ೭೦.೫ ಅಕ್ಷಾಂಶ ೭೬.೯ ಮತ್ತು ೭೫.೬ ರೇಖಾಂಶಗಳ ನಡುವೆ ಉತ್ತರ ದಿಕ್ಕಿನಲ್ಲಿ ಮಹಾರಾಷ್ಟ್ರ ರಾಜ್ಯ ಮತ್ತು ಪೂರ್ವ ದಿಕ್ಕಿನಲ್ಲಿ ಆಂಧ್ರ ಪ್ರದೇಶ ರಾಜ್ಯವಿದೆ.

ರಾಜ್ಯಪುನರ್ ವಿಂಗಡಣೆಯಾದಾಗ ಈ ಜಿಲ್ಲೆಯಲ್ಲಿ ಬೀದರ, ಹುಮನಾಬಾದ, ಭಾಲ್ಕಿ ಮತ್ತು ಅವರಾದ ಈ ನಾಲ್ಕು ತಾಲೂಕುಗಳಿದ್ದವು. ಇತ್ತಿಚಿಗೆ ಹುಮನಾಬಾದ ತಾಲೂಕನ್ನು ಹುಮನಾಬಾದ ಮತ್ತು ಬಸವಕಲ್ಯಾಣ ಎಂದು ಎರಡು ತಾಲೂಕುಗಳನ್ನಾಗಿ ವಿಂಗಡಿಸಲಾಗಿತ್ತು. ಇದರಿಂದ ಈಗ ಜಿಲ್ಲೆಯಲ್ಲಿ ಐದು ತಾಲೂಕುಗಳಾಗಿವೆ. ಅಡಳಿತ ಮತ್ತು ಅಭಿವೃದ್ಧಿ ದೃಷ್ಟಿಯಿಂದ

ಈ ಜಿಲ್ಲೆ ಭದ್ರವಾದ ತಳಹದಿಯ ಮೇಲೆ ಇಲ್ಲ. ಅದ್ದರಿಂದ ಇದನ್ನು ಭದ್ರವಾಸ ತಳಹದಿಯ ಘಟಕವನ್ನಾಗಿ ನಿರ್ಮಿಸಲು ಮತ್ತು ಇತರೆ ಜಿಲ್ಲೆಗಳಂತೆ ಆರ್ಥಿಕವಾಗಿ ಸಂಪೂರ್ಣಗೊಳಿಸಲು ಕಲಬುರ್ಗಿ ಜಿಲ್ಲೆಯ ಚಿಂಚೋಳಿ ತಾಲೂಕು ಮತ್ತು ನೆರೆಯ ತಾಲೂಕುಗಳ ಕೆಲ ಗ್ರಾಮಗಳನ್ನು ಈ ಜಿಲ್ಲೆಗೆ ಸೇರಿಸಬೇಕೆಂದಿದ್ದರು.

ವಿಸ್ತೀರ್ಣ : –

ಬೀದರ ಜಿಲ್ಲೆ ೨.೨೦೯ ಚದರ ಮೈಲಿ ವಿಸ್ತೀರ್ಣವಿದೆ. ಒಟ್ಟು ಜನ ಸಂಖ್ಯೆ : ೧೭೦೩೩೦೦

ಇದು ಬೀದರ ತಾಲೂಕಿನಲ್ಲಿ ಕಬ್ಬಿಣ ಸಂಯುಕ್ತ ಜೇಡಿಮಣ್ಣು ೨೮ ಮೈಲಿ ಉದ್ದ ಮತ್ತು ೨೨ ಮೈಲಿ ಅಗಲ ಪ್ರದೇಶದಲ್ಲಿ ವ್ಯಾಪಿಸಿದೆ. ಬಸವಕಲ್ಯಾಣ ತಾಲೂಕಿನಲ್ಲಿ ಇದಕ್ಕೂ ಹೆಚ್ಚು ಪ್ರದೇಶದಲ್ಲಿ ಹರಡಿದೆ. ಕೆಲವು ಕೆಂಪು ಜೇಡಿಮಣ್ಣಿನಲ್ಲಿ ಸೇಕಡ ೬೦ ರಷ್ಟು ಕಬ್ಬಿಣವು ದುರುಕುತ್ತದೆ. ಬೀದರನಲ್ಲಿ ಕಾವಿಮಣ್ಣು ವಿಶೇಷವಾಗಿ ದೋರಕುತ್ತದೆ. ಇದು ಲೆಪ್ಪ ಮತ್ತು ಬಣ್ಣಗಳಿಗೆ ಬಹಳ ಉಪಯುಕ್ತವಾಗಿದೆ.



ಚಿತ್ರ : ಬಸವಕಲ್ಯಾಣ ಕೋಟೆಯ ಮಹಾದ್ವಾರ



ಚಿತ್ರ : ಬಸವಕಲ್ಯಾಣ ಕೋಟೆಯ ಒಳ ಭಾಗದ ಚಿತ್ರ



ಚಿತ್ರಗಳು: ಅನುಭವ ಮಂಟಪ ಬಸವಕಲ್ಯಾಣ





ಚಿತ್ರಗಳು: ಅನುಭವ ಮಂಟಪ ಬಸವಕಲ್ಯಾಣ ಒಳನೋಟ





ಚಿತ್ರ : ಖಾಲ್ಸಿ ಕೋಟೆ



ಚಿತ್ರ : ಖಾತಂಬ್ರಾ ಕೋಟೆ



ಚಿತ್ರ : ಬೀದರ ಕೋಟೆಯ ಮಹಾದ್ವಾರ



ಚಿತ್ರ: ಗುಂಬಜ್ ದರ್ವಾಜ



ಚಿತ್ರಗಳು: ರಂಗೀನ ಮಹಲ್





ಚಿತ್ರ: ರಂಗೀನ ಮಹಲ್ ಒಳನೋಟ



ಚಿತ್ರಗಳು: ರಂಗೀನ ಮಹಲ್ ಬಲಭಾಗದ ನೋಟ





ಚಿತ್ರಗಳು: ಬೀದರ ಕೋಟೆಯ ಚೀಲ





ಚಿತ್ರ: ಬೀದರ ಕೋಟೆಯ ವಸ್ತುಸಂಗ್ರಹಲಯ (ಆಡಳಿತ ಕಛೇರಿ)



ಚಿತ್ರ: ಬೀದರ ಕೋಟೆಯ ಒಳನೋಟ



ಚಿತ್ರ : ಬೀದರ ಕೋಟೆಯ ೧೬ ಕಂಭಗಳ ಮಸ್ಜಿದ್





ಚಿತ್ರಗಳು: ಬೀದರ ಕೋಟೆಯ ಒಳಭಾಗದ ಶಿಲ್ಪಗಳು





ಚಿತ್ರಗಳು: ಬೀದರ ಕೋಟೆಯ ಒಳಭಾಗದ ಶಿಲ್ಪಗಳು





ಚಿತ್ರಗಳು : ತಕ್ತ ಮಹಲ್ ಒಳನೋಟ





ಚಿತ್ರಗಳು: ಅಡುಗೆ ಮನೆ





ಚಿತ್ರ : ಬೀದರ ಕೋಟೆಯ ತೋಫ



ಚಿತ್ರ : ಬೀದರ ಕೋಟೆಯ ತೋಫ



ಚಿತ್ರ: ಗುರುನಾಣಕ ಮಹಾದ್ವಾರ

. ಅಧ್ಯಯ – ೩

ಬೀದರ ಜಿಲ್ಲೆಯ ದೇವಾಲಯಗಳ ವಾಸ್ತು ಶಿಲ್ಪ

೧. ನಾರಾಯಣಪೂರ ಶಿವಾದೇವಾಲಯ ಹಾಗೂ ವಾಸ್ತು ಶಿಲ್ಪಗಳು

ಬೀದರ ಜಿಲ್ಲೆಯ ಐತಿಹಾಸಿಕ, ಸಾಂಸ್ಕೃತಿಕವಾಗಿ ಶ್ರೀಮಂತ ನಾಡು ಎನ್ನುವುದಕ್ಕೆ ಇಲ್ಲಿನ ಹಲವಾರು ದೇವಾಲಯಗಳು, ಕೋಟೆ ಕೊತ್ತಲಗಳು ಸಾಕ್ಷಿಯಾಗಿದ್ದು ಅವುಗಳಿಗೆಲ್ಲಾ ಇಂಬು ಕೊಡುವಂತೆ ಶಿಲ್ಪಕಲಾ ಸೌಂದರ್ಯದ ಪುರಾತನ ಶಿವದೇವಾಲಯ ಸೌಂದರ್ಯದ ಗಣಿಯೇ ಇಲ್ಲಿ ನೆಲೆನಿಂತಿರುವಂತೆ ಭಾಸವಾಗುತ್ತದೆ.

ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕು ಕೇಂದ್ರದಿಂದ ೨ ಕಿ. ಮೀ. ದೂರದಲ್ಲಿರುವ ನಾರಾಯಣಪುರ ಗ್ರಾಮದಲ್ಲಿ ಹತ್ತನೇ ಶತಮಾನದಲ್ಲಿ ಕಲ್ಯಾಣ ಚಾಲುಕ್ಯ ವಂಶದ ದೊರೆ ೧ನೇ ಸೋಮೇಶ್ವರನ ಕಾಲದಲ್ಲಿ ಈ ದೇವಾಲಯ ನಿರ್ಮಾಣಗೊಂಡಿರುವುದಾಗಿ ತಿಳಿದು ಬರುತ್ತದೆ.

ಶಿವ ದೇವಾಲಯದ ಗರ್ಭಗುಡಿಯ ವಿನ್ಯಾಸ : –

ಈ ದೇವಾಲಯವು ಪ್ರಾಚೀನ ಮತ್ತು ಐತಿಹಾಸಿಕವಾಗಿ ಪ್ರಸಿದ್ಧಿ ಪಡೆದಿದ್ದು ಈ ಶಿವ ದೇವಾಲಯ ದೊಡ್ಡ ದೊಡ್ಡ ಕಪ್ಪು ಶಿಲೆಗಳಿಂದ ನಿರ್ಮಿಸಲಾಗಿದೆ. ಇಲ್ಲಿನ ಶಿಲೆಗಳೆಲ್ಲವೂ ಕೇವಲ ಕಪ್ಪು ಶಿಲೆಯಲ್ಲಿ ನಿರ್ಮಾಣವಾಗಿದ್ದು, ನಾಜೂಕಿನ ಕುಸುರಿ ಕೆತ್ತನೆಯಿಂದ ಶಿಲ್ಪಕಲಾ ಪ್ರೇಮಿಗಳಿಗೆ ಹಾಗೂ ಇತಿಹಾಸ ತಜ್ಞರ ಗಮನ ಸೆಳೆಯುವಂತೆ ಮಾಡಿದೆ.

ಬಹುತೇಕ ಪುರಾತನ ದೇವಾಲಯಗಳಲ್ಲಿ ಮೂರ್ತಿಗಳಿರುವುದಿಲ್ಲ. ಆದರೆ ಇಲ್ಲಿ ಶಿವನ ಮೂರ್ತಿ ಇದ್ದು ಹೊರಾಂಗಣದಲ್ಲಿ ಮುಖ ಮಂಟಪ ಹೊಂದಿದ್ದು. ಸುಂದರ ಕೆತ್ತನೆಯ ಕಂಬಗಳಿಂದ ಕೂಡಿದ ಸಭಾ ಮಂಟಪ ಹೊಂದಿದೆ. ಗುಡಿಯ ಸುತ್ತಲಿನ ಗೋಡೆಗಳು ಆಕರ್ಷಕ ಕೆತ್ತನೆಯಿಂದ ಯಕ್ಷ–ಯಕ್ಷಿಣಿಯರ ಮೂರ್ತಿಗಳಿಂದ ಅಲಂಕರಿಸಲಾಗಿದ್ದು. ನೋಡುಗರನ್ನು ಮರುಳು ಮಾಡುವಂತಿದೆ. ಈ ಸುಂದರ ಮೂರ್ತಿಗಳ ಕೆತ್ತನೆಯನ್ನು ಗಮನಿಸಿದಾಗ ಶಿಲ್ಪಕಲೆ ಹಿಂದೆ ಎಷ್ಟೊಂದು ಶ್ರೀಮಂತವಾಗಿತ್ತು ಎಂಬುದು ತಿಳಿದು ಬರುತ್ತದೆ.

ಈ ಮೂರ್ತಿಗಳೆಲ್ಲವೂ ಅತೀ ಸೂಕ್ಷ್ಮ ಹಾಗೂ ನಯವಾದ ಕೆತ್ತನೆಯಿಂದ ಕೂಡಿವೆ. ಯಕ್ಷ-ಯಕ್ಷಿಣಿಯರ ಮೈಮೇಲಿನ ಸಾಲಂಕೃತ ಆಭರಣಗಳು ಇಲ್ಲಿನ ವೈಭವ ಜೀವನಕ್ಕೆ ಹಿಡಿದ ಕೈಗನ್ನಡಿಯಾಗಿವೆ,

ಗರ್ಭಗುಡಿಯೊಳಗೆ ಮಹಾದೇವನ ಮೂರ್ತಿಯಿದ್ದು ಹೊರ ಭಾಗದಲ್ಲಿ ಶನಿ ದೇವಾಲಯವಿದೆ. ಬಲಭಾಗದಲ್ಲಿ ವಿಶಾಲವಾದ ಸಭಾಮಂಟಪ ವಿದ್ದು ಬೀದರ ಜಿಲ್ಲೆಯ ಬಿಸಿಲಲ್ಲೂ ಈ ಮಂಟಪದಲ್ಲಿ ತಂಪಿನ ವಾತಾವರಣ ಮೂಡಿಬರುತ್ತದೆ.

ಈ ಮಂಟಪವು ಅಖಂಡವಾದ ನಾಲ್ಕು ಕಪ್ಪು ಕಲ್ಲಿನಿಂದ ನಿರ್ಮಾಣಗೊಂಡಿದ್ದು ಅಲಂಕೃತವಾದ ಶಿಲೆಯ ಮೇಲ್ಛಾವಣಿ ಹೊಂದಿದ, ಭವ್ಯ ಶಿಲೆಗಳನ್ನು ಜೋಡಿಸಿ ಅವುಗಳಿಗೆ ಕೆಳಭಾಗದಲ್ಲಿ ಗುಲಾಬಿ ಹೂವಿನಿಂದ ಅಲಂಕರಿಸಲಾಗಿದೆ. ಕಲ್ಲಿನಲ್ಲಿ ನಯ ನಾಜೂಕಿನಿಂದ ಕೆತ್ತಿರುವ ಈ ಹೂವಿನ ಅಲಂಕಾರಿಕ ಕಲೆಯು ದೇಶ-ವಿದೇಶಗಳ ಜನರನ್ನೂ ಬೆರಗು ಗೊಳಿಸುವಂತಹದ್ದಾಗಿದೆ.

ಸಾಮಾನ್ಯವಾಗಿ ಬೇಸಿಗೆಯಲ್ಲಿ ಅಧಿಕ ಪ್ರವಾಸಿಗರು ಇಲ್ಲಿಗೆ ಬರುತ್ತಾರೆ. ಏಕೆಂದರೆ ಈ ಪ್ರದೇಶ ಬೀದರ ಜಿಲ್ಲೆಯಲ್ಲೇ ತಂಪು ಪ್ರದೇಶವೆಂದು ಹೆಸರಾಗಿದೆ. ಸುಮಾರು ಸಾವಿರ ವರ್ಷಗಳ ಭವ್ಯ ಇತಿಹಾಸ ಹೊಂದಿದೆ.

ಹದಿನಾಲ್ಕು ಅರ್ಧ ಕಂಬಗಳಿಂದ ಕೂಡಿದ ಸಭಾ ಮಂಟಪವಿದ್ದು ಮಂಟಪದ ಮಧ್ಯೆ ನಾಲ್ಕು ಕಂಬಗಳಿಂದ ಕೂಡಿದ ಮತ್ತೊಂದು ರಂಗ ಮಂಟಪ ಮಧ್ಯದಲ್ಲಿ ಗರ್ಭ ಗೃಹದ ದ್ವಾರಕ್ಕೆ ಮುಖ ಮಾಡಿ ಕುಳಿತಿರುವ ನಂದಿ ವಿಗ್ರಹ ಸ್ಥಾಪನೆ ಮಾಡಲಾಗಿದೆ. ಕಂಬಗಳು ಮೂರು ತಲವಿನ್ಯಾಸಗಳು ಒಂದರ ಮೇಲೆ ಬಂದು ಬಿದ್ದಂತೆ ಇದ್ದು ಮಧ್ಯದಲ್ಲಿ ಗೋಪುರದಂತೆ ಕೆತ್ತಲಾಗಿದೆ. ವರ್ತುಲಾಕಾರದ ಈ ಕಂಬಗಳ ಮೇಲೆ ನೃತ್ಯ ಭಂಗಿಯ ಶಿಲಾಬಾಲಿಕೆ ಶಿಲ್ಪಗಳನ್ನು ಮನಮೋಹಕವಾಗಿ ಕೆತ್ತಲಾಗಿದೆ. ಈ ಸ್ತ್ರೀಯರು ಡೊಳ್ಳು – ಡೋಲಕ್‌ಗಳನ್ನು ಹಿಡಿದು ನರ್ತಿಸುತ್ತಿದ್ದಾರೆ. ಕೆಳಭಾಗದಲ್ಲಿ ಸಿಂಹದ ಮುಖ, ಕೀರ್ತಿ ಮುಖ ನವಿಲುಗಳು ಗಣಪ ಮತ್ತು ಆನೆಗಳ ವಿವಿಧ ಭಂಗಿಯ ಶಿಲ್ಪಗಳಿವೆ. ದ್ವಾರದ ಮೇಲೆ ಮೂರು ಮಂಟಪದ ಮೇಲ್ಛಾವಣಿಯ ಮುಂದಕ್ಕೆ ಚಿಕ್ಕ ಚಿಕ್ಕ ಐದು ಮಂಟಪಗಳು ಇವುಗಳ ಮಧ್ಯೆ ಲಕ್ಷ್ಮೀ, ಸರಸ್ವತಿ, ಬ್ರಹ್ಮ, ಧನಲಕ್ಷ್ಮೀ, ಸಂತಾನಲಕ್ಷ್ಮೀ, ವಿದ್ಯಾಲಕ್ಷ್ಮೀ, ವರಲಕ್ಷ್ಮೀ, ಧಾನ್ಯಲಕ್ಷ್ಮೀ, ಪಾರ್ವತಿ, ಗಣೇಶನ ಶಿಲ್ಪಗಳಿವೆ. ಇವುಗಳ ಕಲಾತ್ಮಕತೆ ಹಾಗೂ ಕುಸುರಿಗಳನ್ನು ನೋಡಿದರೆ ಬೇಲೂರಿನ ಚನ್ನಕೇಶವ ದೇವಾಲಯದ ನೆನಪು ಮೂಡಿಸುತ್ತದೆ.

ಗರ್ಭಗೃಹದ ಮುಂದೆ ಹತ್ತು ಅಡಿ ಅಗಲವಾದ ಮಂಟಪ ಅದಕೆ ಸುಖನಾಸಿ ಎಂದು ಕರೆಯಲಾಗುತ್ತದೆ, ಅಲ್ಲ ನಟರಾಜ, ಕಾಳಬೈರವ, ವಿಷ್ಣು ವರಹ ಮೂರ್ತಿ, ವೀರಭದ್ರ, ನರಸಿಂಹ, ಗರುಡ ಮುಂತಾದ ಸುಂದರ ಶಿಲ್ಪಗಳು ಗಮನ ಸೇಳೆಯುತ್ತವೆ. ಸ್ತಂಬ ಅತ್ಯಂತ ಸುಂದರವಾಗಿ ಕೆತ್ತನೆ ಮಾಡಿದ್ದು ಪದ್ಮಿನಿ ಶಿಲ್ಪ ಮತ್ತು ಮಹಾನಂದ ಶಿಲ್ಪಗಳನ್ನು ಕೊರೆಯಲಾಗಿದೆ.

೨. ಉಮಾಪೂರ ಮಹಾದೇವ ದೇವಾಲಯದಲ್ಲಿರುವ ೧೪ ಅರ್ಧ ಕಂಬಗಳ ವಿನ್ಯಾಸ

ಈ ದೇವಾಲಯ ಮೂಡಣ ದಿಕ್ಕಿನಕಡೆ ಮುಖಮಾಡಿದೆ. ಇದರ ಎದುರಿಗೆ ಎತ್ತರದ ದೀಪ ಸ್ತಂಭ, ಒಳಗೆ ಬಂದರೆ ಚೌಕಾಕಾರದ ಗರ್ಭಗೃಹ, ಮಧ್ಯದಲ್ಲಿ ಶಿವಲಿಂಗ ಪ್ರತಿಷ್ಠಾಪಿಸಲಾಗಿದೆ.

ಇದರ ಪಾರ್ಶ್ವ ಗೋಡೆಯಲ್ಲಿ ನವದೇವತೆಗಳ ಶಿಲ್ಪಗಳ ಉಬ್ಬು ಕೆತ್ತನೆಯಲ್ಲಿ ಕೊರೆಯಲಾಗಿದೆ. ಅರ್ಧ ಮಂಟಪದ ಮುಂದೆ ಎರಡು ಕಂಬಗಳಿವೆ. ಮುಂಭಾಗದ ಪಾರ್ಶ್ವ ಗೋಡೆಯಲ್ಲಿ ಎರಡು ಬದಿಗೆ ಪುಟ್ಟ-ಪುಟ್ಟ ಎರಡು ಮಂಟಪಗಳಿವೆ. ಈಗ ಅಲ್ಲಿ ಯಾವ ಮೂರ್ತಿಗಳೂ ಕಂಡು ಬರುವುದಿಲ್ಲ. ಹಾಗೇ ನೋಡುತ್ತ ಹೊರಗೆ ಬಂದರೆ ಅಕ್ಕ ಪಕ್ಕದಲ್ಲಿರುವ ಆರುವರೆ ೬$^{೧/೨}$ ಅಡಿ ಉದ್ದ ಎರಡುವರೆ ಅಡಿ ೨ $^{೧/೨}$ ಅಗಲದ ಭವ್ಯವಾದ ಶೈವ ದ್ವಾರ ಪಾಲಕರ ವಿಗ್ರಗಳಿವೆ. ಮುಂದೆ ಮೂರು ಮುಖ ಮಂಟಪ. ಇವುಗಳಿಗೆ ತೆರೆದ ಬಾಗಿಲುಗಳಿವೆ. ಸಭಾ ಮಂಟಪದ ಒಳಾಂಗಣ ತಳಪಾಯದಿಂದ ಎತ್ತರಕ್ಕೆ ಎರಡು ಅಡಿ ಸುತ್ತಲು ಜಗತಿ. ಈ ಜಗುಲಿಯ ಮೇಲಿನಿಂದ ೧೪ ಅರ್ಧ ಕಂಬಗಳಿವೆ. ಈ ಮಂಟಪವಿದೆ, ಮೇಲ್ಛಾವಣಿಯಲ್ಲಿ ಒಟ್ಟು ೧೨ ಉಪ ಮಂಟಪಗಳಿವೆ. ಪ್ರತಿಯೊಂದರಲ್ಲಿ ಅರಳಿರುವ ಸುಂದರವಾದ ಕುಸುರಿನಿಂದ ಸೂಕ್ಷ್ಮ ಕೆತ್ತನೆಯ ಕಮಲಗಳಿವೆ. ಆದರೆ ದಕ್ಷಿಣ ಭಾಗದಲ್ಲಿರುವ ಕಂಬ ಮತ್ತು ಮೇಲ್ಛಾವಣಿ ಬಿದ್ದು ಹೋಗಿದೆ. ಸಭಾ ಮಂಟಪದ ಮಧ್ಯದಲ್ಲಿ ನಾಲ್ಕು ಸುಂದರ ಕೆತ್ತನೆಯ ಕಂಬಗಳಿವೆ. ಇವುಗಳ ಮಧ್ಯ ನಂದಿಯನ್ನು ಗರ್ಭಗ್ರಹಕ್ಕೆ ಮುಖ ಮಾಡಿ ಕೂಡಿಸಲಾಗಿದೆ. ಇದರ ಕೊರಳಿಗೆ ಘಂಟೆಗಳ ಸುಂದರವಾದ ಸರ್ಪಳಿಯು ನಂದಿಯ ಹಿಂಬದಿಯಿಂದ ಕೊರಳ ಕೆಳಗೆ ಜೋತು ಬಿದ್ದಿದೆ. ನಂದಿಯ ಎಡಗಾಲು ನೆಲಕ್ಕೆ ಊರಿ ಏಳುವ ಭಂಗಿಯಲ್ಲದೆ. ಇದನ್ನು ನೋಡುತ್ತಿದ್ದಂತೆಯೇ ಅಬ್ಬಾ! ಎಂತಹ ಸುಂದರ ಶಿಲ್ಪ ಎಂಬ ಕಲ್ಪನೆ ಮೂಡಿಬರುತ್ತದೆ. ಇಡೀ ಸಭಾ ಮಂಟಪ ಎಂಟು ಅಡಿ ಎತ್ತರದಲ್ಲಿದೆ. ಸಭಾ ಮಂಟಪಕ್ಕೆ ತಗುಲಿ ಹೊರಾಂಗಣಕ್ಕೆ ಸುತ್ತಲು ತೆರೆದ ಕಕ್ಷಾಸನವಿದೆ. ಈ ಕಕ್ಷಾಸನ ತಳಪಾಯದಿಂದ ನಾಲ್ಕು ಅಡಿ ಎತ್ತರದಲ್ಲಿದ್ದು, ಹೊರಭಾಗಕ್ಕೆ ಮೂರು ಸಾಲುಗಳಾಗಿ ವಿಂಗಡಿಸಿದ ಸುಂದರವಾದ ಕೆತ್ತನೆಯ ಅಲಂಕಾರಗಳಿವೆ. ಮೇಲಿನ ಸಾಲುಗಳಲ್ಲಿ ನೃತ್ಯಗಾರರು ವಿವಿಧ ಭಂಗಿಯಲ್ಲಿ ನೃತ್ಯ ಮಾಡುತ್ತಿರುವರ ನಗ್ನ ಶಿಲ್ಪಗಳಿವೆ. ಕೈಯಲ್ಲಿ ಡಮರುಗ, ಮೃದಂಗ, ವೀಣೆ ಮುಂತಾದವುಗಳಿಂದ ಇವರ ನರ್ತನ ಭಂಗಿ ನೋಡುವುದೇ ಒಂದು ರೀತಿಯಿಂದ

ಮನಸ್ಸಿಗೆ ಮುದ ನೀಡುತ್ತದೆ. ಕೆಳಗಿನ ಸಾಲುಗಳಲ್ಲಿ ರತ್ನಪಟ್ಟಿಕೆಗಳಿವೆ. ಮಧ್ಯದ ಸಾಲುಗಳಲ್ಲಿ ಸಣ್ಣ ಸಣ್ಣ ಉಬ್ಬು ಶಿಲ್ಪ ಕೊರೆಯಲಾಗಿದೆ. ಇವುಗಳ ಅಕ್ಕ ಪಕ್ಕದಲ್ಲಿ ವಿವಿಧ ಪಕ್ಷಿ ಮತ್ತು ಪ್ರಾಣಿಗಳ ಮುಖಗಳು ಕೊರೆಯಲಾಗಿದೆ.

ಹೀಗೆ ನೋಡುತ್ತ ದೇವಾಲಯ ವೀಕ್ಷಿಸುತ್ತಾ ಸುತ್ತುಹಾಕಿ ಗರ್ಭಗೃಹದ ಹೊರಾಂಗಣದ ತಳಪಾಯದಿಂದ ತಲೆ ಮೇಲೆತ್ತಿ ಶಿಖರದವರೆಗೂ ನೋಡಿದರೆ ಈ ಶಿಖರ ಸುಮಾರು ಮೂವತ್ತು ಅಡಿ ಎತ್ತರದಲ್ಲಿರುವುದು ಕಂಡು ಬರುತ್ತದೆ. ಇದು ಸರಳ ರೇಖಾ ನಾಗರ ಶೈಲಿ ಮಾದರಿಯ ಶಿಖರ ತಲ ಜಗತಿಯಲ್ಲಿ ಜಂಘದಲ್ಲಿ ಒಂದರ ಮೇಲೆ ಒಂದು ಬಿದ್ದಂತೆ ೫ ಮಡಿಕೆಗಳಿವೆ.

ಇವುಗಳ ಮೇಲ್ಭಾಗದ ಬಿತ್ತಿ ಗೋಡೆಯೊಳಗೆ ಮೂರು ದಿಕ್ಕಿನ ಕಡೆಗೆ ಒಂದೊಂದು ಪುಟ್ಟ ಮಂಟಪಗಳಿವೆ. ಅದರೊಳಗೆ ದೇವ ಕೋಷ್ಟಕಗಳಿವೆ. ಉತ್ತರದಲ್ಲಿ ಎರಡು ಅಡಿ ಎತ್ತರ ಒಂದು ಅಡಿ ಅಗಲದ ಸುಂದರ ನಾಟ್ಯ ಭಂಗಿಯ ನಟರಾಜ ವಿಗ್ರಹ ಈ ಮೂರ್ತಿಯ ಎಡಭಾಗದ ಕೈ ಬೆರಳಿನ ಕಿರು ಬೆರಳು. ಬಾಯಿಯಲ್ಲಿಟ್ಟು ನಾಚಿದಂತೆ ಕಂಡು ಬಂದರೆ ಬಲಗಾಲದ ಹೆಬ್ಬೆರಳನ್ನು ಬಿಟ್ಟು ಎಲ್ಲಾ ಬೆರಳುಗಳ ಮೇಲ್ಭಾಗವು ನೆಲಕ್ಕೆ ಆಲಿಸಿ ನೃತ್ಯ ಮಾಡುತ್ತಿರುವ ಆಕರ್ಷಕ ಭಂಗಿ ಮೈಮರೆಸುತ್ತದೆ. ಇದರಂತೆ ಪಶ್ಚಿಮಕ್ಕೆ ಮುಖ ಮಾಡಿರುವ ಆಕರ್ಷಕ ಬಂಗಿ ವಿಗ್ರಹವು ತನ್ನ ಕಾಲ ಕೆಳಗೆ ರಾಕ್ಷಸನನ್ನು ತುಳಿದು ಸಂಹಾರ ಮಾಡುತ್ತಿರುವ ಶಿಲ್ಪವಿದೆ. ದಕ್ಷಿಣಕ್ಕೆ ಮುಖ ಮಾಡಿರುವ ಮಂಟಪದೊಳಗೆ ನಗ್ನ ರೂಪದ ಶಿಲ್ಪ. ಮತ್ತೊಂದು ನೃತ್ಯ ಭಂಗಿಯ ನಟರಾಜ ವಿಗ್ರಹ ವೃಷಣವನ್ನು ಯಾರೋ ಕಿರಾತಕರು ಒಡೆದು ಬಿಟ್ಟಿದ್ದಾರೆ.
ಈ ಎಲ್ಲಾ ಮಂಟಪಗಳಿಗೆ ಕಿರು ಶಿಖರಗಳಿವೆ.

ಇವುಗಳ ಮೇಲ್ಭಾಗದ ಉತ್ತರ ಸ್ಥಳದಲ್ಲಿ ಒಂದರ ಮೇಲೆ ಒಂದೊಂದು ಬಿದ್ದಂತೆ ಆರು ತಳಪಾಯಗಳಿವೆ. ಅವುಗಳನ್ನು ಕಂಬಗಳ ಕಲ್ಪನೆಯಲ್ಲಿ ಕೊರೆಯಲಾಗಿದೆ. ಇವುಗಳ ಮೇಲೆ ಕಿರು ಶಿಖರಗಳ ಸಾಲುಗಳಿವೆ. ಈ ಸಾಲುಗಳು ದೊಡ್ಡ ಶಿಖರದ ಸುತ್ತಲು ಸುತ್ತುವರೆದಿವೆ. ಇವು ಕೂಡ ಸರಳ ರೇಖಾ ನಾಗರ ಶೈಲಿಯಲ್ಲಿವೆ. ಕಿರು ಶಿಖರಗಳನ್ನು ಕೂಡಿಸಿದ್ದು ಈ ಲಕ್ಷಣಗಳುಳ್ಳ ದೇವಾಲಯಗಳನ್ನು ಕರ್ನಾಟಕದಲ್ಲಿ ಇನ್ನು ಶೋಧವಾಗಿಲ್ಲ.

೩. ಪಾರ್ವತಿ ದೇವಾಲಯ : –

ಮಹಾದೇವ ದೇವಾಲಯದ ಬಲಭಾಗದ ಹಿಂಬದಿಗೆ ಪಾರ್ವತಿ ದೇವಾಲಯವಿದೆ. ಇದು ಮಹಾದೇವ ಮಂದಿರಕ್ಕಿಂತ ಸ್ವಲ್ಪ ಚಿಕ್ಕದು. ಶಿಖರದ ಸುತ್ತ–ಮುತ್ತಲಲ್ಲಿ ಅಂಕುಡೊಂಕಾಗಿ ಕುಸಿದು ಬಿದ್ದಿದೆ. ಕೆಲವೊಂದು ಇಂದೋ ನಾಳೆ ಬೀಳುವ ಸ್ಥಿತಿಯಲ್ಲಿದೆ. ಕೆಲವು ವರ್ಷ ಹಿಂದೆ ಅಂದರೆ ೨೦೦೪ ನೇಯ ನವೆಂಬರ ತಿಂಗಳಲ್ಲಿ ದೇವಾಲಯದ ತಳಪಾಯದಿಂದ ಶಿಖರದವರೆಗೂ ಪೂರ್ತಿ ಮರು ಜೋಡಣೆ ಮಾಡಲಾಯಿತು.

ಇದರ ಸಭಾ ಮಂಟಪ ಚೌಕಾಕಾರದಲ್ಲಿದ್ದು ಇದರ ಸುತ್ತಲು ಎಂಟು ಅರ್ಧ ಕಂಬಗಳಿದ್ದು ಮಧ್ಯದಲ್ಲಿ ನಾಲ್ಕು ಪೂರ್ಣ ಕಂಬಗಳಿವೆ. ಇವುಗಳಿಗೆ ಮೇಲ್ಛಾವಣಿಯೂ ಇದೆ. ಕೆಲವೊಂದು ಕಡೆ ಬಿದ್ದಿರುವುದರಿಂದ ಗ್ರಾಮಸ್ಥರಿಂದ ಜೀರ್ಣೋದ್ಧಾರ ಮಾಡಲಾಗಿದೆ. ಸಭಾ ಮಂಟಪದ ಸುತ್ತ ತೆರೆದ ಕಕ್ಷಾಸನವಿದೆ. ಕಕ್ಷಾಸನದ ಹೊರಭಾಗದ ಎದುರಿನ ಎರಡೂ ಬದಿಗೆ ನೃತ್ಯ ಭಂಗಿಯ ನಗ್ನ ರೂಪದ ಶಿಲ್ಪಗಳಿವೆ. ಗರ್ಭಗುಡಿಯ ದ್ವಾರದ ಎರಡು ಬದಿಗೆ ದೇವಕೋಷ್ಟಗಳಿವೆ ಮಧ್ಯದಲ್ಲಿ ಉಮ-ಮಹೇಶ್ವರ ವಿಗ್ರಹವಿದೆ. ಮಹೇಶ್ವರನ ತೊಡೆಯ ಮೇಲೆ ಪಾರ್ವತಿ ಕುಳಿತಿರುವಳು ಮಹೇಶ್ವರನ ಬಲಗೈಯಲ್ಲಿ ಡಮರು ಎಡಗೈಯಲ್ಲಿ ಸರ್ಪ ಎಡಗೈ ಪಾರ್ವತಿಯ ಭುಜದ ಮೇಲೆ ಇದೆ. ಕೆಳಗಡೆ ನಂದಿ ಉಬ್ಬು ಕೆತ್ತನೆಯಿದೆ. ಈ ವಿಗ್ರಹದ ಎದುರಿಗೆ ಮೀನು ಮತ್ತು ಆಮೆಗಳ ಸಣ್ಣ ಶಿಲ್ಪಗಳಿವೆ. ಇವು ವಿಷ್ಣುವಿನ ಅವತಾರ ಸೂಚಿಸುತ್ತವೆ.

೪. ನೀಲಕಂಠೇಶ್ವರ ದೇವಾಲಯ : –

ಮಹಾದೇವ ದೇವಾಲಯದ ಎದುರಿಗೆ ನೀಲಕಂಠೇಶ್ವರ ದೇವಾಲಯ ನಾಲ್ಕು ಕಂಬ ಚೌಕಾಕಾರದ ಗರ್ಭಗೃಹದ ಮಧ್ಯದಲ್ಲಿ ನಾಲ್ಕು ಅಡಿ ಎತ್ತರದ ಶಿವಲಿಂಗವಿದೆ. ಮಧ್ಯದಲ್ಲಿ ಐದು ಹೆಡೆಯ ಸರ್ಪದ ಶಿರವಿದೆ. ಗರ್ಭಗೃಹದ ಒಳಾಂಗಣದ ಗೋಡೆಯ ಪಾರ್ಶ್ವ ತಳಪಾಯದಿಂದ ಶಿಖರದವರೆಗೂ ಸಂಪೂರ್ಣ ಬಿದ್ದು ಹೋಗಿದೆ. ಈ ದೇವಾಲಯದ ಬಲಭಾಗದಲ್ಲಿ ವಿಶಾಲವಾದ ಬಾವಿ ಇದೆ. ಈ ಬಾವಿಯಲ್ಲಿ ಗಣೇಶ ದೇವಾಲಯದಲ್ಲಿನ ಗಣೇಶನ ಪ್ರತಿ ಬಿಂಬ ಕಾಣಿಸುತ್ತದೆ.

೫. ಗಣೇಶನ ದೇವಾಲಯ : –

ಗಣೇಶ ದೇವಾಲಯ ಉತ್ತರ ದಿಕ್ಕಿನ ಕಡೆ ೧೯/೧೯ ಅಡಿಯ ಚೌಕಾಕಾರದ ಕಟ್ಟೆ ಇದ್ದು ಇದರ ಹಿಂಬದಿಗೆ ಎರಡು ಕಂಬ. ಇವುಗಳ ಮಧ್ಯ ಪ್ರಾಣಿ ಪೀಠದಲ್ಲಿ ಕುಳಿತಿರುವ ಭವ್ಯ ಗಣೇಶನ ವಿಗ್ರಹವಿದೆ. ಇದರ ಗಾತ್ರ ಎಂಟು ಅಡಿ ಎತ್ತರ. ಐದು ಅಡಿ ಅಗಲವಿದೆ. ಇದರ ಪ್ರಭಾವಳಿ ತ್ರಿಕೋನಾಕಾರದಲಿದ್ದು ಈ ವಿಗ್ರಹಕ್ಕೆ ಭಕ್ತಾದಿಗಳು ಚಂದ್ರ ಮಂಡಲ (ಕೆಂಪು ಬಣ್ಣದ ಪುಡಿ) ಹಚ್ಚುತ್ತಾರೆ. ಆದ್ದರಿಂದ ಇದರ ನುಣುಪು ಕುಸುರಿನ ಕೆತ್ತನೆ ಎಲ್ಲಾ ಮುಚ್ಚಿಕೊಂಡು ನಿಜವಾದ ಸೌಂದರ್ಯ ಕಾಣುವುದಿಲ್ಲ. ಮೇಲಿಂದ ಮೇಲೆ ಚಂದ್ರ ಮಂಡಲ ಹಚ್ಚುವುದರಿಂದ ಈ ಸುಂದರದ ಶಿಲ್ಪದ ಆಕಾರ ವಿಕಾರವಾಗಿದೆ. ನಮ್ಮ ಕೈ ಬೆರಳಿನಿಂದ ಒತ್ತಿದರೆ ಬೆರಳಿನ ಅರ್ಧ ಇಂಚು. ಒಳ ಹೋಗುತ್ತದೆ. ಅಷ್ಟೊಂದು ಚಂದ್ರ ಮಂಡಲ ಈ ಪ್ರತಿಮೆಗೆ ಮೆತ್ತಿಕೊಂಡಿದೆ. ಇದನ್ನು ತೆಗೆಯಲು ಭಕ್ತಾದಿಗಳು ಒಪ್ಪುತ್ತಿಲ್ಲವಂತೆ. ಆದರೂ ಒಂದೆರಡು ಸಲ ತೆಗೆಯುವ ಪ್ರಯತ್ನ ಮಾಡಿದರಂತೆ ಮತ್ತೆ ಚಂದ್ರ ಮಂಡಲ ಹಚ್ಚುತ್ತಿರುವುದರಿಂದ ಮೊದಲಿನ ಸ್ಥಿತಿಗೆ

ಬಂದಿದೆ. ವಿಗ್ರಹದ ಕಟ್ಟೆಯ ಮುಂದೆ ಎರಡೂ ಬದಿಗೆ ಒಂದೊಂದು ಕಂಬಗಳಿವೆ. ಈ ಕಂಬಗಳು ಹನ್ನೆರಡು ಅಡಿ ಎತ್ತರವಿದ್ದು ಏಳು ಅಡಿ ಸುತ್ತಳತೆಯಲ್ಲಿವೆ. ಈ ಎರಡು ಕಂಬಗಳ ವಿಶೇಷತೆ ಏನೆಂದರೆ ಈ ಕಂಬಗಳಿಗೆ ಯಾರಾದರು ಕೈಯಿಂದ ಅಲುಗಾಡಿಸಿದರೆ ಸ್ಪಷ್ಟವಾಗಿ ಎರಡಿಂಚಿಗಿಂತ ಹೆಚ್ಚು ಅಲುಗಾಡುತ್ತವೆ. ಹಾಗಂತ ಈ ಕಂಬಗಳಿಗೆ ಎಲ್ಲಿಯೂ ಬಿರುಕು ಬಿಟ್ಟಿರುವುದಿಲ್ಲ.

ಒಂದು ಕಂಬದಿಂದ ಇನ್ನೊಂದು ಕಂಬಕ್ಕೆ ಉದ್ದನೆಯ ತಂತಿ ಕಟ್ಟಲಾಗಿದೆ. ಮಧ್ಯದಲ್ಲಿ ಘಂಟೆಗಳನ್ನು ಜೋಡಿಸಲಾಗಿದೆ. ಕಂಬ ಅಲುಗಾಡಿಸಿದಾಗೊಮ್ಮೆ ಘಂಟೆಯನಾದ ಕೇಳಿ ಬರುತ್ತವೆ.

ಈ ದೇವಾಲಯಕ್ಕೆ ಮೇಲ್ಛಾವಣಿ ಇಲ್ಲ. ಇದರ ಬಲಭಾಗಕ್ಕೆ ವಿಶಾಲವಾದ ಆಲದ ಮರ ಬೆಳೆದಿದೆ. ಇದರ ರೆಂಬೆಗಳು ಎಲ್ಲಾ ದಿಕ್ಕಿನ ಕಡೆ ಚಾಚಿಕೊಂಡಿವೆ. ಒಂದು ಕೊಂಬೆ ಗಣೇಶನ ಕಟ್ಟೆ ತನಕ ಒಂದು ಕಟ್ಟಿಗೆ ತಗುಲದಂತೆ ನೇರವಾಗಿ ಕೆಳಗೆ ಬಂದಿದೆ.

ಬಹುಶಃ ಗಣೇಶ ಚತುರ್ಥಿ ಹಬ್ಬದಲ್ಲಿ ಒಡೆಯುವುದರೊಂದಿಗೆ ಬಹು ವಿಜೃಂಭಣೆಯಿಂದ 'ಗಣೇಶೋತ್ಸವ' ಆಚರಿಸಲಾಗುತ್ತದೆ. ಇವುಗಳ ಮಧ್ಯದಲ್ಲಿ ಪ್ರಾಣಿ ರೂಪದ ದುಂಡಗೆ ಬಾಯಿ ತೆರೆದ ಮಂಗಲ ಸಂಕೇತದ ಕೀರ್ತಿ ಮುಖಗಳ ಅಲಂಕರಣವಿದೆ. ಒಳಗಡೆ ಹಲ್ಲುಗಳನ್ನು ಮಾವಿನ ಕಾಯಿಗಳಂತೆ ಚಿತ್ರಿಸಲಾಗಿದೆ. ಇದರೊಳಗಿನ ಹಲ್ಲುಗಳು ಕೆಲವೊಂದು ಕಡೆ 'ಐದು' ಇದ್ದರೆ ಇನ್ನೊಂದು ಕಡೆ 'ಆರು' ಮತ್ತೊಂದು ಕಡೆ 'ಏಳು' ಕೊರೆಯಲಾಗಿದೆ. ಇವುಗಳು ಕೆಲವೊಂದು ಕಿರು ಶಿಖರದ ಕೆಳಭಾಗದ ಸುತ್ತಲು ನಿರ್ಮಿಸಲಾಗಿದೆ. ದೇವಾಲಯದ ಮುಖ ಭಾಗದ ಮಧ್ಯದಲ್ಲಿ ಮೂರು ಅಡಿ ಅಗಲದ ವೃತ್ತಾಕಾರದಲ್ಲಿ ಕೀರ್ತಿ ಮುಖದ ಶಿಖರವಿದೆ. ಆದರೆ ಇದರೊಳಗಿನ ಹಲ್ಲುಗಳು ಇಪ್ಪತ್ತೈದು ಇದ್ದವೆಂದು ಸೂಚಿಸುತ್ತವೆ. ಹೇಗೆಂದರೆ ಈ ವಿಗ್ರಹ ಭಗ್ನಗೊಂಡು ಇಲ್ಲಿ ಆ ಶಿಲ್ಪದ ಅರ್ಧ ಭಾಗವು ಉಳಿದಿರುವುದಿಲ್ಲ ಶಿಖರದ ಎಡ, ಬಲದಲ್ಲಿ ಒಂದೊಂದು ಗಣೇಶ ಮತ್ತು ಪಾರ್ವತಿ ಶಿಲ್ಪಗಳಿವೆ. ಶಿಖರದ ಗಾತ್ರವು ತಳಪಾಯದಿಂದ ಮೆಲಭಾಗಕ್ಕೆ ಚಿಕ್ಕದಾಗಿದೆ.

ಶಿಖರದ ಮೇಲ್ಭಾಗ ವೃತ್ತಾಕಾರವಿದ್ದು, ಅದರ ಸುತ್ತಮುತ್ತಲು ಕುಸುರಿನ ಕೆತ್ತನೆಯು ಒಂದೊಂದೇ ಮಣಿಗಳು ಪೋಣಿಸಿ ಶಿಖರದ ಮೇಲತುದಿಗೆ ಸುತ್ತಿರುವಂತೆ ರಚಿಸಲಾಗಿದೆ. ಆದರೆ ಮೇಲ್ಭಾಗದಲ್ಲಿ ಇನ್ನೊಂದು ಹಂತದ ರಚನೆಯ ನಿರ್ಮಾಣವಾಗಬೇಕ್ಕಿತ್ತು. ಹೇಗೆಂದರೆ ಕಲಬುರ್ಗಿ ಜಿಲ್ಲೆಯ ಚಿಂಚೊಳಿ ತಾಲೂಕಿನ 'ಮೂಘಾ'ದ ರಾಮಲಿಂಗೇಶ್ವರ ದೇವಾಲಯದ ಶಿಖರದಂತೆ ಇರಬೇಕಿತ್ತು, ಆದರೆ ನಿರ್ಮಾಣ ಅರ್ಧಕ್ಕೆ ನಿಂತಿದಿಯೋ ಅಥವಾ ನಿರ್ಮಾಣ ಮಾಡಿದ್ದು ಬಿದ್ದು ಹೋಗಿರಬಹುದೇ? ಎಂಬ ಶಂಕೆ ಮೂಡುತ್ತದೆ. ಎಂಬ ಪ್ರಶ್ನೆ ಇಲ್ಲಿ ಹುಟ್ಟಿರುತ್ತೆ ಏಕೆಂದರೆ ಇದೇ ಶೈಲಿಯ ದೇವಾಲಯ ಮೇಘಾದಲ್ಲಿಯೂ ಇರುತ್ತದೆ. ಈ ಲಕ್ಷಣಗಳುಳ್ಳ ಅದೇ ಕಾಲದ

ದೇವಾಲಯಗಳು ಉತ್ತರ ಕರ್ನಾಟಕದಲ್ಲಿ ಕೆಲವು ಭಾಗಗಳಲ್ಲಿ ಇವೆ. ಬೆಳಗಾವಿ ತಾಲೂಕಿನ ಹತ್ತರಗಿಯ ಶಿಖರೇಶ್ವರ ದೇವಾಲಯ ಬಾಗಲಕೋಟೆಯ ಸಪ್ತರಥ ಮಾದರಿಯಲ್ಲಿದೆ. ಉಮಾಪುರದಲ್ಲಿ ಉಮಾಮಹೇಶ್ವರರ ಕಲ್ಯಾಣ ಮಂಟಪ ಶಿವ–ಪಾರ್ವತಿಯರು ಇಲ್ಲಿಗೆ ಬಂದದ್ದು ಜಿಲ್ಲೆಯ ಶಿರೂರುನ ಸಿದ್ದೇಶ್ವರ ದೇವಾಲಯ ಮುಖ್ಯವೆನಿಸಿವೆ.

ಒಟ್ಟಿನಲ್ಲಿ ಅದು ಏನೇ ಇರಲಿ. ಈ ಶಿಖರದ ಪೂರ್ವಾಬೀಮುಖದ ಕೆಳಗೆ ಸುಕನಾಸಿ ಇದೆ. ಇಡೀ ಈ ದೇವಾಲಯವು ಮತ್ತು ಇದೆ ಪ್ರದೇಶದ ಒಂದೆರಡು ಕಿ. ಮೀ. ಸುತ್ತಳತೆಯಲ್ಲಿ ಇತಿಹಾಸಗಳ ಬಗ್ಗೆ ಹೇಳಲಾಗುತ್ತದೆ.

ಉಮಾಪುರದಲ್ಲೂ ಹನುಮಾನ ದೇವಾಲಯವಿದೆ. ಊರ ಗ್ರಾಮಸ್ಥರೇ ಊರಿನ ಸುತ್ತ ಮುತ್ತ ಬಿದ್ದಿರುವ ಕಲ್ಲು, ಶಿಲ್ಪಗಳು ತೆಗೆದುಕೊಂಡು ಬಂದು ಸಂಪೂರ್ಣ ದೇವಾಲಯ ಕಟ್ಟಿದ್ದಾರೆ ಎಂದು ಗ್ರಾಮಸ್ಥರು ಹೇಳುತ್ತಾರೆ. ಗರ್ಭಗೃಹದಲ್ಲಿ ಹನುಮಾನ ಶಿಲ್ಪ ಪ್ರತಿಷ್ಠಾಪಿಸಲಾಗಿದೆ. ಹೊರಗಡೆ ಎರಡು ನಂದಿ ವಿಗ್ರಹ ತಂದಿಡಲಾಗಿದೆ. ಈ ದೇವಾಲಯದ ಮುಂಭಾಗದಲ್ಲಿ ಎರಡು ಸುಂದರ ಶಿಲ್ಪಗಳು ಬುಡ ಮೇಲಾಗಿ ಬಿದ್ದು, ಗುಡಿಯ ಮೆಟ್ಟಿಲುಗಳಾಗಿವೆ.

ಒಂದು ವಿಗ್ರಹದಲ್ಲಿ ಉಮಾಮಹೇಶ್ವರ ಮತ್ತು ವಿವಿಧ ದಂಪತಿಗಳು ವಿವಿಧ ಪ್ರಾಣಿಗಳ ಮೇಲೆ ಕುಳಿತು ಸವಾರಿ ಮಾಡುತ್ತಿರುವ ಪೌರಾಣಿಕ ಕಥೆಯನ್ನು ಸಾರುತ್ತವೆ. ಇನ್ನೊಂದು ಒಡೆದ ಸ್ತಂಭವಿದ್ದು ಅದರಲ್ಲಿ ಕನ್ಯೆಯರ ಶಿಲ್ಪಗಳಿವೆ.

೬. ಗಟ್ಟಿವಾಳಯ್ಯನ ದೇವಾಲಯ : –

ನಾರಾಯಣಪುರದ ಶಿಲ್ಪಕಲೆ ಮತ್ತು ವಾಸ್ತು ಶಿಲ್ಪಗಳಲ್ಲಿ ಗಟ್ಟಿವಾಳಯ್ಯನ ದೇವಾಲಯವು ಕೂಡ ಒಂದಾಗಿದೆ. ಗಟ್ಟಿವಾಳಯ್ಯನವರ ಮೊದಲನೇ ಹೆಸರು ಮುದ್ದಣ್ಣ. ಇವರು ಯಾರ ಮನಸ್ಸು ನೋಯಿಸದೇ ಮುದ್ದಳೆ ಬಾರಿಸುತ್ತ ನರ್ತಿಸುತ್ತಿದ್ದರು. ಆದರೆ ಇವರ ಹೆಂಡತಿ ಜಾಕಿ. ಒಬ್ಬ ವಿಟನೊಂದಿಗೆ ತನ್ನ ದಾಹವನ್ನು ತೀರಿಸಿಕೊಳ್ಳುತ್ತಿದ್ದಳು. ಒಮ್ಮೆ ವಿಟನೊಂದಿಗೆ ತನ್ನ ಗಂಡನನ್ನೂ ತವರು ಮನೆಗೆ ಕರೆದೊಯ್ಯುತ್ತಾಳೆ. ದಾರಿಯಲ್ಲಿ ನೀರಡಿಕೆಯಾಗಿದೆ. ಬಾವಿಗೆ ಹೋಗಿ ನೀರು ತೆಗೆದುಕೊಂಡು ಬನ್ನಿ ಎಂದು ಗಂಡನಿಗೆ ಹೇಳುತ್ತಾಳೆ. ಆಗ ಅವಳು ವಿಟನೊಂದಿಗೆ ಸೇರಿ ಬಾವಿಯಲ್ಲಿದ್ದ ಗಟ್ಟಿವಾಳಯ್ಯನವರಿಗೆ ಕೊಲ್ಲಲು ತಲೆಯ ಮೇಲೆ ಕಲ್ಲು ಎಸೆಯುತ್ತಾಳೆ ಆದರೆ ಅವರು ಬದುಕಿ ಅತ್ತೆಯ ಮನೆಗೆ ಹೋಗುತ್ತಾರೆ. ಇವರ ಹೆಂಡತಿಯು ಅಲ್ಲಿಗೆ ಬರುತ್ತಾಳೆ. ಗಂಡನ ಊರಿನಲ್ಲಿ ಒಬ್ಬ, ತವರೂರಿನಲ್ಲಿ ಒಬ್ಬ ವಿಟನನ್ನು ಇಟ್ಟುಕೊಂಡಿದ್ದಳು. ಅವರಿಬ್ಬರು ಅವಳನ್ನು ನೋಡಿ, ಇವಳು ನನ್ನ ಹೆಂಡತಿ ಇಲ್ಲಾ ನನ್ನ ಹೆಂಡತಿ ಎಂದು ಒಬ್ಬರಿಗೊಬ್ಬರು ಕಿತ್ತಾಡುತ್ತಾರೆ. ಆಗ ಗಟ್ಟಿವಾಳಯ್ಯನವರು ಬಂದು ಅವಳ ಒಂದೊಂದು ಕಾಲನ್ನು ಹಿಡಿದು ಎರಡು ಭಾಗ ಮಾಡಿ ಅಂದರೆ ಅವಳ ದೇಹವನ್ನು ಸೀಳಿ ಒಬ್ಬೊಬ್ಬರಿಗೆ ಒಂದೊಂದು

ಭಾಗ ಕೊಟ್ಟನೆಂದು ತಿಳಿಯುತ್ತದೆ. ಮುಂದೆ ಬಸವಣ್ಣನವರ ಬಳಿ ಬಂದು ಶಿವಾನುಭವದ ಸದಸ್ಯನಾದರು. ಬಸವಣ್ಣನವರ ಮನೆಗೆ ಊಟಕ್ಕೆ ಹೋಗುತ್ತಿದ್ದ ಜಂಗಮರಿಗೆ ಮುಸರೆ ಗಡಿಗೆಯ ನೋಣಗಳೆಂದು ಟೀಕಿಸುತ್ತಾರೆ. ಅವರೆಲ್ಲರೂ ಸೇರಿ ಇವರ ಇಷ್ಟ ಲಿಂಗವನ್ನು ಕಿತ್ತುಕೊಂಡರು. ಬಸವಣ್ಣನವರ ಮನೆಯ ಬಾಗಿಲಿಗೆ ಬಂದು ಕುಳಿತುಕೊಂಡಿದ್ದರು. ಆ ಜಂಗಮರು ಆ ಇಷ್ಟಲಿಂಗವನ್ನು ಹಿಂದಕ್ಕೆ ಕೊಟ್ಟರು. ಆಗ ಕಟ್ಟಿಕೊಂಡ ಬೆಟ್ಟ ಇಷ್ಟಲಿಂಗದಲ್ಲಿ ಲೀನವಾಯಿತು.ನಂತರ ಗಟ್ಟಿವಾಳಯ್ಯನವರು ಕಲ್ಯಾಣಕ್ಕೆ ಬಂದು ಇಷ್ಟಲಿಂಗದ ಬಗ್ಗೆ ಅರಿತು. ಅಲ್ಲಮಪ್ರಭು, ಬಸವಣ್ಣನವರ ಮಾರ್ಗ ದರ್ಶನದಿಂದ ಅನುಭವ ಮಂಟಪದಲ್ಲಿ ವಚನಗಳನ್ನು ರಚಿಸಿ ಮಹಾನ ಶರಣರಾದರು. ಇವರ ಅಂಕಿತನಾಮ "ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ".

ಪಶ್ಚಿಮಕ್ಕೆ ಮುಖ ಮಾಡಿರುವ ಈ ದೇಗುಲ ಸಾಕಷ್ಟು ಶಿಥಿಲಗೊಂಡಿದೆ. ಇದು ಚೌಕಾಕಾರವಾಗಿದ್ದು ಶಿಖರ ಬಿದ್ದಿದೆ ಎಂದು ತಿಳಿದು ಬರುತ್ತದೆ.ಗರ್ಭ ಗುಡಿಯ ದ್ವಾರದಲ್ಲಿ ದ್ವಾರ ಪಾಲಕರ ಸುಂದರ ಕೆತ್ತನೆಯ ಶಿಲ್ಪ ಕಲೆಗಳಿವೆ. ಶಿಲ್ಪವಿದೆ ಇವಳು ಪುರಾಣ ಹೇಳುತ್ತಿದ್ದಾಳೆ. ಕೈಯಲ್ಲಿ ಗ್ರಂಥವಿದ್ದು ಅದರ ಮೇಲೆ ಬರೆದ ಲಿಪಿ ಕಾಣಬಹುದು. ಗುಡಿಯ ಪಕ್ಕದಲ್ಲಿ ಒಂದು ಚಿಕ್ಕ ಬಾವಿಯಿದೆ. ಎಂತಹ ಬರಗಾಲ ಬಂದರೂ ಕೂಡ ಇದರೊಳಗಿನ ನೀರು ಬತ್ತಿ ಹೋಗಿಲ್ಲ ಎನ್ನುತ್ತಾರೆ. ಈ ದೇಗುಲ ಕಲ್ಯಾಣ ಶೈಲಿಯಲ್ಲಿದೆ. ಇದನ್ನು ಸಂಪೂರ್ಣ ಬಿಚ್ಚಿ ಕಟ್ಟಲು ಆಂಧ್ರ ಪ್ರದೇಶದವರು ಜವಾಬ್ದಾರಿ ತೆಗೆದುಕೊಂಡಿದ್ದಾರೆ. ಇದರ ಖರ್ಚಿಗಾಗಿ ಈಗಾಗಲೇ ಹಣ ಬಿಡುಗಡೆಯಾಗಿದೆ.

೭. ಶಿವಪುರ ಸಿದ್ದೇಶ್ವರ ದೇವಾಲಯ : –

೧೨ನೇ ಶತಮಾನ ಜಗತ್ತಿನಲ್ಲಿಯೇ ಶಿವಶರಣರನ್ನು ಕೊಡುಗೆಯನ್ನಾಗಿ ಕೊಟ್ಟ ದೇಶ, ಅಂದರೆ ನಮ್ಮ ಭಾರತ ಇಂತಹ ಪೂಣ್ಯ ಭೂಮಿಯಲ್ಲಿ ಕರ್ನಾಟಕದ ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ೩೬ ಗ್ರಾಮ ಪಂಚಾಯತಿಯಲ್ಲಿ ಬರುವ ನಾರಾಯಣಪುರ ಗ್ರಾಮ ಪಂಚಾಯತಿಗೆ ಒಳಪಡುವ ಶಿವಪುರ ಗ್ರಾಮ ಒಂದು ತಾಲೂಕಿನ ಆಗ್ನೆಯ ದಿಕ್ಕಿನೆಡೆಗೆ ಬರುವ ಈ ಗ್ರಾಮ ಪಶ್ಚಿಮಕ್ಕೆ ಒಂದು ಸುಂದರವಾದ ಸಿದ್ದೇಶ್ವರ ದೇವಾಲಯವಿದೆ. ಸಿದ್ಧೇಶ್ವರ ದೇವಾಲಯ ಹೆಚ್ಚು ಶಿವನ ಹಸರಿನ ಕಲ್ಪನೆಯಲ್ಲಿ ನಿರ್ಮಿಸಲಾಗಿದೆ. ಇದರ ಗರ್ಭಗೃಹ ಚೌಕಾಕಾರದಲ್ಲಿದ್ದು ಸ್ವಲ್ಪ ಕೆಳಮಟ್ಟದಲ್ಲಿದೆ. ಸಭಾ ಮಂಟಪದಿಂದ ಕೆಳಗೆ ನಾಲ್ಕೈದು ಮೆಟ್ಟಲುಗಳು ಇಳಿದು ಬಂದರೆ ಕಾಶಿ ವಿಶ್ವನಾಥ, ಭೀಮಾಶಂಕರ, ತ್ರ್ಯಂಬಕೇಶ್ವರಲಿಂಗಕ್ಕೆ ರೀತಿಯಲ್ಲಿ ಮಂದಿರ ಮಧ್ಯ ಸುಂದರವಾದ ಶಿವಲಿಂಗವಿದೆ. ರಾಕ್ಷಸರನ್ನು ಶಿವನು ಸಂಹಾರ ಮಾಡಿದನೆಂದು ದಂತ ಕತೆಯು ಇದೆ. ಪಶ್ಚಿಮಕ್ಕೆ ಒಂದುವರೆ ಕಿ. ಮೀ. ದೂರದಲ್ಲಿ ತ್ರಿಪೂರಾಂತ ಕೆರೆ ಇದೆ. ಅಲ್ಲಿ ಮೂವರು ರಾಕ್ಷಸರನ್ನು ಶಿವನು ಕೊಂದನೆಂಬ ಪ್ರತಿತಿಯುದೆ. ಶಿವನು ರಾಕ್ಷಸರನ್ನು ಸಂಹಾರ

ಮಾಡಲು ಧ್ಯಾನಿಸಲು ಈ ಪ್ರದೇಶದ ಸುತ್ತ ಮುತ್ತ ತಗ್ಗು ಪ್ರದೇಶವೇ ಹೆಚ್ಚು 'ತಗ್ಗು' ಎನ್ನುವ ನಿಘಂಟುವಿನಲ್ಲಿ 'ಪುರ' ಎಂಬ ಪದ ಬಳಕೆಯಾಗಿದೆ. ಈ ಊರ ಪ್ರದೇಶದಲ್ಲಿ ಶಿವನು ಬಂದಿರುವುದರಿಂದ ಶಿವ ಮತ್ತು ಪೂರ ಎಂಬ ಪೂರ ಎರಡು ಶಬ್ಧಗಳು ಜೋಡಿಸಿ ಶಿವಪೂರ ಅಥವಾ ಶಿವಪುರ ಎಂಬ ಹೆಸರು ಈ ಗ್ರಾಮಕ್ಕೆ ಬಂದಿರಬಹುದು. ಶಿವಪೂರದಲ್ಲಿ ಶಿವಶರಣರು ನೆಲೆಸಿದ್ದು ಹಾಗೂ ಅವರ ಭಕ್ತಿಯ ತವರೂರು ಎಂದು ಹರಿಹರ ತನ್ನ ರಗಳೆಯಲ್ಲಿ ಹೇಳಿದ್ದಾನೆ. ಕಲ್ಯಾಣ ಕ್ರಾಂತಿ ನಡೆದಾಗ ಬೇರೆ ಬೇರೆ ಕಡೆಯಿಂದ ಬಂದು ಕೆಲ ಶಿವಶರಣರೆಲ್ಲ ಮರಳಿ ಹೋದರು. ಆದರೆ ಸಿದ್ಧರಾಮ ತನ್ನ ಹುಟ್ಟೂರಾದ ಸೋನ್ನಲಾಪುರಕ್ಕೆ ಹೋಗಿ ಅಲ್ಲಿ ಶರಣ ಸಂಸ್ಕೃತಿ ಪರಂಪರೆಯನ್ನು ಉಳಿಸಲು ಪ್ರಯತ್ನಿಸಿದ್ದರಿಂದ ಇಂದಿಗೂ ಅಲ್ಲಿ ಕೆರೆ ದೇವಾಲಯ ನೋಡಬಹುದು ಮತ್ತು ಶರಣ ಸಂಸ್ಕೃತಿ ಇಂದಿಗೂ ದೇವಸ್ಥಾನದ ಗರ್ಭಗೃಹದ ಮೇಲ್ಛಾವಣಿಯ ಮಧ್ಯದಲ್ಲಿ ಕಮಲದ ಅಲಂಕರಣ ನಾಲ್ಕು ಕಡೆ ಕೀರ್ತಿಮುಖಗಳ ಶಿಲ್ಪ ಚಿತ್ರಣವಿದೆ. ಸುತ್ತಲೂ ಮುತ್ತು, ರತ್ನಗಳ ಕೆತ್ತನೆಯಿದ್ದು ಗರ್ಭಗೃಹದ ಗೋಡೆಯ ಮಧ್ಯದಲ್ಲಿ ಮೂರು ಅರ್ಧ ಕಂಬಗಳಿವೆ. ಉತ್ತರ, ದಕ್ಷಿಣ, ಪಶ್ಚಿಮಕ್ಕೆ ಇದು ಪೂರ್ವಕ್ಕೆ ಗರ್ಭಗೃಹದ ದ್ವಾರ, ದ್ವಾರಕ್ಕೆ ಇತ್ತಿಚಿನ ಗ್ರಾಮ ಪಟ್ಟಣದ ಲೇಪನವಿದೆ. ಅಕ್ಕ ಪಕ್ಕದಲ್ಲಿ ಶಿವ ದ್ವಾರ ಪಾಲಕರು, ಸೇವಕಿಯರು ಅವರು ತ್ರಿಭಂಗಿ ಕತ್ತರಿಗಾಲಲ್ಲಿ ನಿಂತಿರುವ ಮತ್ತು ಕುಂಬಚೌರಿಹಾರ ಹಿಡಿದಿರುವುದು, ಸೇರಿದಂತೆ ತೊಡೆಗಳಿಗೆ ನಾಗಗಳನ್ನು ಸುತ್ತಕೊಂಡಿ. ಇದರ ಕೆಳಗೆ ಕತ್ತರಿಗಾಲಲ್ಲಿ ತ್ರಿಭಂಗಿಯಲ್ಲಿ ಶಿಲಾ ಬಾಲಿಕೆ ನಿಂತಿರುವಳು. ದುಂಡು ಮುಖದ ಈ ಬಾಲೆಯ ಮಂದಹಾಸ ಚೆಲ್ಲುತ್ತಿದ್ದಾಳೆ. ಕೇಶರಾಶಿಯನ್ನು ತುರುಬು ಕಟ್ಟಿ ಶಿರದ ಮೇಲೆ ಆಭರಣಗಳಿಂದ ಅಲಂಕರಿಸಿದಂತಿರುವ ಚಿತ್ರಣವಿದೆ. ಕೊರಳಲ್ಲಿ ಧರಿಸಿರುವ ಸರವು ದುಂಡನೆಯ ತುಂಬಿದ ಸ್ತನಗಳ ಮೇಲಿನ ಕೆಳಗೆ ಜೋತು ಬದ್ದಂತಿದೆ. ಮೈ ಕೈ ತುಂಬಿಕೊಂಡಿರುವ ಈ ಶಿಲಾ ನುಣಪಾಗಿದೆ. ನೋಡಲು ಕಣ್ಮನ ತಣಿಸುತ್ತದೆ. ಸೀರೆಯುಟ್ಟ ನಾರಿ ತನ್ನ ಎರಡು ಕೈಗಳಿಂದ ಸೀರೆ ಬಿಗಿ ಹಿಡಿದು ತೋರಿಸುವ ಆಕರ್ಷಣಿಯವಾಗಿದೆ. ಹರಸಿನ ಸೀರೆ ಹೊರಕಳಿಂದ ಸೊಂಟದ ಕೇಳತನಕ ಬಂದಿರುವ ನೋಟ ರಾಸಲೀಗೆ ಮೂಲ ಪರೀಕ್ಷೆಯಾಗಿದೆ. ಈ ಶಿಲ್ಪದಂತೆ ದ್ವಾರದ ಬಲಭಾಗದಲ್ಲಿ ಮತ್ತೊಂದಿದೆ. ಅದು ತ್ರಿಭಗಿಯಲ್ಲಿದ್ದು ಇಂತಹ ಶಿಲ್ಪಗಳಂತೆ ನಾರಾಯಣಪುರದ ಶಿವಾಲಯದ ಹೊರ ಗೋಡೆಗೆ ಒಂದು ಶಿಲ್ಪವಿದೆ. ಶಿವಾಲಯದಂತೆ ಈ ದೇವಾಲಯವೂ ಇದ್ದಿರಬಹುದು. ಸಭಾಮಂಟಪದಲ್ಲಿ ಒಂಬತ್ತು ಅಂಕಣಗಳಿವೆ. ಒಂದು ಅಂಕಣದಲ್ಲಿ ಶಿಲಾಶಾಸನವೇ ಮೇಲ್ಛಾವಣಿಯಾಗಿದೆ. ಅದರಲ್ಲೇನಿದೆ ಎಂಬುದು ಎಲ್ಲಿಯೂ ಉಲ್ಲೇಖವಿಲ್ಲ. ಅವರ ಬಗ್ಗೆ ಶೋಧನೆ ನಡೆಯಬೇಕಾಗಿದೆ. ಮಧ್ಯದ ಒಂದು ಅಂಕಣದದಲ್ಲಿ ಕಮಲದ ಹೂವಿನ ಅಂಕಣವಿದೆ. ಅವರ ಕೆಳಗೆ ನಾಲ್ಕು ಕಡೆ ದೊಡ್ಡ ದೊಡ್ಡ ಕೀರ್ತಿಮುಖಗಳ ತೊರಣಗಳಿವೆ. ಸಭಾಮಂಟಪದ ಮಧ್ಯ ಆರು ಸ್ತಂಭಗಳಿವೆ, ಸ್ತಂಭಗಳಿಗೆ ಪ್ರಾಣಿ ಪೀಟ, ಕಂಠ ಮತ್ತು

ಬೋದಿಗಳಿವೆ. ಈ ಸ್ತಂಭಗಳು ಚೌಕಾಕಾರ, ಆಯತಕಾರ, ವೃತ್ತಾಕಾರ ನಾಲ್ಕು ಎಂಟು ಮುಖಗಳು ಪಟ್ಟಿ ಸುತ್ತುವರಿದಿವೆ. ಒಂದು ಚಿಕ್ಕ ಚಿಕ್ಕ ಪಟ್ಟಿಯ ಚಿತ್ರಣವಿದೆ. ಸಭಾಮಂಟಪದ ಗೋಡೆಯಲ್ಲಿ ಅರ್ಧ ಕಂಬಗಳಿವೆ. ಅವು ಶಿಖರದ ನಮೂನೆಯ ಆಕಾರಗಳಿವೆ ಸಭಾಮಂಟಪದ ಗೋಡೆಗೆ ಅಲಲ್ಲಿ ಶಿಲ್ಪ ಕಲೆಗಳು ಜೋಡಿಸಿದ್ದಾರೆ. ಸಭಾಮಂಟಪಕ್ಕೆ ಎರಡು ದ್ವಾರಗಳಿವೆ ಒಂದು ಪೂರ್ವಕ್ಕೆ ಇನ್ನೊಂದು ಉತ್ತರಕ್ಕೆ ಇದೆ. ಇಲ್ಲಿ ದ್ವಾರಪಾಲಕರು ಮತ್ತು ಸೇವಕಿಯರು ಇದ್ದಾರೆ. ಅಕ್ಕ ಪಕ್ಕದಲ್ಲಿ ಉಮಾಮಹೇಶ್ವರ, ನಟರಾಜ ಇತ್ಯಾದಿ ಶಿಲ್ಪಗಳಿವೆ. ಮುಂದೆ ಪ್ರಾಂಗಣ ಅವರ ಮುಂದೆ ಎರಡು ದೀಪ ಸ್ತಂಭಗಳಿವೆ. ಹಾಗೆ ನೋಡುತ್ತ ಹೊರಗಡೆ ಬಂದರೆ ಸಭಾಮಂಟಪದ ಮೇಲೆ ಸುತ್ತಲೂ ಕಮಲಗಳ ಹೂಗಳಂತೆ ನಿರ್ಮಿಸಲಾಗಿದೆ. ಗರ್ಭಗೃಹದ ಶಿಖರ ಗುಮ್ಮಟದಂತೆ ಮುಸ್ಲಿಂ ಶೈಲಿಯಲ್ಲಿವೆ. ಗುಮ್ಮಟ ಮತ್ತು ಅದರ ಮೇಲೆ ಕಳಸ, ಕೆಳಗಡೆ ನಾಲ್ಕು ಭಾಗದ ಕೊನೆಗೆ ನಾಲ್ಕು ಹಿಂದು ಧರ್ಮದ ನಂದಿಯನ್ನು ಜೋಡಿಸಿದ್ದಾರೆ. ಮುಸ್ಲಿಂರ ಕಲ್ಯಾಣದ ಮಧುಕೇಶ್ವರ ದೇವಾಲಯ ಭಗ್ನಗೊಳಿಸಿ ಪುನಃ ಅವರಿಂದಲೇ ಜಿರ್ಣೋದ್ಧಾರಗೊಳಿಸಿದ್ದಾರೆಂದು ತಿಳಿದು ಬರುತ್ತದೆ.

ಒಂದೇ ದೇವಾಲಯ ಹಿಂದು-ಮುಸ್ಲಿಂ ಮಿಶ್ರ ಶೈಲಿಯಲ್ಲಿರುವುದು ಈ ಭಾಗದ ಅಪರೂಪದ ದೇವಾಲಯ ಹಿಂದೆ ಹಿಂದು ಮುಸ್ಲಿಂರು ಒಗ್ಗಟ್ಟಿನಿಂದ ಇದ್ದರೆಂದು ತೋರಿಸುವುದು ಅಥವಾ ಅವರ ಒತ್ತಡಕ್ಕೆ ಈ ರೀತಿ ನಿರ್ಮಿಸಿರುವ ಸಾಧ್ಯತೆಗಳಿವೆ ಎನ್ನಲಾಗುತ್ತದೆ.

೮. ಕುಂಡಲೇಶ್ವರ ಸೂಕ್ತ ಕೆತ್ತನೆ : -

ಕುಂಡಲೇಶ್ವರ ದೇವಾಲಯದ ಮುಂಭಾಗದಲ್ಲಿ ಚೌಕಾಕಾರ ಪುಷ್ಕರ್ಣಿ ಇದೆ. ಇಲ್ಲಿ ಕರ್ಣಾಭರಣ ಅಥವಾ ಕುಂಡಲ ಇಲ್ಲ. ಒಂದು ಕಂಡು ಸೃಷ್ಠಿ ಆಯಿತೆಂದು ಹೇಳಲಾಗುತ್ತದೆ. ಆದ್ದರಿಂದ ಇಂದಿಗೂ ಕೂಡ ಕುಂಡಲೇಶ್ವರ ಎಂಬ ಹೆಸರಿನಿಂದ ಕರೆಯಲ್ಪಡುತ್ತಾರೆ. ಮೇಲಿನಿಂದ ಕೆಳಗೆ ಇಳಿಯಲು ಮೆಟ್ಟಿಲುಗಳಿವೆ. ಕಲ್ಲುಗಳಿಂದಲೇ ಕಟ್ಟಿರುವಂತೆ ಕಾಣಿಸುತ್ತದೆ.

ಈ ಪುಷ್ಕರಣಿಯಲ್ಲಿ ಮುಕ್ಕಾಲು ಭಾಗ ಮಣ್ಣು ಬಿದ್ದು ಮುಚ್ಚಿಕೊಂಡಿದ ಆಳದಲ್ಲಿ ಒಂದು ಶಿವಲಿಂಗವಿದೆ. ಮತ್ತು ಒಳಗಡೆ ಪಶ್ಚಿಮ-ಉತ್ತರಕ್ಕೆ ಒಂದೊಂದು ಸುರಂಗ ಮಾರ್ಗವಿದೆ ಎಂದು ಹೇಳುತ್ತಾರೆ. ಒಂದು ಬಸವಕಲ್ಯಾಣಕ್ಕೆ ಇನ್ನೊಂದು ಕಾಶಿಗೆ ಇರುವುದಂತೆ ! ಕಾಶಿ ಕ್ಷೇತ್ರದಷ್ಟೇ ಈ ಕ್ಷೇತ್ರವು ಪವಿತ್ರ ಎಂದು ಸ್ಥಳಿಯರು ಹೇಳುತ್ತಾರೆ. ಈ ಕುಂಡಲೇಶ್ವರದಿಂದಲೇ ನೇರವಾಗಿ ಮೇಲೆ ಹತ್ತಲು ಮೆಟ್ಟಿಲುಗಳಿವೆ. ಅದು ದೇವಾಲಯದ ಪ್ರಾಂಗಣಕ್ಕೆ ತಲುಪುತ್ತದೆ. ಅಕ್ಕ ಪಕ್ಕದಲ್ಲಿ

ಗಜತೋರಣ ಕೀರ್ತಿ ಮುಖಗಳ ವಿವಿಧ ತೋರಣಗಳಿವೆ. ಹಲವಾರು ಶಿಲಾಮೂರ್ತಿಗಳು ಭಗ್ನಗೊಂಡು ಹಾಳಾಗಿ ಬಿದ್ದಿರುವುದು ನಾವು ನೋಡಬಹುದು.

ಈ ದೇವಾಲಯದ ದಾಖಲೆಯ ಪ್ರಕಾರ ಎರಡು ಎಕರೆ ಇಪ್ಪತೊಂಬತ್ತು ಗುಂಟೆ ಇರುವುದು ಇಲ್ಲಿಯವರೆಗೂ ಈ ದೇವಾಲಯಕ್ಕೆ ಪೂಜೆ ಸಲ್ಲಿಸುತ್ತ ಬಂದವರು ಆರು ತಲೆಮಾರಿನವರು ಕ್ರಮವಾಗಿ ಸಂಬಾಜಿ, ಸದಾಶಿವ, ಸಂತಬಾಯಿ, ಸಿದ್ದಪ್ಪ, ಬಾಬುರಾವ, ಸಿದ್ದೇಶ ಎಂಬುವವರು. ಈ ದೇವಾಲಯದ ಮುಂಭಾಗದಲ್ಲಿ ವಿಶಾಲವಾದ ಕೆರೆ ಇದು. ಇಲ್ಲಿ ಕೆಂಪು, ತಿಳಿಹಸಿರು ಬಣ್ಣದ ನೀರಿದೆ. ಮುಂದೇ ಈ ದೇವಾಲಯದ ಬಲಬದಿಗೆ ಎರಡು ಚಿಕ್ಕ ಚಿಕ್ಕ ಮಂದಿರಗಳಿವೆ. ಒಂದು ನರಸಿಂಹ ಮಂದಿರ ಎನ್ನಲಾಗಿದೆ. ಒಳಗಡೆ ನರಸಿಂಹ ವಿಷ್ಣು ಹಾಗೂ ಗಣೇಶನ ಮೂರ್ತಿಗಳಿವೆ. ಇನ್ನೊಂದು ದತ್ತಾತ್ರೇಯ ಘಾಣಗಾಪೂರ ದತ್ತಾತ್ತ್ರೇಯನ್ನು ಇಲ್ಲಿಗೆ ಬಂದಿರುವ ಕುರುಹುಗಳಿವೆ. ಅವನ ಪಾದರಕ್ಷೆಯ ಚಿತ್ರಣವಿದೆ. ಪಕ್ಕದಲ್ಲಿ ದಾಸೋಹದ ಕೋಣೆಗಳಿವೆ. ಇದರ ಹಿಂದೆ ಅಣವೀರಭದ್ರೇಶ್ವರ ದೇವಾಲಯವಿದೆ.

ಈ ಶಿವಪೂರ ಗ್ರಾಮದಲ್ಲಿ ಹನ್ನೆರಡನೇ ಶತಮಾನದ ಶರಣ ಮುಘಿ ಸಂಗಯ್ಯನ ಜನ್ಮ ಸ್ಥಳವಿದ್ದ ಗ್ರಾಮಮಧ್ಯದಲ್ಲಿ ಅವನ ಮನೆ-ಮಠ ಮತ್ತು ಗವಿ ಇರುವುದು ಅದು ಈಗ ಹಾಳು ಬಿದ್ದಿದೆ. ಸಿದ್ದರಾಮೇಶ್ವರ ದೇವಾಲಯದ ಕೇವಲ ಸಭಾ ಮಂಟಪ ಚಾಲುಕ್ಯರ ಶೈಲಿಯಲ್ಲಿ ನಿರ್ಮಾಣವಾಗಬೇಕಿದೆ.

೯. ಜಲಸಂಗವಿ ಕಮಲೇಶ್ವರ ದೇವಾಲಯ: –

ಕರ್ನಾಟಕ ಇತಿಹಾಸದ ಗತವೈಭವವನ್ನು ಸಾರುವ ಪಳಯುಳಿಕೆಗಳು ಕೇವಲ ಬೇಲೂರು ಹಳೇಬಿಡುಗಳಲ್ಲಿವೆ. ಎಂದು ತಿಳಿಯುವ ಹಾಗೂ ಕನ್ನಡ ನಾಡಿನ ಜನತೆ ಉತ್ತರ ಕರ್ನಾಟಕದಂತೆ ಗಮನ ಹರಿಸುತ್ತಿಲ್ಲ. ಅದರಲ್ಲೂ ಬೀದರ ಎಂದರೆ ಅತ್ಯಂತ ಹಿಂದುಳಿದ ಪ್ರದೇಶ ಎಂದೆ ಪ್ರಖ್ಯಾತವಾಗಿರುವ ಕರ್ನಾಟಕದ ಕಿರೀಟದಂತಿರುವ ಬೀದರ ಒಂದಾನೊಂದು ಕಾಲದಲ್ಲಿ ನೃಪತುಂಗನ ನಾಡಾಗಿತ್ತು. ಐತಿಹಾಸಿಕ ವಾಸ್ತು ಶಿಲ್ಪಗಳ ಬೀಡಾಗಿತ್ತು. ತಿರುಳು ಕನ್ನಡ ನಾಲ್ನುಡಿಗಳ ನೆಲೆವಿಡಾಗಿತ್ತು.ಕಲ್ಯಾಣ ಚಾಲುಕ್ಯರ ವಾರಂಗಲ್ಲಿನ ಕಾಕತೀಯರು. ಬಹುಮನಿಯರು ಮತ್ತು ಬರೀದ್‌ಷಾಹಿ ಸುಲ್ತಾನರು ಆಳಿದ ಬೀದರ ಜಿಲ್ಲೆಯಲ್ಲಿ ಸಾಕಷ್ಟು ಐತಿಹಾಸಿಕ ಸ್ಮಾರಕಗಳಿವೆ. ಕಟ್ಟಡಗಳಿವೆ, ಔರಂಗಜೇಬನ ಆಕ್ರಮಣಕ್ಕೆ ತುತ್ತಾಗಿ ನಾಶವಾದ ಕೋಟೆ ಕೊತ್ತಲುಗಳು ಹಾಗೂ ದೇವಾಲಯಗಳ ಅವಶೇಷಗಳು ಲೆಕ್ಕವಿಲ್ಲದಷ್ಟು ಇಲ್ಲಿ ಕಂಡು ಬರುತ್ತವೆ.

ಕಲ್ಯಾಣದ ಚಾಲುಕ್ಯರ ವಾಸ್ತು ಶೈಲಿಯು ಆರಂಬವಾದದ್ದು ಉತ್ತರ ಕರ್ನಾಟಕದಲ್ಲಿ ೧೧ ನೆಯ ಶತಮಾನದ ಚಾಲುಕ್ಯರ ವಾಸ್ತು ಶೈಲಿಯ ಉತ್ತರ ಕರ್ನಾಟಕದಿಂದ ಪ್ರಾರಂಭವಾಗಿ

ಕಾಲಕ್ರಮೇಣ ದಕ್ಷಿಣ ಕರ್ನಾಟಕದ ಶಿವಮೊಗ್ಗ ಜಿಲ್ಲೆಯವರೆಗೂ ಹಬ್ಬಿ ನೂರಾರು ದೇವಾಲಯಗಳ ಸೃಷ್ಟಿಗೆ ಕಾರಣವಾಯಿತು. ಈ ವಾಸ್ತು ಶೈಲಿಯು ಹಲವಾರು ಚಿಕ್ಕ ಪುಟ್ಟ ಬದಲಾವಣೆಗಳೊಂದಿಗೆ ಹೋಯ್ಸಳ ವಾಸ್ತು ಶೈಲಿಯಾಗಿ ಮಾರ್ಪಾಟು ಆಗಿ ಕರ್ನಾಟಕದಲ್ಲಿ ಖ್ಯಾತಿಯನ್ನು ಕಂಡಿತ್ತು.

ಕಲ್ಯಾಣ ಚಾಲುಕ್ಯರ ಕಾಲದ ಸರಳ ವಾಸ್ತು ಶೈಲಿಯ ಉದಾಹರಣೆ ಜಲಸಂಗವಿಯ ಶಿವ ದೇವಾಲಯ ಒಂದು ಬೀದರ ಜಿಲ್ಲೆಯ ಹುಮನಾಬಾದ ತಾಲೂಕಿನ ಜಲಸಂಗವಿ ಒಂದು ಪುಟ್ಟ ಹಳ್ಳಿ. ಈ ಹಳ್ಳಿಯಲ್ಲಿ ಕಪ್ಪು ಕಲ್ಲಿನಿಂದ ಕಟ್ಟಲಾದ ಕಲ್ಲೇಶ್ವರ ದೇವಾಲಯವಿದೆ. ಜಲಸಂಗವಿಯ ಶಿವಾಲಯದಲ್ಲಿನ ಗರ್ಭಗೃಹ, ನವರಂಗ ಮಂಟಪ ಹಾಗೂ ಮುಖ ಮಂಟಪಗಳಿವೆ. ದೇವಾಲಯದ ಹೊರ ಗೋಡೆಯ ಸುತ್ತಲು ಗೋಡೆಯ ಮೇಲೆ ದೇವ ದೇವತೆಗಳ ಆಕರ್ಷಕ ಮೂರ್ತಿಗಳನ್ನು ಕೆತ್ತಲ ಪಟ್ಟಾ ಶಿಲಾ ಬಾಲಿಕೆಯರ ವಿಗ್ರಹಗಳಿವೆ. ಹೊರ ಗೋಡೆಯ ಮೇಲೆ ಕೆತ್ತಲಾದ ಮನ ಮೋಹಕ ಶಿಲ್ಪಗಳು ಲಯಬದ್ಧವಾಗಿ ಚಲಿಸುತ್ತಿರುವುವೆನೋ ಎಂಬಾ ಕಲ್ಪನೆ ಹುಟ್ಟಿಸುತ್ತದೆ. ಗಣಪತಿಯ ನಟನಾ ಭಂಗಿಯಲ್ಲಿದೆ. ಇದು ಕಲಾ ಪ್ರೀಯರನ್ನು ಆಕರ್ಷಿಸುತ್ತದೆ. ಸುಂದರ ಭಂಗಿಯಲ್ಲಿರುವ ವೀರಭದ್ರ, ದಕ್ಷಿಣ ಮೂರ್ತಿ ದುರ್ಗಾ ಇತ್ಯಾದಿ ವಿಭಿನ್ನ ರೀತಿಯ ಶಿಲ್ಪಗಳು ಹಾಗೂ ವಾಸ್ತು ಶಿಲ್ಪಗಳು ಅನೇಕ ವಿಗ್ರಹಗಳಲ್ಲಿ ಆಕರ್ಷಕವಾಗಿ ಹಾಗೂ ಸುಂದರವಾಗಿ ಮೂಡಿ ಬಂದಿವೆ.

೧೦. ಅಮೃತ ಕುಂಡ : –

ಕರ್ನಾಟಕದ ಭೂಪಟವನ್ನು ವಿಕ್ಷಿಸಿದಾಗ ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಚಂಡಕಾಪೂರ ಊರಿನಿಂದ ೧ ಕಿ. ಮೀ ದೂರದಲ್ಲಿರುವ ಈ ಅಮೃತ ಕುಂಡ ಎಂಬ ನೀರಿನ ಕುಂಡವಿದೆ. ಈ ಅಮೃತಕುಂಡ ತನ್ನದೆ ಆದ ಕಲೆ, ಸಾಹಿತ್ಯ, ಸಂಸ್ಕೃತಿ, ದರ್ಮ ಮೊದಲಾದವುಗಳನ್ನು ವಿಶಿಷ್ಟ ರೀತಿಯಿಂದ ಘೋಷಿಸಿಕೊಂಡು ಬಂದಂತೆ ತೋರುತ್ತದೆ.

ಈ ಭೂ ಪ್ರದೇಶದ ಮೇಲೆ ಅನೇಕ ಧಾರ್ಮಿಕ ಸಾಂಸ್ಕೃತಿಕ ದಾಳಿಗಳು ನಡೆದರೂ ಕೂಡ ಎಲ್ಲವನ್ನು ತನ್ನಲ್ಲಿ ಗರ್ಭಕರಿಸಿಕೊಂಡು ತನ್ನತನವನ್ನು ಕಾಪಾಡಿಕೊಂಡು ಬಂದಿದೆ. ತ್ರೇತಾಯುಗದಲ್ಲಿ ಅಯೋಧ್ಯ ರಾಜನಾದ 'ದಶರಥ' ಮಹಾರಾಜನ ಮಗನಾದ ರಾಮನು ಕಿಷ್ಕಿಂದೆ ಕಾಡಿಗೆ ಹೋಗುವಾಗ ಈ ಮಾರ್ಗವಾಗಿಯೇ ಹೋಗಿದ್ದನಂತೆ. ವಾಲ್ಮೀಕಿ ಋಷಿಯು ಬರೆದ ರಾಮಾಯಣದಲ್ಲಿ ಕಾಣಬಹುದು. ವಾಲ್ಮೀಕಿ ಋಷಿಯು ಇಲ್ಲಿಯ ಸಮೀಪದಲ್ಲಿ ವಾಸವಾಗಿದ್ದರು ಎಂದು ತಿಳಿದು ಬರುತ್ತದೆ.

ವನವಾಸಕ್ಕೆ ಬಂದ ರಾಮನು ಈ ಸ್ಥಳದಲ್ಲಿ ಬಂದು ತನ್ನ ಕೈಯಿಂದ ಸ್ವಯಂ ಭೂಲಿಂಗವನ್ನು ಸ್ಥಾಪಿಸಿ ಆ ಲಿಂಗವನ್ನು ಪೂಜೆ ಮಾಡುವುದೊಸ್ಕರ ನೀರು ಸಿಗದೆ ಹೋದಾಗ ಆಗ ಶ್ರೀರಾಮ ತನ್ನ ಬಾಣವನ್ನು ಹೊಡೆದು ಲಿಂಗಕ್ಕೆ ತೊಳೆಯಲು ನೀರು ತೆಗೆದಿದ್ದಾರೆ ಎಂಬ ಹಳ್ಳಿಯ ಜನರು ಹೇಳುವ ಕಥೆ ಇದೆ. ದಿನದಿಂದ ದಿನಕ್ಕೆ ಅಮೃತಕುಂಡ ಎಂಬ ಹೆಸರು ಪ್ರಸಿದ್ಧಿ ಪಡೆಯುತ್ತಿದೆ. ಈ ದೇವಸ್ಥಾನದಲ್ಲಿ ನಾವು ಈಗಲೂ ನೋಡಬಹುದು. ದೇವಸ್ಥಾನದ ಗರ್ಭಗೃಹದ ಮಧ್ಯದಲ್ಲಿ ಎರಡು ಲಿಂಗಗಳಿವೆ. ಒಂದು ಶ್ರೀರಾಮ ಸ್ಥಾಪಿಸಿದ್ದು, ಇನ್ನೊಂದು ಹಳೆಯುಗದಲ್ಲಿ ಜನರು ಸ್ಥಾಪಿಸಿದರು ಎಂದು ತಿಳಿದು ಬರುತ್ತದೆ.

ಗರ್ಭಗೃಹದ ಲಿಂಗಗಳಲ್ಲಿ ಒಂದು ಲಿಂಗದ ಕೆಳಗಿನಿಂದ ನೀರು ಬರುತ್ತವೆ. ಅದೇ ರಾಮನು ಹೊಡೆದ ಬಾಣದಿಂದ ಆ ನೀರು ದೇವಸ್ಥಾನದ ಮುಂಭಾಗದಲ್ಲಿ ಒಂದು ದೊಡ್ಡದಾದ ಕುಂಡದಲ್ಲಿ ಹೋಗುತ್ತವೆ. ಇದು ೧೦೦ ಅಡಿ ಉದ್ದ ೩೭ ಅಡಿ ಅಗಲ ಹಾಗೂ ೬೦ ಅಡಿ ಆಳವಾಗಿದೆ. ಕುಂಡದ ತಳದವರೆಗೂ ಕರಿಕಲ್ಲಿನಿಂದ ನಿರ್ಮಿಸಲಾಗಿದೆ. ಇಲ್ಲಿಯ ನೀರು ನಿಂತನೀರಾಗದೇ ಒಂದು ಮೂರ್ತಿಯಲ್ಲಿರುವ ರಂಧ್ರದ ಮೂಲಕ ಸದಾಕಾಲವು ಹರಿಯುತ್ತ ಹೊರ ಮಗ್ಗುಲಲ್ಲಿರುವ ಇನ್ನೊಂದು ಕುಂಡಕ್ಕೆ ಹೋಗುತ್ತವೆ. ಇಲ್ಲಿಂದ ಹೆಚ್ಚಿದ್ದ ನೀರು ಪಕ್ಕದ ಒಂದು ಹಳ್ಳದ ಮೂಲಕ ಸಾಗುತ್ತವೆ. ನೀರಿನ ಪೂರೈಕೆ ಸರಿಯಾಗಿ ಇರುವುದರಿಂದ ಅಕ್ಕ ಪಕ್ಕದಲ್ಲಿ ದಟ್ಟವಾದ, ವಿಶಾಲವಾದ ಗಿಡಮರಗಳು ಬೆಳೆದು ಈ ಪ್ರದೇಶವನ್ನು ಸುಂದರವಾಗಿ ಆಕರ್ಷಣೆಯ ತಾಣವಾಗಿ ಮಲೆನಾಡ ಸಿರಿಯನ್ನು ನೆನಪಿಸುವಂತಿದೆ. ರಾವಣನ ಸಂಹಾರದ ನಂತರ ಪಾಪ ಪರಿಹಾರಕ್ಕಾಗಿ ಶ್ರೀ ರಾಮನು ಸ್ಥಾಪಿಸಿರುವ ಲಿಂಗ ಇದಾಗಿದೆ ಎಂದು ಹೇಳುವರು, ಗರ್ಭಗೃಹವು ಚಿಕ್ಕದಾಗಿದ್ದು ಕರಿಕಲ್ಲಿನ ತಳಪಾಯವನ್ನು ಹೊಂದಿದೆ. ಲಕ್ಷ್ಮಣ ವಾರಕಾರಿ ಮಹಾರಾಜರ ಅಕ್ಕ ಪಕ್ಕದ ಹಳ್ಳಿಗಳು ಅತ್ಮಿಯ ಜನರಿಂದ ಹಣ ಸಂಗ್ರಹಿಸಿ ಈ ಮಂದಿರವನ್ನು ಸ್ಥಾಪಿಸಿದ್ದರು. ಮುಂದೆ ಆನಂದರಾವ ಮಹಾರಾಜ ಎನ್ನುವವರು ಈ ಕಾರ್ಯ ಮುಂದುವರಿಸಿದರು.೧೯೭೩ ರಲ್ಲಿ ಪೂರ್ಣಗೊಳಿಸಲಾಗಿದೆ. ಡೋಂಗರನಾಥ ಮಹಾರಾಜ, ಜಯರಾಮ ಮಹಾರಾಜ, ಕಾಶಿನಾಥ ಮಹಾರಾಜ, ಭೂತನಾಥ ಮಹಾರಾಜ, ಅಚ್ಚಲಪೇಟ ಇವರೆಲ್ಲರೂ ಈ ಮಂದಿರದ ಪ್ರಗತಿಗಾಗಿ ಶ್ರಮಿಸಿದ್ದರು. ಇತ್ತೀಚೆಗೆ ೧೯೮೭ ರಲ್ಲಿ ದೇವಸ್ಥಾನದ ಸಮಿತಿ ರಚನೆಯಾಗಿದ್ದು ಕುಂಡದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದಾರೆ.

ಇಲ್ಲಿಯ ವಾತಾವರಣ ಪ್ರಶಾಂತವಾಗಿ ಹಾಗೂ ಧ್ಯಾನ ಯೋಗ್ಯವಾದ ಕಾರಣ ಹಲವಾರು ಶರಣರು ಹಾಗೂ ಸಾಧು, ಸಂತರು, ಮಹಾತ್ಮರು ಇಲ್ಲಿ ಸಿದ್ಧಿ ಸಾಧನೆ, ತಪಸ್ಸು, ಅನುಷ್ಠಾನಗಳನ್ನು ಮಾಡಿದರು. ಇಲ್ಲಿಗೆ ಮಾಣಿಕಪ್ರಭು ಮಹಾರಾಜರು ಭರತನೂರು ಸ್ವಾಮಿಗಳು, ಗುಹೇಶ್ವರ ಸ್ವಾಮಿಗಳು, ಮಂತಾಳ ಮಲ್ಲಮ್ಮ ತಾಯಿ, ಶ್ರೀಶೈಲ, ಸಾಯಿಬಾಬ, ಗುಲಬರ್ಗಾ

ಜಿಲ್ಲೆಯ ರೇವಣಸಿದ್ದೇಶ್ವರ, ಸರಡಗಿ ಸ್ವಾಮಿಗಳು ಮುಂತಾದವರ ಪಾದ ಸ್ಪರ್ಶದಿಂದ ಈ ನೆಲವು ಪಾವನ ಕ್ಷೇತ್ರವಾಗಿದೆ ಎಂದು ಹೇಳಬಹುದು.

ಅಮೃತಕುಂಡಕ್ಕೆ ದಿನನಿತ್ಯ ಹಲವಾರು ಜನರು ಭಕ್ತಾದಿಗಳು ಬರುತ್ತಾರೆ. ಹಾಗೂ ಶ್ರಾವಣ ಮಾಸದಲ್ಲಿ ಜನಗಳ ಸಂಖ್ಯೆ ಅತಿ ಹೆಚ್ಚಾಗಿರುತ್ತದೆ. ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂದ್ರ ಪ್ರದೇಶದಿಂದಲೂ ಸಹ ಈ ಕುಂಡದಲ್ಲಿ ಪವಿತ್ರ ಸ್ನಾನವನ್ನು ಮಾಡಿ ಪಾಪ ಮುಕ್ತರಾಗಲು ಬರುತ್ತಾರೆ.

ಶ್ರಾವಣ ಮಾಸದಲ್ಲಿ ಅಮವಾಸ್ಯೆ ಹಾಗೂ ಭಾದ್ರಪದ ಶುದ್ಧ ಪ್ರತಿಯೊಂದು ಇಲ್ಲಿ ಜಾತ್ರಾ ಮಹೋತ್ಸವವನ್ನು ಬಹಳ ವಿಜೃಂಭಣೆಯಿಂದ ನಡೆಯುವುದು ಕಂಡು ಬರುತ್ತದೆ.

೧೧. ಸೋಮಲಿಂಗೇಶ್ವರ ದೇವಾಲಯ : –

ಸೋಮಲಿಂಗೇಶ್ವರ ದೇವಾಲಯ ಲಕ್ಷ್ಮಣ ಸ್ಥಾನವಾಗಿರುವುದರಿಂದ ಸೋಮಲಿಂಗೇಶ್ವರ ಎಂಬ ಹೆಸರು ಬಂದಿದೆ ಎಂದು ಹೇಳಲಾಗುತ್ತದೆ. ಶ್ರೀ ಸೋಮಲಿಂಗೇಶ್ವರ ದೇವಾಲಯ ಅಮೃತಕುಂಡದ ಆಗ್ನೇಯ ದಿಕ್ಕಿಗೆ ಸ್ವಲ್ಪ ದೂರದ ಗಿಡಮರಗಳ ನಡುವೆ ಇದೆ. ಇದು ಶ್ರೀರಾಮ ಹಾಗೂ ಹನುಮಾನರು ಆಲಿಂಗನಗೊಂಡ ಸ್ಥಳವಾಗಿದೆ. ಇದನ್ನೇ 'ತೆಕ್ಕೆ ಸೋಮಲಿಂಗ' ಎಂದು ಕರೆಯುವರು. ಇಲ್ಲಿರುವ ಕಲ್ಲಿನ ಬೃಹತ್ ಲಿಂಗವು ೬ ಅಡಿ ಎತ್ತರ ೭ ಅಡಿ ವೃತ್ತಾಕಾರದ ಸುತ್ತಳತೆ ಹಾಗೂ ೧೦ ಅಡಿ ಲಿಂಗದ ತಳಪಾಯ ಹೊಂದಿದೆ. ಯಾವುದೇ ವ್ಯಕ್ತಿಯ ತೆಕ್ಕೆಯಲ್ಲೂ ಇದು ಹಿಡಿಯುವುದಿಲ್ಲ. ಆದ್ದರಿಂದ ನುಣುಪಾದ ಕಲ್ಲಿನಿಂದ ಮಾಡಿರುವ ಇದನ್ನು ಸುಂದರವಾಗಿ ಕೆತ್ತಲಾಗಿದೆ. ಔರಂಗಜೇಬನ ಕಾಲದಲ್ಲಿ ಇಲ್ಲಿಯ ಮಂದಿರವನ್ನು ನಾಶ ಮಾಡಿ ಈ ಲಿಂಗವನ್ನು ಭಗ್ನಗೊಳಿಸಲು ಪ್ರಯತ್ನಿಸಿದ್ದರಂತೆ. ಆ ಸಮಯದಲ್ಲಿ ಕೆಲವರಿಗೆ ಅನಾಹುತವಾಗಿ ಉಳಿದವರು ಭಯಗೊಂಡು ಪಲಾಯನ ಮಾಡಿದರಂತೆ. ಇಂದೂ ಕೂಡ ಲಿಂಗದ ಮೇಲೆ ಒಡೆದ ಗುರುತುಗಳನ್ನು ಕಾಣಬಹುದು. ಸೋಮೇಶ್ವರ ಮಂದಿರದ ವಿಸ್ತೀರ್ಣವು ೫೦x೨೦ ಅಡಿ ಇರುವುದು ಕಂಡು ಬರುವುದು. ಮಂದಿರದ ಬುನಾದಿಯು ಇವತ್ತಿಗೂ ಕಾಣಬಹುದು. ಇದರ ಕಲ್ಲುಗಳು ಅಸಮಂಜಸವಾಗಿವೆ. ಸುತ್ತಲೂ ಅಲ್ಲಲ್ಲಿ ಬಿದ್ದು ಒಡೆದು ಹೋಗಿವೆ. ಆನೆಗಳ ಕುದುರೆಗಳು, ಪುಷ್ಪಗಳು, ಬಳ್ಳಿಗಳು,, ಸರಪಳಿಗಳು, ಶಿಲಾ ಬಾಲಕಿಯರ ಕೆತ್ತನೆಯ ಕಲ್ಲುಗಳ ಭಗ್ನಾವಶೇಷಗಳು ಇಲ್ಲಿವೆ. ಇಲ್ಲಿನ ಸುಂದರವಾದ ಶಿಲ್ಪವನ್ನು ಬೇರೆ ಕಡೆಗೆ ಒಯ್ಯಲಾಗಿದೆ ಎಂದು ಹೇಳಲಾಗುತ್ತಿದೆ

೧೨. ಸೀತೆಯ ಸ್ನಾನ ಘಟ್ಟ : –

ಅಮೃತ ಕುಂಡದ ವಾಯುವ್ಯ ದಿಕ್ಕಿಗೆ ಸ್ವಲ್ಪ ದೂರದಲ್ಲಿಯೇ ಸೀತೆಯ ಸ್ನಾನ ಘಟ್ಟ ಎನ್ನುವ ಸ್ಥಳವೊಂದಿದೆ. ಇದು ಗುಡ್ಡಗಳಿಂದ ಎತ್ತರವಾದ ಹಚ್ಚ ಹಸುರಿನ ವನದ ತಗ್ಗಿನಲ್ಲಿದೆ. ಇಲ್ಲಿಯ ಶುಭ್ರವಾದ ಕುಂಡವು ಸದಾ ತುಂಬಿ ಹರಿಯುತ್ತಿರುತ್ತದೆ. ಈ ನೀರು ಕುಡಿಯಲು ಬಳಸುತ್ತಾರೆ. ಇಲ್ಲಿ ಸೀತೆ ಸ್ನಾನ ಮಾಡಿದಳು. ಆದ್ದರಿಂದಲೇ ಇದಕ್ಕೆ ಆ ಹೆಸರು ಬಂದಿದೆ ಎಂದು ಹೇಳುವುದುಂಟು, ಸಮೀಪದಲ್ಲಿ ಎರಡು ಆಳವಾದ ಗುಹೆಗಳಿದ್ದು ಸೀತೆಯ ವಿಗ್ರಹಗಳ ಭಗ್ನಾವಶೇಷಗಳು ಇಲ್ಲಿ ದೊರಕಿವೆ. ವನಭೋಜನಕ್ಕಾಗಿ ಇದು ಪ್ರಶಸ್ತವಾದ ಹಾಗೂ ಪ್ರಸಿದ್ಧವಾದ ಸ್ಥಳವಾಗಿದೆ.

ಮಹಾಲಕ್ಷ್ಮೀ, ಚಂಡಿಕಾದೇವಿಯ ಮಂದಿರವು ಅಮೃತಕುಂಡದ ಪಕ್ಕದಲ್ಲಿಯೇ ಇದೆ, ಗುಡ್ಡದ ಸ್ವಲ್ಪ ಭಾಗವು ಕಳಚಿ ಬಿದ್ದಿರುವುದರಿಂದ ಈ ಮಂದಿರವು ಕೆಲವು ವರ್ಷ ಮಣ್ಣಿನಲ್ಲಿ ಮುಚ್ಚಿ ಹೋಗಿತ್ತು. ಇತ್ತೀಚೆಗೆ ಅದನ್ನು ಪುನಃ ಹೊರತೆಗೆಯಲಾಗಿದೆ. ನವರಾತ್ರಿಯ ಘಟಸ್ಥಾಪನೆಯಿಂದ ವಿಜಯದಶಮಿಯವರೆಗೆ ಇಲ್ಲಿ ಉತ್ಸವ ನಡೆಯುತ್ತದೆ. ಈ ದೇವಿಯ ಹೆಸರಿನಿಂದಲೇ ಸಮೀಪದ ಗ್ರಾಮಕ್ಕೆ ಚಂಡಿಕಾಪೂರ ಎನ್ನುವ ಹೆಸರು ಬಂದಿದೆ ಎಂದು ಹೇಳುತ್ತಾರೆ.

ಪ್ರಕೃತಿ ಸೌಂದರ್ಯದಿಂದ ಮೆರೆದ ಈ ತಾಣ ಕ್ರಮೇಣ ಮಾಲಿನ್ಯಕ್ಕೆ ತುತ್ತಾಗುತ್ತಿದೆ. ಜಿಗಿದು ಈಜಾಡುವುದು ನಿಲ್ಲಬೇಕು, ದಿನ ನಿತ್ಯವು ಸಾವಿರಾರು ಪ್ರವಾಸಿಗರು ಬರುವ ಈ ಕ್ಷೇತ್ರಕ್ಕೆ ಯಾವುದೇ ಬಸ್ಸುಗಳ ವ್ಯವಸ್ಥೆಯಿಲ್ಲ.

೧೩. ಮೊರ್ಖಂಡಿ ಮಾರ್ಕಂಡೇಶ್ವರ ದೇವಾಲಯ

ವೈವಿಧ್ಯತೆಯಲ್ಲಿ ಏಕತೆಯನ್ನು ಕಾಣುವ ನಮ್ಮ ಭಾರತ ಭೂಮಿಯ ತನುಜಾತೇ ಕನ್ನಡಾಂಬೆಯ ನೆಲ ಮತ್ತು ಆಚಾರ, ವಿಚಾರ, ನಡುವಳಿಕೆಗೆ ಅನೇಕ ಅರಸು ಮನೆತನಗಳು ಸೇವೆ ಸಲ್ಲಿಸಿದ್ದವು. ಇದರಲ್ಲಿ ಅನೇಕ ರಾಜ್ಯರುಗಳು ತಮ್ಮ ರಾಜ್ಯದ ವಿಸ್ತಾರಕ್ಕೆ ಮಾನ್ಯತೆ ನೀಡಿದ್ದಾರೆ. ಕೆಲವರು ನಾಡಿನ ಸಂಸ್ಕೃತಿಯನ್ನು ಚಿತ್ತರಿಸಲು ಪ್ರಯತ್ನಿಸಿದರು. ಅವರು ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಬೆಳೆಸಿದ್ದರು. ಹೈದ್ರಾಬಾದ ಕರ್ನಾಟಕದ ಪ್ರದೇಶದಲ್ಲಿ ಹಳ್ಳಿಗಳನ್ನು ಜನಮನದಲ್ಲಿ ಖ್ಯಾತಿ ಎಂದು ಹೆಸರು ಮಾಡಿರುವ ಬೀದರ ಜಿಲ್ಲೆ, ಕರ್ನಾಟಕ ಉತ್ತರ ತುದಿಯಲ್ಲಿದೆ. ಬೀದರ ಜಿಲ್ಲೆ ಪ್ರಾಚೀನ ಇತಿಹಾಸ ಹೊಂದಿದೆ. ಇಲ್ಲಿ ನಂದರು, ಮೌರ್ಯರು, ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಳಚೂರಿಗಳು ಮುಂತಾದ ರಾಜಮನೆತನಗಳು ಆಳಿದ ರಾಜಧಾನಿಯಾಗಿದ್ದ "ಕಲ್ಯಾಣಪುರ" ಅಂದರೆ ಇಂದಿನ

ಬಸವಕಲ್ಯಾಣದ ಸುತ್ತಮುತ್ತಲ್ಲಿರುವ ತ್ರಿಪುರಾಂತಪುರ (ಇಂದಿನ ತ್ರಿಪ್ರಾಂತ), ಪಾರ್ವತಿಪುರ (ಪ್ರತಾಪೂರ), ಸರಸ್ವತಿಪುರ (ಇಂದಿನ ಸಸ್ತಾಪೂರ) ಮಾರ್ಖಂಡೆಯಪೂರ (ಇಂದಿನ ಮೋರ್ಖಂಡಿ) ಮುಂತಾದ ಸ್ಥಳಗಳು ಪ್ರಾಚೀನ ಕರ್ನಾಟಕದ ಶಿಲ್ಪಕಲಾ ವೈಭವಕ್ಕೆ ಸಾಕ್ಷಿಯಾಗಿವೆ.

ಮೊರ್ಖಂಡಿ ಬಸವಕಲ್ಯಾಣ ತಾಲೂಕಿನ ಒಂದು ಚಿಕ್ಕ ಗ್ರಾಮ ಬಸವಕಲ್ಯಾಣದಿಂದ ೯ ಕಿ. ಮೀ. ದೂರದಲ್ಲಿದೆ. ಇದು ಚಿಕ್ಕೆ ಗ್ರಾಮವಾದರೂ ಐತಿಹಾಸಿಕವಾಗಿ ಮತ್ತು ಧಾರ್ಮಿಕವಾಗಿ ಬಹಳ ಪ್ರಸಿದ್ಧ ಸ್ಥಳವಾಗಿದೆ. ಇದು ಮೊರ್ಖಂಡಿಯನ್ನು ಹೆಸರಿನಿಂದ ಮಾರ್ಕಂಡೇಪುರ ಎಂದು ಕರೆಯಲಾಗಿತ್ತು. ಇದು ಮೊರ್ಖಂಡಿ ಎಂಬ ಹೆಸರಿನಿಂದ ಗುರುತಿಸಲ್ಪಡುತ್ತದೆ.

ಬಾದಾಮಿಯ ಚಾಲುಕ್ಯರ ಅಟ್ಟಿಳೆನಾಡು ಅರಳಿರುವುದನ್ನು ಕ್ರಿ. ಶ. ೬೯೭ ರ ಜಮಲಗಾಂಗ ಶಾಸನವು ವಿವರಿಸುತ್ತದೆ. ಈ ಶಾಸನದಲ್ಲಿ ಭಲ್ಲುಂಕಿ ಮತ್ತು ಮೊರ್ಖಂಡಿ ಹೆಸರನ್ನು ಉಲ್ಲೇಖಿಸಲಾಗಿದೆ.

ಬಾದಾಮಿಯ ಚಾಲುಕ್ಯರಿಗೂ ಮತ್ತು ರಾಷ್ಟ್ರಕೂಟರಿಗೂ ಯುದ್ಧಗಳಾಗಿ ಕೊನೆಗೆ ಚಾಲುಕ್ಯರನ್ನು ಸೋಲಿಸಿ ರಾಷ್ಟ್ರಕೂಟರು ಅಧಿಕಾರಕ್ಕೆ ಬಂದರು, ಆಗ ರಾಷ್ಟ್ರಕೂಟರ ಅರಸ ಮೂರನೇ ಗೊವಿಂದನು ಮೊರ್ಖಂಡಿಗೆ ರಾಜಧಾನಿ ವರ್ಗಾಯಿಸಿದನೆಂದು. ಎಂದು ಇತಿಹಾಸದಿಂದ ತಿಳಿದು ಬರುತ್ತದೆ.

ರಾಷ್ಟ್ರಕೂಟರ ಕಲಾಭಿಮಾನ, ಕಲಾ ಕೌಶಲ್ಯದ ಕುರುಹುಗಳಾಗಿ ವಿಶ್ವದ ಕಲಾ ಚರಿತ್ರೆಯಲ್ಲಿ ಪ್ರಸಿದ್ಧಿಯನ್ನು ಪಡೆದಿದೆ. ಶಿವ ದೇವಸ್ಥಾನ ಅದರ ಎದುರುಗಡೆ ಒಂದು ಕೆರೆಯಿದೆ. ಶಿಲಾ ಬಾಲಿಕೆಯರು ಮೂರ್ತಿಗಳು ಇವರ ಕಾಲದ ವಾಸ್ತು ಶಿಲ್ಪ, ಬಾದಾಮಿ ಚಾಲುಕ್ಯರ ಕಲೆಯಿಂದ ಪ್ರಭಾವಿತರಾಗಿದ್ದರೂ ಸಹ ವಿವಿದ ಬಗೆಯ ರೀತಿಯ ಅಲಂಕಾರಿಕ ಸುಂದರ ತಳವಿನ್ಯಾಸ, ಸುಧಾರಿತ ಗೊಡೆಯ ಮಾದರಿಯ ವಿಭಿನ್ನ ರೀತಿಯ ಸ್ತಂಭಗಳ ಶೈಲಿಯನ್ನು ಕಾಣಬಹುದು.

ಮೊರ್ಖಂಡಿ ಊರಿನಿಂದ ಸ್ವಲ್ಪ ದೂರದಲ್ಲಿರುವ ಮೂರು ಕೆರೆಯಿಂದ ಆವೃತವಾಗಿದೆ. ಅವುಗಳ ನಡುವೆ ಸಿದ್ದೇಶ್ವರ ಮತ್ತು ಮಾರ್ಕಂಡೇಶ್ವರ ದೇವಾಲಯಗಳಿವೆ. ಮಾರ್ಕಂಡೇಶ್ವರ ದೇವಸ್ಥಾನ ತನ್ನದೆ ಆದ ಐತಿಹಾಸಿಕವಾದ ಒಿನ್ನೆಲೆಯನ್ನು ಹೊಂದಿದೆ. ಅದು ಸುಮಾರು ೮೦೦ ವರ್ಷಗಳ ಹಿಂದೆ ದನ ಕಾಯುವ ಹುಡುಗನಿಗೆ ಒಂದು ಲಿಂಗ ದೃಶ್ಯವಾದಾಗ ಅದನ್ನು ಅವನು ಹೆಬ್ಬೆರಳಿನಿಂದ ಒತ್ತಿದಾಗ ಅದರಿಂದ ರಕ್ತ ಬಂದಿತೆಂಬ ಮಾತು ಕೇಳಿ ಬರುತ್ತದೆ.

ಈ ದೇವಸ್ಥಾನದ ಸುತ್ತಲು ಅಂದರೆ ದೇವಸ್ಥಾನದ ಎಡಭಾಗಕ್ಕೆ ಐದು, ಬಲ ಭಾಗಕ್ಕೆ, ಎರಡು, ಹಿಂದುಗಡೆ ಎರಡು ಗವಿಗಳಿವೆ. ದೇವಸ್ಥಾನದ ಎದುರುಗಡೆ ಒಂದು ನೀರಿನ ಗುಂಡಿ



ಚಿತ್ರ : ಶಿವ ದೇವಾಲಯ ನಾರಯಣಪೂರ



ಚಿತ್ರ : ಶಿವ ದೇವಾಲಯ ನಾರಯಣಪೂರ ಒಳನೋಟ



ಚಿತ್ರ : ಶಿವ ದೇವಾಲಯ ನಾರಯಣಪೂರ ಮುಖಮಂಟಪದ
ಎಡಭಾಗ ಮತ್ತು ಬಲಭಾಗಕಿರುವ ಒಂದು ಪಾರ್ಶ್ವ ನೋಟ



ಚಿತ್ರ : ಶಿವ ದೇವಾಲಯ ಹಿಂಭಾಗ



ಚಿತ್ರಗಳು : ಶಿವ ದೇವಾಲಯ ಹತ್ತಿರದ ಮದುವೆಯ ಹಂದರದ ಗರ್ಭಗುಡಿಯ ಒಂದು ನೋಟ





ಚಿತ್ರಗಳು : ಶಿವ ದೇವಾಲಯ ಹತ್ತಿರದ ಮದುವೆಯ ಹಂದರದ ಭುವನೇಶ್ವರಿ ನೋಟ





ಚಿತ್ರ : ಉಮಾಪೂರ ದೇವಾಲಯ



ಚಿತ್ರ : ಕುಂಡಲೇಶ್ವರ ದೇವಾಲಯ ಶಿವಪೂರ



ಚಿತ್ರಗಳು: ಶಿವಪೂರದ ಕುಂಡಲೇಶ್ವರ ದೇವಾಲಯದ ಶಿಲ್ಪಗಳು





ಚಿತ್ರ: ಶಿವಪೂರದ ಕುಂಡಲೇಶ್ವರ ದೇವಾಲಯದ ತೋರಣ ಶಿಲ್ಪ



ಚಿತ್ರ: ಶಿವಪೂರದ ದೇವಾಲಯದ ಕೆರೆ ನೋಟ



ಚಿತ್ರಗಳು : ಜಲಸಿಂಗವಿ ಕಮಲೇಶ್ವರ ದೇವಾಲಯ (ಶಿವ ದೇವಾಲಯ)





ಚಿತ್ರ: ಮಾರ್ಖಂಡಿ ಸಿದ್ಧೇಶ್ವರ ದೇವಾಲಯ



ಚಿತ್ರಗಳು: ಬಸವೇಶ್ವರ ದೇವಾಲಯ ಬಸವಕಲ್ಯಾಣ



ಅಧ್ಯಯ – ೪

ಬೀದರ ಜಿಲ್ಲೆಯ ಶಿಲ್ಪಗಳು

೧. ಶಿವ ದೇವಾಲಯದ ಪದ್ಮಿನಿ ಶಿಲ್ಪ

ಐತಿಹಾಸಿಕ ಪುರಾತನ ಶಿಲ್ಪ ಕಲೆಗಳಲ್ಲಿ ನಾರಾಯಣಪುರದ ಪದ್ಮಿನಿ ಶಿಲ್ಪವು ಒಂದು ಇದು ನಾರಾಯಣನ ದೇವಸ್ಥಾನದಲ್ಲಿ ನಾಲ್ಕು ಅಡಿ ಎತ್ತರದ ತಿಳಿ ಕಪ್ಪು ಕಲ್ಲಿನಲ್ಲಿ ಕೆತ್ತಿರುವ ಪದ್ಮಾವತಿಯ ಶಿಲ್ಪ ತುಂಬ ಸುಂದರವಾಗಿದೆ. ಸೊಂಟದಲ್ಲಿನ ಆಭರಣಗಳು ತೊಡೆಯವರೆಗೂ ಜೋತು ಬಿದ್ದಿದ್ದು ಕೈಕಾಲುಗಳಲ್ಲಿ ಖಡ್ಗ ಚೈನುಗಳು, ಎಡಗೈಯಲ್ಲಿ ಗಿಣಿಯು ಕುಳಿತು ಅವಳ ಮುಖದ ಸಮೀಪ ಹೋಗಿ ಏನೋ ಸಂದೇಶ ಹೇಳುವಂತಿದೆ.

ಈ ಗಿಳಿಯು ಶುಕ ಮಹರ್ಷಿಯನ್ನು ಸೂಚಿಸುತದೇನೋ ಎಂಬ ಭ್ರಮೆಯೊಡನೆ ಗಮನಿಸಿದಾಗ ಕೈ ಬೆರಳಿನಲ್ಲಿ ಸುಂದರವಾದ ಉಂಗುರಗಳು, ಬಲಗೈನಲ್ಲಿ ನಾದ, ಹೊರಡಿಸುವ ಒಂದು ವಾದ್ಯ, ಕಿವಿಯಲ್ಲಿ ಸೂಕ್ಷ್ಮ ಕೆತ್ತನೆಯ ಓಲೆಗಳು, ಕೊರಳಹಾರ, ನೀಳ ಕೇಶರಾಶಿ ಸೇರಿದಂತೆ ಪ್ರತಿಯೊಂದು ಈ ಮೂರ್ತಿಯಲ್ಲಿ ಅತ್ಯಂತ ಸೂಕ್ಷ್ಮವಾಗಿ ಕೆತ್ತನೆ ಮಾಡಿರುವುದು ಕಂಡು ಬರುತ್ತದೆ.

ಈ ಪದ್ಮಾವತಿ ಶಿಲ್ಪಕ್ಕೆ ಅದರದೇ ಇದ್ದು ಕಥೆ ಇದೆ ಅದು ಈ ಕೆಳಗಿನಂತಿದೆ. ಪದ್ಮಾವತಿ ಅಥವಾ ಪದ್ಮಿನಿ ವಿಷ್ಣುವಿನ ೨ನೇ ಹೆಂಡತಿ, ಇವಳ ಮದುವೆ ಸಮಯದಲ್ಲಿ ಶುಕ ಮಹರ್ಷಿ (ಗಿಣಿಯ) ಕೈಯಲ್ಲಿ ಪತ್ರ ಕೊಟ್ಟಳು ಗಿಣಿಯು ಸುದ್ಧಿ ತಲುಪಿಸಿ ಬಂದು ಪದ್ಮಾವತಿಯ ಎಡಗೈಯ ಮೇಲೆ ಕುಳಿತು ಏನೋ ಸಂದೇಶ ಹೇಳುತ್ತದೆ. ಗಿಣಿಯನ್ನು ಅಕ್ಕರೆಯಿಂದ ನೋಡುತ್ತಾಳೆ. ಇವಳ ಕೈಯಲ್ಲಿ ವಿಷ್ಣುವಿಗೆ ಪ್ರೀಯವಾದ ತುಳಸಿ ಮಾಲೆಯಿದೆ. ಪದ್ಮಾವತಿಯ ಮದುವೆ ನಾರಾಯಣಪುರದಲ್ಲಾಯಿತು ಎನ್ನುತ್ತಾರೆ. ಇವರ ಮದುವೆಗೆಂದು ಪಾರ್ವತಿಯು ಪರ್ತಾಪುರಕ್ಕೆ ಬಂದು ಉಳಿಯುತ್ತಾಳೆ. ಏಕೆಂದರೆ ಅದು ಅವಳ ಊರಾಗಿತ್ತು ಎನ್ನುತ್ತಾರೆ. ಮತ್ತು ಪದ್ಮಾವತಿ ಮದುವೆಗೆಂದು ಸರಸ್ವತಿ ಬ್ರಹ್ಮ ಎಲ್ಲರೂ ಪರ್ತಾಪೂರಕ್ಕೆ ಬಂದಿದ್ದರು ಎಂಬ ಕಟ್ಟು ಕತೆ ಇದೆ.

ಮಾರ್ತಾಂಡ ಮಹರ್ಷಿಗಳು ಬಂದು ಮೊರಖಂಡಿಯಲ್ಲಿ ಉಳಿದಿದ್ದರು. ಅಲ್ಲಿ ದೇವಿ ವಾಸ ಮಾಡಿದ್ದಳು ಎಂಬ ವದಂತಿ ಇದೆ.

೨. ಶಿವ ದೇವಾಲಯದ ಮಹಾನಂದ ಶಿಲ್ಪ.

ಮಹಾನಂದ ಶಿಲ್ಪ : –

ನಾರಾಯಣಪುರದ ಐತಿಹಾಸಿಕ ಶಿಲಾ ಶಾಸನಗಳಲ್ಲಿ ಮಹಾನಂದ ಶಿಲ್ಪವು ಕೂಡ ಒಂದಾಗಿದೆ. ಇಲ್ಲಿರುವ ಮಹಾನಂದ ಶಿಲ್ಪದ ಬಗ್ಗೆಯೇ ಒಂದು ಕಥೆ ಹೇಳಲಾಗುತ್ತದೆ. ಮದನಿಕೆ ಎಂಬಾಕೆ ವೇಶ್ಯಾವೃತ್ತಿಯಿಂದ ಹಣ ಸಂಪಾದನೆ ಮಾಡುತ್ತಿದ್ದಳು. ಮಹಾಕಾಳೇಶ್ವರ ದೇವಾಲಯದಲ್ಲಿ ಇವಳಿಗೊಂದು ಹೆಣ್ಣು ಮಗು ದೊರಕಿತ್ತು. ಅದನ್ನು ಮನೆಗೆ ತಂದು ಮಹಾನಂದ ಎಂದು ನಾಮಕರಣ ಮಾಡಿದಳು. ಮಹಾನಂದೆಯು ಮಹಾದೇವನ ಶಾಪದಿಂದ ಭೂಮಿಗೆ ಬಂದಿದ್ದ ಜಗನ್ಮಾತೆ ಪಾರ್ವತಿ ಎಂದು ಹೇಳಲಾಗುತ್ತದೆ. ಮುಂದೆ ಶಿವನನ್ನು ಪೂಜಿಸಿ ಶಾಪ ವಿಮೋಚನೆ ಪಡೆಯುತ್ತಾಳೆಂದು ಪುರಾಣಗಳಲ್ಲಿ ಹೇಳಲಾಗುವ ಕಥೆ ಈ ರೀತಿ ಇದೆ.

ಮಹಾನಂದ ವೇಶ್ಯಯ ಸಾಕುಮಗಳಾದರು ಸತ್ಯವಂತೆಯಾಗಿದ್ದಳು. ಒಂದು ದಿನ ಶಿವನು ಇವಳನ್ನು ಪರೀಕ್ಷೆ ಮಾಡಲು ಅಕ್ಕಸಾಲಿಗನ ವೇಷಧರಿಸಿ ಎರಡು ಖಡ್ಗಗಳನ್ನು ತೆಗೆದುಕೊಂಡು ಮಹಾನಂದಳ ಮನೆಗೆ ಬಂದಾಗ ತೆಗೆದುಕೋಳ್ಳಲು ಕೇಳಿದನ್ನು ಆಗ ಮಹಾನಂದಾ ಖಡ್ಗದ ಬೆಲೆ ಎಷ್ಟು ಎಂದು ಕೇಳಿದಳು ಅದಕ್ಕೆ ಶಿವನು ಇದು ತುಂಬಾ ಬೆಲೆಯುಳ್ಳ ಶ್ರೇಷ್ಠ ಖಡ್ಗ ಎಂದು ಹೇಳಿದ್ದನ್ನು ಆಗ ಮಹಾನಂದಾ ಈ ಎರಡು ಖಡ್ಗಗಳನ್ನು ನನಗೆ ಕೊಟ್ಟರೆ ನಾನು ಮೂರು ದಿವಸ ನಿಮ್ಮ ಧರ್ಮ ಪತ್ನಿಯಾಗಿರುತ್ತೇನೆ ಎಂದು ವಚನವನ್ನು ಕೊಟ್ಟಳು. ಅದರಂತೆ ಶಿವನು ಅವಳನ್ನು ಧರ್ಮ ಪತ್ನಿಯಾಗಿ ಸ್ವೀಕರಿಸಿದ್ದನು. ಒಂದು ದಿನ ತನ್ನ ಆತ್ಮ ಲಿಂಗವನ್ನು ಧರ್ಮಪತ್ನಿಯಾಗಿದ್ದ ಮಹಾನಂದಗೆ ಕೊಟ್ಟು ಇದರಲ್ಲಿ ನನ್ನ ಜೀವವಿದೆ ಈ ಆತ್ಮಲಿಂಗ ನಾಶವಾದರೆ ನಾನು ನಾಶವಾಗುತ್ತೇನೆ. ಆದಕಾರಣ ಈ ಆತ್ಮಲಿಂಗವನ್ನು ಸುರಕ್ಷಿತವಾಗಿಡು ಎಂದು ಹೇಳಿದನು. ಅದಕ್ಕೆ ಮಹಾನಂದ ಆಗಲಿ ಎಂದು ಕೈಯಲ್ಲಿ ಆತ್ಮಲಿಂಗ ತೆಗೆದುಕೊಂಡು ತನ್ನ ನಾಟ್ಯ ಮಂದಿರದ ಗೋಪುರ ಸ್ಥಳದಲ್ಲಿ ಆತ್ಮಲಿಂಗವನ್ನು, ಸುರಕ್ಷಿತವಾಗಿಟ್ಟಳು. ಆಕಸ್ಮಿಕವಾಗಿ ನಾಟ್ಯ ಮಂದಿರಕ್ಕೆ ಬೆಂಕಿ ಹತ್ತಿಕೊಂಡು ಆತ್ಮಲಿಂಗದಜೋತೆಗೆ ಮಹಾನಂದಾಳ ಗೆಳೆಯರಾಗಿ ತಾಳಹಾಕುತ್ತಿದ್ದ ಮಂಗ ಮತ್ತು ಗೆಜ್ಜೆ ಒಡಿದಿದ್ದ ಹುಂಜ ಎರಡು ಭಸ್ಮವಾದವು ಆತ್ಮಲಿಂಗ ಭಸ್ಮವಾದ ಮೇಲೆ ಶಿವನು ಕಾಣದಾದಾಗ ಆಗ ಮಹಾನಂದಾ ಬೆಂಕಿ ಕುಂಡದಲ್ಲಿ ಬಿದ್ದು ಆತ್ಮರ್ಪಣೆ ಮಾಡಿಕೊಳ್ಳುತ್ತಿರುವಾಗ ತಕ್ಷಣ ಶಿವ ಪ್ರತ್ಯಕ್ಷನಾಗಿ ಮಹಾನಂದಾಳನ್ನು ರಕ್ಷಿಸಿ ಅವಳಿಗೆ

ವರ ಬೇಡಲು ಹೇಳಿದನು ಅದಕ್ಕೆ ಮಹಾನಂದಾ ನನ್ನನ್ನು ಕೈಲಾಸಕ್ಕೆ ಕರೆದುಕೊಂಡು ಹೋಗಿ ಎನ್ನುತ್ತಾಳೆ. ಅದರಂತೆ ಶಿವ ಅವಳನ್ನು ಕೈಲಾಸಕ್ಕೆ ಕರೆದುಕೊಂಡು ಹೋದನು ಎಂಬ ಕಥೆ ಇದೆ.

ಈ ಮಹಾನಂದೆಯ ಮೂರು ಅಡಿ ಎತ್ತರದ ಕಲ್ಲು ಶಿಲೆಯ ಸುಂದರವಾದ ಮೂರ್ತಿಯನ್ನು ಕೆತ್ತಲಾಗಿದ್ದು. ಮೊಳಕಾಲು ಊರಿತಾಂಡವ ನೃತ್ಯ ಮಾಡುತ್ತಿರುವ ಸುಂದರ ಕೆತ್ತನೆಯ ಈ ಮೂರ್ತಿ ಕೊರಳಲ್ಲಿನ ರುದ್ರಾಕ್ಷಿಯಿಂದಾಗಿ ಧ್ಯಾನದಲ್ಲಿ ಅತ್ಯಂತ ಭಾವ ಪರವಶವಾಗಿರುವಂತೆ ಕಂಡು ಬರುತ್ತದೆ.

೩. ಮಕರ ತೋರಣಗಳ ಶಿಲ್ಪಗಳು : –

ಶಿವ ದೇವಾಲಯ ಮುಖ ಮಂಟಪದ ಮೆಟ್ಟಿಲು ಇಳಿಯುತ್ತ ಬಂದರೆ ಪ್ರವೇಶ ದ್ವಾರದ ಅಕ್ಕ ಪಕ್ಕದ ಎರಡು ಬದಿಗೆ ಎರಡು ಕಡೆಗೆ ಇರುವ "ಮಕರ ತೋರಣ" ಒಂದೊಂದು ಶಿಲ್ಪಕಲೆ ಅದ್ಭುತ ಆಕರ್ಷಣಿಯವಾಗಿವೆ. ಐದೂವರೆ ೫ $\frac{1}{2}$ ಅಡಿ ಉದ್ದ, ೪ ಅಡಿ ಎತ್ತರ ಮತ್ತು ಕೇವಲ ೧೦ ಇಂಚು ದಪ್ಪ ಕಲ್ಲಿನಲ್ಲಿ ಬದಿಗೆ ಕೆತ್ತಲ್ಪಟ್ಟ ಶಿಲ್ಪಗಳಿವೆ. ದೇವಾಲಯದ ಬಲಭಾಗಕ್ಕೆ ಉತ್ತರ ದಿಕ್ಕಿನಲ್ಲಿ ಇರುವ ಶಿಲ್ಪದಲ್ಲಿ ಮೊಸಳೆಯ ಮೇಲೆ ವಿಷ್ಣು ಕುಳಿತಿರುವನು ಮೊಸಳೆಯ ಬಾಲವು ನವಿಲಿನ ಗರಿ ಬಿಚ್ಚಿದಂತೆ ಅಲಂಕಾರ ಮಾಡಲಾಗಿದೆ. ಇಲ್ಲಿಂದ ಒಂದೊಂದು ಗೆರೆಯ ಪಟ್ಟಿಗಳು ಬೇರೆ ಬೇರೆ ಕಡೆಯಿಂದ ಕೊರೆದು ಒಂದರ ಮೇಲೊಂದು ತಂದು ಆಧಾರವಾಗಿ ಇಟ್ಟಂತೆ ಕೊರೆದಿರುವ ಶಿಲ್ಪ ಕಲೆ ಆಕರ್ಶಿಣೀಯವಾಗಿದೆ. ಮೊಸಳೆಯ ಬಾಯಿಂದ ಅಲಂಕಾರವು ವಕ್ರ ರೇಖೆಗಳಂತೆ ಸುತ್ತಿ ಒಂದು ವರ್ತುಲಾಕಾರದಂತೆ ರಚನೆಗೊಂಡಿದೆ. ಇದು ಕೂಡ ಹಾಗೆ ಇನ್ನೊಂದು ರಂಧ್ರದೊಳಗೆ ಸೇರಿಸಿ ನೋಡಬಹುದು. ಹಾಗೆ ಇದರ ಮುಂದೆ ಮುಂದೆ ನೋಡುತ್ತಿದ್ದಂತೆ ಕೆಳಗಡೆ ಎರಡು ಶಿಲ್ಪಗಳಿವೆ. ಮುಂದೆ ನರಸಿಂಹನ ಶಿಲ್ಪವಿದೆ. ನರಸಿಂಹನು ಪದ್ಮಾಸನದಲ್ಲಿ ಕುಳಿತು ಎಡಗಾಲಿನ ತೊಡೆಯ ಮಧ್ಯ ಹಿರಣ್ಯ ಕಶ್ಯಪನನ್ನು ಒತ್ತಿ ಹಿಡಿಯಲಾಗುತ್ತದೆ. ಅವನ ಹೊಟ್ಟೆಯನ್ನು ಬಗೆದು ಕರಳು ಕೆತ್ತಿದ್ದಾನೆ. ಕೆಳಗಡೆ ಎರಡು ಶಿಲ್ಪಗಳಿವೆ. ಮೇಲ್ಭಾಗದಲ್ಲಿ ಆನೆ, ಕುದುರೆ, ನಂದಿಯ ಮೇಲೆ ದಂಪತಿಗಳು ಕುಳಿತು ಸವಾರಿ ಮಾಡುವ ಶಿಲ್ಪ ಕಲಾಕೃತಿಗಳಿವೆ.

ಇದೆ ಶಿಲ್ಪದ ಇನ್ನೊಂದು ಬದಿಗೆ ದಕ್ಷಿಣದಲ್ಲಿರುವ ಇದೇ ರೀತಿಯ ಕುಸರಿ ಕಲೆಯಲ್ಲಿನ ವಿಭಿನ್ನ ಭಂಗಿಯಲ್ಲಿ ಇರುವ ವಿವಿಧಶಿಲ್ಪ ಕಲಾಕೃತಿಗಳು ನಾವು ನೋಡಬಹುದು. ಇದರಂತೆ ದೇವಾಲಯದ ಎಡಭಾಗದಲ್ಲಿರುವ ಇನ್ನೊಂದು ಅಥವಾ ಮತ್ತೊಂದು ಶಿಲ್ಪದಲ್ಲಿರುವ ಉತ್ತರ, ದಕ್ಷಿಣ ದಿಕ್ಕಿನಲ್ಲಿ ಕಲಾ ಕುಸುರಿ ಕಲೆಗಳು ಕಂಡು ಬರುತ್ತವೆ. ಇವು ಒಂದರಂತೆ ಇನ್ನೊಂದು ಕಾಣಿಸುವುದಿಲ್ಲ. ಒಂದೊಂದು ಭಾಗ ಒಂದೊಂದು ಮಹಾಭಾರತದ ಕಥೆಯನ್ನೇ ಸಾರುತ್ತವೆ.

ಅಥವಾ ಸಾರಿ ಹೇಳುತ್ತವೆ. ಈ ಸುಂದರ ಶಿಲ್ಪ ಕಲೆಗಳು ಕಲ್ಯಾಣ ಚಾಲುಕ್ಯರಲ್ಲಿಯೇ ಅತ್ಯಂತ ಶ್ರೇಷ್ಠ ಮಟ್ಟದ ಕಲಾ ಕುಸುರಿ ಎಂದು ಹೇಳಬಹುದು. ಕಲ್ಯಾಣ ಚಾಲುಕ್ಯರ ಆಳ್ವಿಕೆಯಲ್ಲಿ ಹಂತ ಹಂತವಾಗಿ ಕುಸುರಿ ಕಲೆಯ ಅಭಿವೃದ್ಧಿ ಆಗಿತ್ತು ಎಂದು ಹೇಳಬಹುದು. ೩ನೇ ಸೋಮೇಶ್ವರನು ಅರಸನಲ್ಲದೇ ಕಪಿಯಾಗಿದ್ದನು. ಅವನು ಮನಸೋಲ್ಲಾಸದಲ್ಲಿ ಚಿತ್ರಕಲೆ ಕಲೆಯ ಬಗ್ಗೆ ವರ್ಣನೆ ಮಾಡಲಾಗಿದೆ. ಆದ್ದರಿಂದ ಸ್ವತಹ ಆಸಕ್ತಿಯಿಂದ ಕೆತ್ತಿಸಲ್ಪಟ್ಟ ಈ ಮಕರ ತೋರಣ ಶಿಲ್ಪ ಇವರ ಕಾಲದೆಂದು ತಿಳಿದು ಬರುತ್ತದೆ. ಇವು ಹೋಯ್ಸಳರ ಶೈಲಿಯನ್ನ ನೆನಪಿಸುತ್ತದೆ. ಆದರೆ ಕಲ್ಯಾಣ ಚಾಲುಕ್ಯರ ಕಾಲದ್ದಾಗಿವೆ. ಈ ಶಿಲ್ಪಗಳು ವಿಷ್ಣು (ನಾರಾಯಣ) ದೇವಾಲಯದಿಂದ ತಂದಿಡಲಾಗಿದೆ. ಎಂದು ಇಲ್ಲಿನ ಹಿರಿಯರು ಹೇಳುತ್ತಾರೆ.

೪. ಶಿವ ದೇವಾಲಯದ ವಿವಿಧ ವಿನ್ಯಾಸದ ಸ್ತಂಬಗಳು ಮತ್ತು ದೇವಾಲಯದ ಸುತ್ತಲು ಹೊಂದಿರುವ ಶಿಲಾ ಬಾಲಿಕೆಯರ ಶಿಲ್ಪಗಳು : –

ದೇವಾಲಯದ ಹೊರಗೋಡೆಯು ಗೋಡೆಯೆಂದು ಕಾಣುವುದೇ ಇಲ್ಲ. ದೇವಾಲಯದ ಸುತ್ತ ಮುತ್ತ ಹತ್ತಿರ ಹತ್ತಿರದಲ್ಲಿಯೇ ಸ್ತಂಭಗಳಿವೆ. ಆ ಸ್ತಂಭಗಳೆ ಗೋಡೆಯ ಕಲ್ಪನೆ ಮೂಡಿಸುತ್ತವೆ. ಇಡೀ ಈ ದೇವಾಲಯದ ತಳಪಾಯದಿಂದ ಮೇಲ್ಭಾಗದವರೆಗೂ ಸ್ತಂಭಗಳು ಇರುವಂತೆ ರಚಿಸಲಾಗಿದೆ. ಒಂದರ ಮೇಲೆ ಒಂದು ಜಿದ್ದಂತಿದ್ದು ಇದರ ತಳಪಾಯದ ವಿನ್ಯಾಸ ದಕ್ಷಿಣ ಜಂಗಿ, ಮೇಲ್ಭಾಗದ ಉತ್ತರಿ ಜಂಗಿ, ಮಧ್ಯದಲ್ಲಿ ಜಂಗಿ ಎಂದು ಕರೆಯುಬಹುದು.

ದಕ್ಷಿಣ ಜಂಗಿಯಲ್ಲಿ ಒಂದರ ಮೇಲೆ ಒಂದು ಜಿದ್ದಂತೆ ನಾಲ್ಕು ಮಡಿಕೆಗಳು ಇವೆ. ಇವುಗಳ ಮೇಲೆ ಒಂದೊಂದು ಕಡೆ ಲಕ್ಷ್ಮೀ, ಜೈನ, ದೇವಿಶಿಲ್ಪ ಉಬ್ಬು ಕೆತ್ತನೆ ಕೆತ್ತಲಾಗಿದೆ. ಹಾಗೂ ರತ್ನ ಪಟ್ಟಿಗೆಗಳ ಸಾಲು ಸುಂದರ ಸುರುಳಿಯ ಸಾಲು ಮತ್ತು ತೋರಣ ಸಾಲುಗಳ ಅಲಂಕಾರಗಳಿಗೆ. ಮಧ್ಯ ಜಂಗಿಯ ಮೇಲ್ಭಾಗದಲ್ಲಿ ಕಂಬಗಳ ಮಧ್ಯದಲ್ಲಿ ಒಂದೊಂದು ಶಿಲಾ ಬಾಲಿಕೆಯರು ತನ್ನದೇ ಆದಂತಹ ಕಥೆಯನ್ನು ಸಾರುತ್ತದೆ. ಇಲ್ಲಿ ನಾಲ್ಕು ಅಡಿ ಉದ್ದ ಒಂದು ಅಡಿ ಅಗಲ ಇರುವ ೨೧ ಶಿಲಾ ಬಾಲಿಕೆಯರನ್ನು ದೇವಾಲಯದ ಉತ್ತರ, ದಕ್ಷಿಣ, ಪಶ್ಚಿಮ, ದಿಳ್ಳಿಯಲ್ಲಿ ನಗ್ನವಾಗಿ ಕೊರೆಯಲಾಗಿದೆ.

ಇವುಗಳಲ್ಲಿ ಕೆಲವು ಆಕರ್ಷಕ ಸುಂದರವಾದ ಭಂಗಿಗಳ ವಿವರ ಈ ಕೆಳಗಿನಂತಿವೆ.

ದೇವಾಲಯದ ಬಲಭಾಗದಿಂದ ವೀಕ್ಷಿಸುತ್ತಾ ಹೊರಟರೆ ಉತ್ತರ ದಿಳ್ಳಿನಲ್ಲಿ ಕತ್ತರಿಗಾಲಲ್ಲಿ ನಿಂತಿರುವಳು. ತನ್ನ ಎರಡು ಕೈಗಳಿಂದ ಹೊಕ್ಕಳ ಕೆಳಗಿನಿಂದ ಅವಳು ತೊಟ್ಟು ಕೊಂಡು ಬಟ್ಟೆ ಹರಿಯುತ್ತಿರುವಳು. ಅಲ್ಲಿ ಆಸೆ ಇರುವ ಯುವಕ ಮಂದ ಬುದ್ಧಿಗೆ ಇದರಲ್ಲೇನು ಇದೆ.? ಬಿಚ್ಚಿ ತೋರಿಸುತ್ತಿರುವದು ಎಂದು ಚಕಿತಗೊಳ್ಳಬಹುದು. ಈ ಶಿಲ್ಪದ ಹಿಂದೆ ಮೇಲಿನ ಮರವನ್ನು

ಉಬ್ಬು ಕೆತ್ತನೆಯಾಗಿ ಕೆತ್ತಲಾಗಿದೆ. ಇನ್ನೊಂದು ಶಿಲ್ಪವು ಕತ್ತರಿಗಾಲಲ್ಲಿ ಮದನಿಕೆಯದ್ದು ಇವಳು ಬಲಗೈಯಲ್ಲಿ ಒಂದು ಮಾವಿನ ಹಣ್ಣು ಹಿಡಿದಿದ್ದಾಳೆ. ಇವಳ ಎಡಭಾಗದ ಕೆಳಗಡೆ ಒಂದು ಮಗುವಿನ ಶಿಲ್ಪವಿದೆ. ಮಗುವಿನ ತಲೆಯ ಮೇಲೆ ಮದನಿಕೆಯ ಎಡಗೈ ಇದೆ. ಮಾವಿನ ಹಣ್ಣು ಪಕ್ವವಾದಂತೆ ಮಗು ವಯಸ್ಸು ಅಥವಾ ದೊಡ್ಡವಳಾಗಿದ್ದಾಳೆ ಎಂಬ ಸೂಚನೆ ನೀಡುತ್ತದೆ. ಅಥವಾ ಮಗುವಿನ ಮನಸ್ಸು ಹಣ್ಣಿನಂತೆ ಎಂದು ಹೇಳಬಹುದು.

ನಿಂತಿರುವ ಮದನಿಕೆಯ ಕೆಳಗೆ ಮಂಗ ಇದೆ. ಮದನಿಕೆಯ ಆಭರಣ ಜೋತು ಬಿದ್ದಿರುವುದನ್ನು ಮಂಗ ಎಳೆಯುತ್ತಿದೆ. ಇದು ಮಂಗನಂತೆ ಹುಚ್ಚು ಬುದ್ಧಿ ಇದ್ದರೆ ಬಿಟ್ಟು ಬಿಡಿ ಎಂಬ ಸೂಚನೆ ನೀಡುತ್ತದೆ. ಇದು ಪ್ರೀತಿಯ ಆಸೆ ಹುಟ್ಟಿಸುವದಲ್ಲದೆ. ಹಳೆಬೀಡು ಶಿಲ್ಪದ ನೆನಪು ಮಾಡಿಸುತ್ತದೆ. ಇನ್ನೊಂದು ಶಿಲ್ಪದಲ್ಲಿ ಮಂಗವು ಅವಳ ಸೊಂಟವನ್ನು ಏರಿದೆ ಅವಳ ಸೊಂಟದಲ್ಲಿದ್ದ ಬಟ್ಟೆ ಹರಿದು ಇದರಲ್ಲಿ ಏನಿದೆ.? ಅಂತ ಪುರುಷರಿಗೆ ಪ್ರಶ್ನೆ ಹಾಕಿದಂತಿದೆ. ಮತ್ತೊಂದು ಶಿಲ್ಪದಲ್ಲಿ ನಿಂತಿರುವ ಮದನಿಕೆಯು ಬಲಗಾಲ ಎತ್ತಿ ಹಿಡಿದಿದ್ದಾಳೆ. ಇವಳ ಕಾಲಲ್ಲಿ ಮುಳ್ಳು ನೆಟ್ಟಿರುವುದು ಕೆಳಗಡೆ ಒಂದು ಚಿಕ್ಕ ಮಗುವಿನ ಶಿಲ್ಪವಿದೆ, ಮಗು, ಮದನಿಕೆಗೆ ನೆಟ್ಟಿರುವ ಮುಳ್ಳನ್ನು ತೆಗೆಯುತ್ತಿದೆ. ಇಲ್ಲಿ ಮಗುವಿಗಿಂತ ಮದನಿಕೆಯ ನಾಜುಕತೆಯು ತೋರುತ್ತದೆ.

ಒಂದು ಶಿಲ್ಪ ಪೂರ್ತಿ ನಗ್ನ ರೂಪದಲ್ಲಿ ನಿಂತಿರುವುದು ಅಂದರೆ ವಿಷಕನ್ಯೆ, ಇವಳ ಎರಡೂ ತೊಡೆಯ ಮೇಲೆ ಒಂದು ಸರ್ಪ ಸುತ್ತಿಕೊಂಡಿದೆ. ಆ ಸ್ಥಳದಲ್ಲಿ ಕೆಟ್ಟ ಚಟದ ಆಸೆ ಇದ್ದರೆ, ಅಲ್ಲಿ ವಿಷ ಎಂಬ ಸೂಚನೆ ಸೂಚಿಸುತ್ತದೆ. ಹೆಚ್ಚು ಕಡಿಮೆ ಇಲ್ಲಿನ ಎಲ್ಲಾ ಶಿಲ್ಪಗಳು ನಗ್ನ ರೂಪತಾಳಿದೆ. ಇನ್ನು ಉಳಿದ ಇಲ್ಲಿನ ಕೆಲವು ಶಿಲ್ಪಗಳು, ಮದುವೆಗೆ ಮುಂಚೆ, ಮದುವೆಯ ನಂತರ, ಕನ್ನಡಿ ಹಿಡಿದು ಶೃಂಗಾರ ಮಾಡಿ ಕೊಳ್ಳುತ್ತಿರುವ ಶಿಲ್ಪಗಳು ದ್ವಾರ ಕನ್ಯೆಯರು, ವೀಣಾ ಬಾರಿಸುತ್ತಿರುವ, ಜಡೆ ಹಾಕಿಕೊಳ್ಳುತ್ತಿರುವ, ಮುಂಜಾನೆ ಎದ್ದು ಮೈ ಮಣಿಸಿ, ಮೇಲೆತ್ತಿದ ಕೈಗಳ ದೃಶ್ಯ ಕುಂಭ ಹಿಡಿದು ಪೂಜೆಗೆ ಹೋಗುತ್ತಿರುವುದು ಗುಡಿಯ ಸುತ್ತುವರೆದು ಗೋಡೆಯ ಸುತ್ತ ಕಾಣಬಹುದು ಹೀಗೆ ಹಲವಾರು ಶಿಲ್ಪಕಲೆಗಳು ಹಳೆಬೀಡು ಹಾಗೂ ಬೇಲೂರಿನ ಶಿಲಾ ಬಾಲೆಯರನ್ನು ನೆನಪಿಸಿಕೊಳ್ಳುವ ಈ ಸುಂದರ ಶಿಲ್ಪಗಳು ಮನಮೋಹಕವಾಗಿವೆ. ಆದರೆ ಬೇಲೂರು ಹಳೆಬೀಡುಗಳಲ್ಲಿ ಇಷ್ಟೊಂದು ನಗ್ನತೆಗಳಿಲ್ಲ. ಇಂದಿನ ಜನಾಂಗದ ಕೆಲವರಿಗೆ ತಿಳಿಯದೇ ತಲೆ ತಿರುಗುತ್ತಿರುವವರನ್ನು ಎಚ್ಚರ ಮಾಡಿದ ಶಿಲ್ಪಿಯ ಕೆತ್ತನೆ ಮೆಚ್ಚುವಂತಹದ್ದು! ಹಾಗೂ ಅವನ ಜ್ಞಾನ ಅಪಾರವಾದದ್ದು.

ಆರನೇ ವಿಕ್ರಮಾದಿತ್ಯನ ೨೫ ನೆಯ ರಾಣಿ ಮಲಯಮತಿ ಮಹಾದೇವಿ ಗುರ್ಜರ ದೇಶದವಳೆಂದು ಕ್ರಿ. ಶ. ೧೧೧೬ ರ ಶಾಸನದಿಂದ ತಿಳಿಯುತ್ತದೆ. ಈ ದೇವಾಲಯದ ದ್ವಾರ

ಬಾಗಿಲಲ್ಲಿ ಸಪ್ತ ಮಾತೃಕೆಯರಂತೆ, ಹಾವೇರಿಯ ಸಿದ್ದೇಶ್ವರ ದೇವಾಲಯದಲ್ಲೂ ಅಷ್ಟ ಮಾತೃಕೆಯರು ಇರುವರೆಂದು ಸಂಶೋಧಕರ ಅಭಿಪ್ರಾಯ.

ದೇವಾಲಯದ ಹೊರಾಂಗಣದ ಮೂರು ಬದಿಗಿನ ಗೋಡೆಯ ಮೇಲೆ ನಾಲ್ಕು ಅಡಿ ಅಗಲ, ಆರು ಅಡಿ ಉದ್ದದ ಉತ್ತರ. ದಿಕ್ಕಿಗೆ ಚಿಕ್ಕ ಮಂಟಪ ಇದೆ. ಮಂಟಪದ ದ್ವಾರ ರತ್ನ ಪಟಿಕೆಗಳು, ಕುಸುರಿನಲ್ಲಿ ಕೆತ್ತಲ್ಪಟ್ಟ ದುಂಡಾಕಾರದ ಕಂಬವಿದೆ. ಕೆಳಗಡೆ ದ್ವಾರ ಕನ್ಯೆಯರು ಇದ್ದಾರೆ. ಮಂಟಪದ ಮೇಲ್ಭಾಗದಲ್ಲಿ ಗಣಪ, ಅಕ್ಕ ಪಕ್ಕದಲ್ಲಿ ದೇವಿಯರ ಉಬ್ಬು ಶಿಲ್ಪಗಳು ಕೆತ್ತಲಾಗಿದೆ. ಇದರಂತೆ ದೇವಾಲಯದ ದಕ್ಷಿಣ ಮತ್ತು ಪಶ್ಚಿಮದಲ್ಲಿ ಮಂಟಪಗಳು ಇರುವವು. ಇದರೊಳಗೆ ಯಾವ ದೇವ ಕೋಷ್ಠಗಳು ಕಾಣುವುದಿಲ್ಲ.

ದೇವಾಲಯದ ಮುಂದುಗಡೆ ಇರುವ ವಿಶಾಲವಾದ ಪ್ರಾಂಗಣ, ಐವತ್ತು ಅಡಿ ಅಗಲ, ಮೂವತ್ತು ಅಡಿ ಉದ್ದ, ಇರುವುದು, ಇದರ ಹೊರಭಾಗದ ಕಟ್ಟೆಯ ಪಾರ್ಶ್ವ ಗೋಡೆಯೊಳಗೆ ಒಂದೊಂದು ಚಿಕ್ಕ ಚಿಕ್ಕ ಮೂರ್ತಿಗಳು ಗ್ರಾಮಸ್ಥರಿಂದ ಕೂಡಿಸಲಾಗಿದ್ದು. ಇಲ್ಲಿನ ಕೆಲವು ಶಿಲ್ಪಗಳು ಆನೆ, ಕನ್ಯೆ, ಸ್ತಂಭ, ವಿಷ್ಣು, ವೀರಗಲ್ಲು, ಭಾರ ಎತ್ತುವ ಮನುಷ್ಯ ಭಂಗಿ, ಲತಾ ಸುರುಳಿ, ಗರುಡ, ಹನುಮಾನ, ಪಣವ ಧಾರಿಸುವ ಶಿಲ್ಪ, ಋತು ಚಕ್ರ ಆಗುತ್ತಿರುವ ಕನ್ಯೆ, ಮದನಿಕೆಗೆ ಮದಕಿಯಲ್ಲಿ ಮಗುವಿನ ಜನನ ಆಗುತ್ತಿರುವ ಆಸನದ ಭಂಗಿ ಮುಂತಾದವುಗಳು ಒಮ್ಮೆ ನೋಡಿದರೆ ಮತ್ತೆ ಮತ್ತೆ ನೋಡಬೇಕೆಂಬ ಆಕರ್ಷಣೆಯ ಶಿಲ್ಪಗಳು ಮಂತ್ರ ಮುಗ್ಧಗೊಳಿಸುತ್ತವೆ. ಸಂಪೂರ್ಣ ಈ ಶಿಲಾ ದೇವಾಲಯವು ಕಪ್ಪು ಮತ್ತು ಕೆಂಪು ಮಿಶ್ರಿತ ಗ್ರಾನೈಟ್ ಕಲ್ಲಿನಲ್ಲಿ ನಿರ್ಮಿಸಲಾಗಿದೆ. ಈ ದೇವಾಲಯದಲ್ಲಿ ಶರಣ ಸಿದ್ಧರಾಮೇಶ್ವರ ಅನುಷ್ಠಾನ ಮಾಡಿದಾಗಿ ನಂಬಲಾಗಿದೆ. ಹಾಗೂ ಪುರಾಣ ಕಾವ್ಯಗಳಲ್ಲಿ ಶರಣ ಗುಪ್ತ ಮಂಚಣ್ಣ ತನ್ನ ಪತ್ನಿ ಲಕ್ಷ್ಮೀ ದೇವಿಯೊಂದಿಗೆ ಇಲ್ಲಿ ವಾಸಿಸುತ್ತಿದ್ದನೆಂದು ಹೇಳಲಾಗುತ್ತದೆ.

೫. ಕಾಶಿಪತಿ ರಾಜ ದಂಪತಿ ಶಿಲ್ಪ : -

ಕಾಶಿಯಿಂದ ಬಂದ ಕಾಶಿಪತಿ ರಾಜನು. ಈ ಊರಿನಲ್ಲಿ ನೆಲೆಸಿದನು. ಇವನು ದಿನ ನಿತ್ಯ ಸಾವಿರಾರು ಜನರಿಗೆ ಊಟ ಬಡಿಸುತ್ತಿದ್ದನು. ಒಂದು ದಿನ ಗ್ರಾಮಸ್ಥರೆಲ್ಲರಿಗೆ ಊಟಕ್ಕೆ ಕರೆದು ತರಲು ಸೋಮೇಚಯರನ್ನು ನೇಮಿಸಿದರು. ಎಲ್ಲರು ಊಟಕ್ಕೆ ಕುಳಿತಾಗ ಲಿಂಗವನ್ನು ಪೂಜೆಗೈಯುವ ಹೊತ್ತಿಗೆ ಎಲ್ಲಾ ಲಿಂಗಗಳು ಮಾಯವಾದವು. ನಂತರ ರಾಜ ದಂಪತಿಗಳು ಭಯಭೀತರಾದರು. ತದ ನಂತರ ಊಟಕ್ಕೆ ಭವರಯ್ಯ, ಮುದ್ದಯ್ಯ ಮತ್ತು ಮೃತ್ಯುಂಜಯ ಬರಲಿಲ್ಲವೆಂದು ಹೇಗೊ ತಿಳಿಯಿತು. ಈ ಮೂವರಲ್ಲಿ ಮೃತ್ಯುಂಜಯ ಮುಸ್ಲಿಂ ಇರುವುದರಿಂದ ಊಟಕ್ಕೆ ಹೇಳಲಿಲ್ಲವೆಂದು ಸೋಮೇಚಯವರಿಂದ ತಿಳಿಯಿತು. ಆಗ ಈ ದಂಪತಿಗಳು ಅವರಲ್ಲಿಗೆ

ಹೋಗಿ ನಮ್ಮನ್ನು ಕ್ಷಮಿಸಿ ಎಂದು ಕೈ ಜೋಡಿಸಿದರು. ಆಗ ಏಕೆ, ಹೇಗೆ ಏನಾಯಿತು ಎಂಬ ವಿಷಯ ತಿಳಿದುಕೊಂಡರು. ತದ ನಂತರ ಭವರಯ್ಯ ಮತ್ತು ಮುದ್ದಯ್ಯರಿಬ್ಬರು ಅವರ ರಿದ್ದಿ ಮತ್ತು ಸಿದ್ದಿ ನಾಯಿಗಳನ್ನು ಕರೆದು ಇವರ ಲಿಂಗವನ್ನು ತೆಗೆದುಕೊಂಡರೆ ಕೊಡಬೇಕು ಎಂದು ಸಹೇಳಿದರು. ಆಗ ಆ ನಾಯಿಗಳು ನುಂಗಿದ ಲಿಂಗವನ್ನು ಬಾಯಿಯಿಂದ ಹೊರ ತೆಗೆದು ಅರ್ಪಿಸಿದವು ಈಗಲೂ ರಿದ್ದಿ ಮತ್ತು ಸಿದ್ದಿ ನಾಯಿಗಳ ಸಮಾಧಿ, ಹನುಮಾನ ದೇವಾಲಯದಲ್ಲೊಂದು, ಭವರಯ್ಯನ ದೇವಾಲಯದಲ್ಲೊಂದು ಇರುವವು ಹಾಗೂ ಕಾಶಿಪತಿ ರಾಜ ದಂಪತಿಗಳ ಶಿಲ್ಪ ಮುದ್ದಯ್ಯನ ದೇವಾಲಯದಲ್ಲಿ ನೋಡಬಹುದು.

೬. ಉಮಾಪೂರ ಶಿಲ್ಪಗಳು ಹಾಗೂ ನಯವಾದ ಕೆತ್ತನೆಗಳು : –

ಐತಿಹಾಸಿಕ ಸ್ವಾರಕಗಳು ತಮ್ಮ ಬದುಕಿನ ಕಥೆ ಹೇಳುತ್ತವೆ. ಅದರ ವಾಸ್ತು ಶಿಲ್ಪದ ರಚನೆಯ ಮೂಲಕ ಗತಕಾಲಿನ ನಾಗರಿಕರ ನಡೆ–ನುಡಿ, ಭಕ್ತಿ–ಭಾವ, ಶ್ರಮ ಪ್ರತಿಭೆ ಇತ್ಯಾದಿ ವಿಷಯಗಳನ್ನು ನಮ್ಮ ಮುಂದಿಡುತ್ತವೆ. ಅಂತಹ ಕಲಾತ್ಮಕ ವಾಸ್ತು ಶಿಲ್ಪಗಳು ದೇಶದುದ್ದಕ್ಕೂ ಇರುವುದನ್ನು ಕಾಣಬಹುದು. ಇಂತಹ ಅವಿಸ್ಮರಣಿಯ ಸ್ಮಾರಕಗಳ ತಾಣ **"ಉಮಾಪುರ ಮತ್ತು ಲಾಹೇಶ್ವರ"** ಅವಳಿ ಗ್ರಾಮಗಳು.

ಕರ್ನಾಟಕ ಶಿಖರವೆನಿಸಿರುವ ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನಲ್ಲಿ ಈ ಅಪರೂಪದ ಸ್ಮಾರಕಗಳ ಭಂಡಾರವೇ ಕಾಣಬಹುದು. ಕಲಬುರ್ಗಿಯಿಂದ ೬೫ ಕಿ. ಮೀ. ದೂರ ಪೂರ್ವ–ಪಶ್ಚಿಮಕ್ಕೆ ೯ನೇ ರಾಷ್ಟ್ರೀಯ ಹೆದ್ದಾರಿ ಅಲ್ಲಿಂದ ೪೦ ಕಿ. ಮೀ. ಪಶ್ಚಿಮಕ್ಕೆ ಬಂದರೆ **"ಹಳ್ಳಿ"** ಎಂಬ ಗ್ರಾಮ ಹಾಗೆ ಸ್ವಲ್ಪ ಮುಂದೆ ಉತ್ತರಕ್ಕೆ ಒಂದುವರೆ ಕಿ.ಮೀ. ಒಳಗೆ ಬಂದರೆ ಥಟ್ಟನೆ ಜೋಡು ದೇವಾಲಯಗಳು ಪ್ರವಾಸಿಗರ ಗಮನ ಸೇಳೆಯುತ್ತವೆ.

ಇದೆ 'ಉಮಾ ಮಹೇಶ್ವರ' ಇದರ ಮೊದಲಿನ ಎರಡಕ್ಷರ ಇರುವ ಉಮಾದಿಂದ ಉಮಾಪೂರ ಉಳಿದ ನಾಲ್ಕಕ್ಷರದ 'ಮಹೇಶ್ವರ'ದಿಂದ ಲಾಹೇಶ್ವರ ಎಂಬ ಹೆಸರು ಬಂದಿದೆ ಎಂದು ಹೇಳಲಾಗುತ್ತದೆ.

ಕರ್ನಾಟಕದ ಗಡಿ ಭಾಗಕ್ಕಿರುವ ಈ ಗ್ರಾಮದಲ್ಲಿ ಕನ್ನಡ, ಉರ್ದು, ಮರಾಠಿ ಮೂರು ಆಡು ಭಾಷೆಗಳಿಂದ ಕೂಡಿದೆ. ಗ್ರಾಮದ ಸುತ್ತ ಮುತ್ತುಲು ತಗ್ಗು ದಿಣ್ಣೆ ಇರುವುದರಿಂದ ಮಳೆಗಾಲವೂ ಸೇರಿದಂತೆ ಸದಾ ನೀರಿನಿಂದ ಈ ತಗ್ಗುಗಳು ತುಂಬಿ ಕೊಳಗಳಂತೆ ಗೋಚರಿಸುತ್ತವೆ. ನೀರಿನ ಸೌಕರ್ಯ ಹೆಚ್ಚಾಗಿರುವುದರಿಂದ ಈ ಕೊಳಗಳಲ್ಲಿ ಕಮಲ, ಪುಷ್ಪಗಳು ಅರಳಿರುತ್ತವೆ. ಅಂದಿನ ಆಳರಸರು ತಮ್ಮ ಆಸ್ಥಾನ ಅಲಂಕರಿಸಲು ಈ ಗ್ರಾಮದಿಂದಲೇ ಕಮಲ ಪುಷ್ಪಗಳು ತೆಗೆದುಕೊಂಡು ಹೋಗುತ್ತಿದ್ದರೆಂದು ಹೇಳಲಾಗುತ್ತದೆ.

ಈ ಗ್ರಾಮಗಳಿಗೆ ಸರ್ಪದಂತೆ ಸಾಗುವ ರಸ್ತೆ, ಗ್ರಾಮದ ಮಧ್ಯ ಪ್ರವೇಶಿಸಿದಾಗ ಬಲಭಾಗಕ್ಕೆ ಎರಡು ದೇವಾಲಯಗಳು ಕಾಣುತ್ತವೆ.

ಬಸವಕಲ್ಯಾಣದ ಜನಕ ಎಂದೆನಿಸಿಕೊಂಡ ಚಾಲುಕ್ಯ ವಂಶದ ಒಂದನೆ ಸೋಮೇಶ್ವರ ಪ್ರಪ್ರಥಮವಾಗಿ ೧೦೪೨ ರಲ್ಲಿ ಕಲ್ಯಾಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡ ತದ ನಂತರ ಇವನ ಎರಡನೆಯ ಮಗನಾದ ೬ನೇ ವಿಕ್ರಮಾದಿತ್ಯನು ೧೦೭೬ ರಲ್ಲಿ ಪಟ್ಟಾಭಿಷೇಕನಾದ ಇವನು ಸುಮಾರು ೫೦ ವರ್ಷಗಳ ಕಾಲ ರಾಜ್ಯಭಾರ ಮಾಡಿ, ಕಲ್ಯಾಣದ ಹೆಸರನ್ನು ಉತ್ತುಂಗಕ್ಕೇರಿಸಿದ. ಇವನ ಕಾಲದಲ್ಲೇ ಹೆಚ್ಚಾಗಿ ಅಪರೂಪದ ವಾಸ್ತು ಶಿಲ್ಪಗಳು ಎನಿಸುವ ದೇವಾಲಯಗಳು ನಿರ್ಮಾಣವಾದವು ಎಂದು ಇತಿಹಾಸದಿಂದ ತಿಳಿದುಬರುತ್ತದೆ. ಅವುಗಳಲ್ಲಿ ಈ ಉಮಾಪೂರ ಹಾಗೂ ಲಾಹೇಶ್ವರದ ವಾಸ್ತು ಶಿಲ್ಪ ವೈಭವದ ದೇವಸ್ಥಾನಗಳಲ್ಲೂ ಸೇರಿವೆ.

೭. ಜೈನ ತೀರ್ಥಂಕರ ಶಿಲ್ಪಗಳ : –

ಇಂದಿನ ಬೇಲೂರು ಗತಕಾಲದಲ್ಲಿ ಜೈನರ ನೆಲೆ ಬಿಡಾಗಿತ್ತು. ಬಹಳಷ್ಟು ಜೈನ ತೀರ್ಥಂಕರು ಇಲ್ಲಿ ವಾಸವಾಗಿದ್ದಾರೆ ಎಂಬುದಕ್ಕೆ ಇಂದಿಗೂ ನಮಗೆ ಬಲವಾದ ಆಧಾರಗಳು ಸಿಗುತ್ತವೆ. ಹನುಮಾನ ದೇವಾಲಯದಿಂದ ಸುಮಾರು ೨೫ ಹೆಜ್ಜೆ ಅಂತರದಲ್ಲಿ ಅಂಚೆ ಕಛೇರಿಯ ಮುಂದೆ ಬಿದಿಯ ನಾಲೆಗೆ ಮುಚ್ಚಲಾದ ಜೈನ ಶಿಲೆ ತೀರ್ಥಂಕರ ಜೀನಾಲಯದ ಒಂದರ ಪ್ರವೇಶದ್ವಾರ ತಲೆಪಟ್ಟಿಯಾಗಿತ್ತು. ಅದರ ಮಧ್ಯದಲ್ಲಿ ಜೈನ ತೀರ್ಥಂಕರು ಕುಳಿತ ಉಬ್ಬು ಚಿತ್ರ ಸ್ಪಷ್ಟವಾಗಿ ಗೋಚರಿಸುತ್ತದೆ. ಅಲಿಂದ ಸ್ವಲ್ಪ ಮುಂದೆ ಶ್ರೀ ಲಕ್ಷ್ಮೀ ದೇವಾಲಯ ಸಿಗುತ್ತದೆ. ಆ ದೇವಾಲಯ ಜಗುಲಿಗೆ ಹತ್ತಿರ ನಿಲ್ಲಿಸಲಾಗಿದೆ. ನಿಲ್ಲಿಸಿರುವ ವಿಗ್ರಹ ಜೈನ ತೀರ್ಥಾಂಕರೊಬ್ಬರದು. ಅದು ಭಿನ್ನವಾಗಿರುವುದರಿಂದ ದೇವಾಲಯದ ಹೊರಗಿರಿಸಲಾಗಿದೆ. ಮುಸ್ಲಿಂ ಮತಾಂದರ ದಾಳಿಗೆ ಸಿಲುಕಿ ಈ ವಿಗ್ರಹ ತನ್ನ ಸೌಂದರ್ಯವನ್ನು ಕಳೆದುಕೊಂದು ತನ್ನ ಹಳೆಯ ಪಾವಿತ್ರತೆ ಕಳೆದು ಹೋಗಿ ದುಸ್ತಿತಿಗೆ ಸಿಲುಕಿದೆ, ಅದೇ ದೇವಾಲಯದ ಎಡ–ಬದಿಗೆ ಜಗುಲಿ ಹತ್ತಿರದ ಒಂದರ ಭುವನೇಶ್ವರಿಯ ಭಾಗವಾಗಿದೆ. ಭರಣಿ ಮನೆತನದವರು ವಾಸವಾಗಿರುವ ಮನೆಯಲ್ಲಿ ಬಹು ಪುರಾತನ ನೇಲಮಾಳಿಗೆ ಮನೆಯಿದ್ದು ಅದು ಜೈನ ವೃದ್ಧರು ಸಲ್ಲೇಖನವೃತ ಕೈಗೊಳ್ಳುತ್ತಿದ್ದ ಸ್ಥಳವಿರಬೇಕೆಂದೆನಿಸುತ್ತದೆ. ಕಲ್ಲಯ್ಯ ಶಾಲಿಮಠ ಇವರ ಮನೆಯ ಮುಂಭಾಗದಲ್ಲಿದ್ದ ಜೈನ ತೀರ್ಥಂಕರ ವಿಗ್ರಹವು ಈಗ ಕಾಣೆಯಾಗಿದೆ. ಉದ್ಯೋಗ ಹಾಗೂ ನಗರಿಕರಣದ ಪ್ರವಾಹದಿಂದ ಪಟ್ಟಣ ಸೇರಿದರೆಂದು ೮೦ ವಯಸ್ಸಿನವರು ಹೇಳುತ್ತಾರೆ, ಇಂದಿಗೂ ಆ ಬ್ರಾಹ್ಮಣರ ಮನೆಗಳು ನೋಡಲು ಸಿಗುತ್ತವೆ. ಶ್ರೀ ರಾಜರಾಮ ಕುಲಕರ್ಣಿಯೆಂಬ ಬ್ರಾಹ್ಮಣ ವ್ಯಕ್ತಿ ಇಲ್ಲಿ ವಾಸವಾಗಿದ್ದಾರೆ. ಅವರ ಮನೆಯ ಸುತ್ತಲು ಅಂಗಳದಲ್ಲಿ ಸುಂದರವಾದ ಕೆತ್ತನೆಯಿಂದ ಕೂಡಿದ ಶಿಲೆಗಳು ಚೆಲ್ಲಾ ಪಿಲ್ಲಿಯಾಗಿ ಬಿದ್ದಿವೆ.

ಸೇನ ತರಬೇತಿ–ಆಯುದ ತಯಾರಿಕೆ : –

ಬೀರಾಳ ಬಿಲ್ಲಣಿ ಪದಗಳ ಅರ್ಥ ಶೋಧಿಸಿದಾಗ ಬಿಹಾಳ ಎಂದರೆ ಶೂರನಾದ ಸೈನಿಕ. ಬಿಲ್ಲಣಿ ಎಂದರೆ ಬಿಲ್ಲಾಳುಗಳ ಸೈನ್ಯ ಎಂಬ ಅರ್ಥವಿದೆ. ಬಿರಾಳೂರು ಅಥವಾ ಬಲ್ಲಣೂರು ಇಶಾನ್ಯ ಬೇಲೂರು ಎಂದಾಗಿರಬಹುದು. ಬಿಲ್ಲಣ ನೂರಿನಲ್ಲಿ (ಬೇಲೂರಿನಲ್ಲಿ) ಕಲ್ಯಾಣಿ ಚಾಲುಕ್ಯ ಚಕ್ರಾಧಿಪತಿಯ ಸೈನ್ಯ ಶಿಬಿರ ನಡೆಯುತ್ತಿರಬಹುದು. ಇಲ್ಲವೆ ಇಲ್ಲಿ ಹರಿಯುವ ಶಿವಲಿಂಗ ಹಳ್ಳದ ದಂಡೆಯ ಸುತ್ತ ಅಂದು ಇದ್ದ ದಟ್ಟವಾದ ಬಿದಿರಿನ ಬನದಿಂದ ಕಟ್ಟಿಗೆ ತಂದು ಬಿಲ್ಲು ಆಯುಧಗಳನ್ನು ತಯಾರಿಸಿ ಪೂರೈಸುತ್ತಿರಬಹುದು ಎಂದೆನಿಸುತ್ತದೆ. ಆ ಕಾಲಕ್ಕೆ ಈ ಬೇಲೂರು ಚಾಲುಕ್ಯರ ಬಿಲ್ಲು ತಯಾರಿಕೆ ಕೇಂದ್ರವಾಗಿರಬಹುದು. ಇಂದಿಗೂ ಕೂಡ ಇಲ್ಲಿ ಬಿದಿರಿನ ಬನ ನೋಡಲು ಸಿಗುತ್ತವೆ.

ಇವೆಲ್ಲವುಗಳಿಗಿಂತ ಸಂಗಪ್ಪಾ ಪಾಟೀಲರ ಹೊಲದಲ್ಲಿರುವ ಶಿಲೆ ಗತಕಾಲದ ಇತಿಹಾಸಕ್ಕೆ ಚಕ್ರೇಶ್ವರ ವೀರ ಸೈನಿಕನ ಸ್ಮಾರಕವಾಗಿ ನೆಟ್ಟು ವೀರಗಲ್ಲು ಎಂದು ಹೇಳಬಹುದು. ಇದರ ಇನ್ನುಳಿದ ಭಾಗ ಭೂಮಿಯಲ್ಲಿ ಅಡರಗಿದ್ದು, ಹೊಲದ ಮಾಲಿಕರು ಅದನ್ನು ಅಗಿಯಗೋಡುವುದಿಲ್ಲ. ಆ ಹಾಗೇನಾದರು ಆದರೆ ಮನೆಯಲ್ಲಿ ದುರ್ಘಟನೆಗಳು ಸಂಭವಿಸುತ್ತವೆ ಎಂದು ನಿರಾಕರಿಸುತ್ತಾರೆ. ಬಹುಶಃ ಆ ಕೆಳಭಾಗದಲ್ಲಿ ವೀರ ಶಾಸನ ಬರೆದಿರಬಹುದು ಇದು ಓದಲು ಸಾಧ್ಯವಾದರೆ ಇಲ್ಲಿನ ಇತಿಹಾಸಕ್ಕೆ ಬಲವಾದ ಆಧಾರ ಸಿಕ್ಕಂತಾಗುತ್ತದೆ.

ಇಲ್ಲಿ ಗುರುಬಸವ ವಿರಕ್ತಮಠ ಹಾಗೂ ಕಲ್ಯಾಣ ಕಟ್ಟಿಮನಿ ಹಿರೇತನ ಮಠಗಳ ಹೆಬ್ಬಾಗಿಲಿಗೆ ನಿಲ್ಲಿಸಲಾದ ಮಾಸ್ತಿಗಲ್ಲು, ನಂದಿ, ಸೂರ್ಯ, ಚಂದ್ರ, ಶಿವಲಿಂಗ ಹಾಗೂ ಸ್ತ್ರೀ ಒಬ್ಬಳು ತೋರಿಸಿರುವ ಕೈ ಚಿತ್ರವಿದ್ದು ಇದು ಆ ವೀರನ ಮಡದಿಯು ಸತಿ ಸಹಗಮನವಾದದ್ದುರ ಕುರುಹುವಾಗಿರಬೇಕು.

ದೇವಾಲಯ ಒಂದರ ಗರ್ಭಗೃಹದ ಬಾಗಿಲ ಪಟ್ಟಿಗಳು ಬಹು ಸುಂದರವಾಗಿ ಕೆತ್ತನೆಯಿಂದ ಕೂಡಿದ್ದು ಅವು ಪರಸ್ಪರ ಹೊಂದಿಕೆಯಾಗಿರುವುದಿಲ್ಲ. ಇವುಗಳ ಹೊಂದಿಕೆಯ ಬಾಗಿಲು ಪಟ್ಟುಗಳು ರಾಜೋಳೆ ಅವರ ಹೊಲದಲ್ಲಿ ಇರುವುದನ್ನು ಕಾಣುತ್ತೇವೆ. ಹೀಗಾಗಿ ಶೈವ ಹಾಗೂ ಬ್ರಾಹ್ಮಣ ಎರಡು ದೇವಾಲಯಗಳಿರಬಹುದೆಂದೆನಿಸುತ್ತದೆ.

ಇದು ಹನುಮಾನ ದೇವಾಲಯದ ಅಂಗಳದ ಗರ್ಭಗುಡಿಗೆ ಅಭಿಮುಖವಾಗಿ ಪ್ರತಿಸ್ಥಾಪಿಸಿರುವ ನಂದಿ ವಿಗ್ರಹ ಬೃಹದಾಕಾರ ಹೊಂದಿದೆ. ಇದು ಶೈವ ದೇವಾಲಯದ ಕುರುಹುದಾಗಿದೆ. ದೇವಾಲಯ ಪ್ರವೇಶದ್ವಾರದ ತಲೆಪಟ್ಟಿಯ ಮಧ್ಯೆ ಗಣೇಶನ ಶಿಲ್ಪ ಚಿತ್ರವಿದ್ದು, ಇದು ವೈಷ್ಣವ ದೇವಾಲಯದ ಸಾಕ್ಷಿಯಾಗಿದೆ. ಜೈನ ತೀರ್ಥಂಕರ ಶಿಲ್ಪ ಚಿತ್ರವಿರುವ ಪ್ರವೇಶದ್ವಾರ

ತಲೆಪಟ್ಟಿ ಜಿನಾಲಯದ ಕುರುವಾಗಿದ್ದು ಈ ಮೂರು ದೇವಲಾಯಗಳು ಮತಾಂತರ ಕೈಗೆ ಸಿಕ್ಕು ನಾಶವಾದ ಮೇಲೆ ಅಳಿದುಳಿದ ಅವಶೇಷಗಳನ್ನು ಹನುಮಾನ ಮಂದಿರದ ಮುಂದೆ ಪ್ರತಿಷ್ಠಾಪಿಸಿರಬಹುದು. ಬಹುಶಃ ಮೂರು ಊರುಗಳ ಬದಲು, ಮೂರು ಧಾರ್ಮಿಕ ಕೇರಿಗಳು ಇಲ್ಲಿರುವ ಸಾಧ್ಯತೆಗಳನ್ನು ಬೇಲೂರು ಇತಿಹಾಸ ಹೇಳುತ್ತದೆ.

ಇಂದಿನ ಬೇಲೂರು ಚಾಲುಕ್ಯರ ಅರಸರ ವೀರ ಸೈನಿಕ ಶರಣರು ಮೂರು ಧಾರ್ಮಿಕ ಕಲ್ಯಾಣ ತಾಣ ಎನ್ನುವಲ್ಲಿ ಸಂದೇಹವೇ ಇಲ್ಲ ಆದರೆ ಇಂತಹ ಅಪೂರ್ವ ಇತಿಹಾಸ ಹೊಂದಿರುವ ಬೇಲೂರಿನ ಸ್ಮಾರಕಗಳ ರಕ್ಷಣೆ ಮಾಡುವ ಮೂಲಕ ಮುಂದಿನ ಪಿಳಿಗೆಯರಿಗೆ ಇತಿಹಾಸವನ್ನು ಉಳಿಸಬೇಕಾಗಿದೆ.

೮. ಗರುಡ

ಈ ಮೂರ್ತಿ ಶಿಲ್ಪದಲ್ಲಿ ಗರುಡ ದೇವದೂತರಂತೆ ತನ್ನ ರೆಕ್ಕೆಗಳನ್ನು ಬುಜದಲ್ಲಿರಿಸಿಕೊಂಡು ಮೇಲೆ ಹಾವನ್ನು ಕೊರಳಿನಲ್ಲಿ ಹಾರವನ್ನಾಗಿಸಿ ಧರಿಸಿರುವಂತೆ. ತಲೆಯ ಮೇಲೆ ಕೀರಿಟ ಧರಿಸಿದ್ದಾನೆ. ಮತ್ತು ತಲೆಯ ಹಿಂಭಾಗದಲ್ಲಿ ಪ್ರಭಾವಳಿಯನ್ನು ಹೊಂದಿದ್ದಾರೆ. ಈ ಮೂರ್ತಿಯಲ್ಲಿ ಗರುಡದೇವ ತನ್ನ ಬಲಗಾಲನ್ನು ನೆಲಕ್ಕೆ ಊರಿ, ತನ್ನ ಎರಡು ಕೈಗಳನ್ನು ಜೋಡಿಸಿ ನಮಸ್ಕರಿಸುವ ಭಂಗಿಯಲ್ಲಿ ಕುಳಿತಿದ್ದಾನೆ. ಅವನ ಕಿವಿಯಲ್ಲಿಯು ಸರ್ಪವನ್ನು ಕಿವಿ ಓಲೆಯನ್ನಾಗಿ ಧರಿಸಿದ್ದಾನೆ. ಮತ್ತೇ ತನ್ನ ಎರಡು ತೋಳುಗಳಿಗೆ ತೋಳಬಂಧಿಗಳನ್ನು ಧರಿಸಿರುವುದು ಸಹ ಹಾವಿನ ಆಕಾರದಿಂದ ಕೂಡಿದ್ದು, ಕೈಯಲ್ಲು ಸಹ ಹಾವಿನಿಂದ ಅಥವಾ ಸರ್ಪದ ಬಳೆಯನ್ನಾಗಿ ಸೆರುವುದನ್ನ ಕಾಣಬಹುದಾಗಿದೆ. ಸೊಂಟದಲ್ಲಿ ಪಟ್ಟಿಯ ಡಾಬನ್ನು ಹಾಕಿ ಕೊಂಡಿರುವುದು ಕಾಣಬಹುದು. ಮತ್ತು ಕಾಲಿನಲ್ಲಿ ಕಾಲ್‌ಖಡ್ಗವನ್ನು ಹಾಕಿಕೊಂಡಿದ್ದು ಹಾಗೂ ಕಾಲ್‌ಗೆಜ್ಜೆಗಳನ್ನು ಹಾಕಿ ಕೊಂಡಿದ್ದು ಕಾಣಬಹುದು. ಹಾಗೂ ಗರುಡ ದೇವನ ಎಡಗಾಲಿನ ಹೆಬ್ಬೆರಳು ಕಟ್ಟಾಗಿರುವುದು ಬಿಟ್ಟರೆ ಉಳಿದೆಲ್ಲ ಮೂರ್ತಿ ಶಿಲ್ಪವು ಸುಂದರ, ಆಕರ್ಷಕ ಮುಖಭಾವವನ್ನು ಹೊಂದಿದೆ. ಇದು ನಯವಾದ ರೀತಿಯಲ್ಲಿದ್ದು ನೋಡುಗರ ಮನ ಸೇಳೆಯುವಂತಹಾ ರೀತಿಯಲ್ಲಿದೆ. ಇದು ೧೨ನೇ ಶತಮಾನದ ಮೂರ್ತಿ ಶಿಲ್ಪವಾಗಿದೆ. ಇದರ ಅಳತೆ ೨೬-೧೫ ಇಂಚುಗಳು ಇದ್ದು ಇದರ ನೊಂದಣಿ ಸಂಖ್ಯೆ ೮೭ ಇದೆ. ಪ್ರಸ್ತುತ ಈಗ ಈ ಮೂರ್ತಿ ಶಿಲ್ಪವೂ ಕರ್ನಾಟಕದ ಸರಕಾರಿ ವಸ್ತು ಸಂಗ್ರಹಾಲಯವಾದ ಬಸವಕಲ್ಯಾಣದಲ್ಲಿದೆ. ಈ ಶಿಲ್ಪವೂ ಅಥವಾ ಮೂರ್ತಿ ಶಿಲ್ಪವೂ ೧೨ನೇ ಶತಮಾನದ ಕಲ್ಯಾಣ ಚಾಲುಕ್ಯರ ಕಾಲದ್ದು ಎಂದು ತಿಳಿದು ಬರುತ್ತದೆ. ಈ ಮೂರ್ತಿ ಶಿಲ್ಪಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ. ಹಲವಾರು ಜನ

ಪ್ರವಾಸಿಗರ ಮನಸೆಳೆಯುವಂತಹದಾಗಿದ್ದು, ಸುಂದರವಾಗಿ ಶಿಲ್ಪಗಳನ್ನು ಕೊರೆಯಲಾಗಿದೆ. ಅಥವಾ ಕೆತ್ತಲ್ಪಟ್ಟಿವೆ.

೯.ನಾಗದಂಪತಿ : –

ನಾಗ ನಾಗಿಣಿ ಎಂಬುವುದು ಒಂದು ಹಾವಿನ ನಾಗ ಮಾನವಜನ್ಯ ರೂಪವಾಗಿದ್ದು, ನಾಗರಾಜ ನಾಗಿಣಿಯ ಬುಜದ ಮೇಲೆ ತನ್ನ ಎಡಗೈಯನ್ನು ಇಟ್ಟಿದ್ದಾನೆ. ಈ ಮೂರ್ತಿ ಶಿಲ್ಪದಲ್ಲಿ ನಾಗ ನಾಗಿಣಿಯ ತಲೆಯ ಮೇಲೆ ಹಾವಿನ ಸರ್ಪದ ಏಳು ಹೆಡೆಗಳನ್ನು ಸ್ಪಷ್ಟವಾಗಿ ಕಾಣಬರುತ್ತವೆ. ಮತ್ತು ಅವರ ಮೈ ಮೇಲೆ ಇರುವ ಆಭರಣಗಳನ್ನು ಸೂಕ್ಷ್ಮವಾಗಿ ಕೆತ್ತಲಾಗಿದೆ. ಅವರ ಕಿವಿ ಓಲೆ ಕೊರಳಿನ ಹಾರ, ಕೈಬಳೆ. ಸೊಂಟದಲ್ಲಿನ ಆಭರಣಗಳು ಹಾಕಿರುವುದನ್ನು ಕಾಣಬಹುದು. ನಾಗ ನಾಗಿಣಿಯರ ಹಾವ ಭಾವಗಳು ಆಕರ್ಷಕವಾಗಿದೆ. ನಾಗರಾಜನ ಹಾವಿನ ಅರ್ಧಭಾಗ ಮಾನವ ರೂಪವಾಗಿದೆ. ನಾಗಿಣಿಯ ಮಾನವರೂಪ ಮತ್ತು ಹಾವಿನರೂಪ ದೇಹದ ಅರ್ದದ ಭಾಗವನ್ನಾ ಕ್ರಮಿಸಿದೆ ನಾಗಿಣಿಯ ಎಡಗೈ ಚಿನ್ನವಾಗಿದ್ದು ನೋಡುಗರ ಮನ ಸೆಳೆಯುವಂತಹ ಮೂರ್ತಿ ಶಿಲ್ಪ ಇದಾಗಿದೆ. ಈ ಮೂರ್ತಿ ಶಿಲ್ಪವು ೧೪ನೇ ಶತಮಾನದ್ದಾಗಿದೆ. ಇದರ ಅಳತೆ ೪೫–೨೬ ಇಂಚುಗಳು. ಇದರ ನೊಂದಣಿ ಸಂಖ್ಯೆ ೧೨೭, ಈ ಮೂರ್ತಿ ಶಿಲ್ಪವು ಕಪ್ಪು ಕಲ್ಲು ಅಥವಾ ಕರಿ ಕಲ್ಲಿನಲ್ಲಿ ಕೆತ್ತಲಾಗಿದೆ. ಇದರ ಸಂಗ್ರಹಾಕಾರರು ಕ್ಯುರೇಟರ್‌ರಾಗಿದ್ದು ಇದು ಈ ಮೂರ್ತಿ ಶಿಲ್ಪವು ಪ್ರಸ್ತುತ ಕರ್ನಾಟಕ ಸರಕಾರಿ ವಸ್ತು ಸಂಗ್ರಹಾಲಯವಾದ ಬಸವಕಲ್ಯಾಣದಲ್ಲಿ ಸಂಗ್ರಹಿಸಿದ್ದು ಇದನ್ನು ಪ್ರದರ್ಶನಕ್ಕೆ ಇಡಲಾಗಿದೆ. ಇವನ್ನು ದಿನಾಲು ಹಲವಾರು ಜನ ಪ್ರವಾಸಿಗರು ಬಂದು ನೋಡಿ ಸಂತೋಷ ಪಡುತ್ತಾರೆ. ಈ ಮೂರ್ತಿ ಶಿಲ್ಪಗಳು ಜನ ಮನ ಸೆಳೆಯುವ ಶಿಲ್ಪಗಳಾಗಿವೆ. ಹಾಗೂ ಹಲವಾರು ಕಲಾವಿದರ ಮನ ಸೆಳೆಯುತ್ತಿವೆ.

೧೦. ಸೂರ್ಯದೇವ : –

ಸೂರ್ಯದೇವನ ಶಿಲ್ಪವು ವಸ್ತು, ಯಜ್ಞೋಪವೀತ, ಕರ್ಣಕುಂಡಲ, ಕಿವಿಯಲ್ಲಿ ಓಲೆ ಕಿರೀಟ ಇವುಗಳನ್ನು ಧರಿಸಿದಂತೆಯೂ, ಶಿರದ ಹಿಂದೆ ಪ್ರಭಾವಳಿಯು ಇರುವಂತೆ ಕೆತ್ತನೆ ಮಾಡಿದ್ದು ನೋಡುಗರ ಮನಸೆಳೆಯುತ್ತದೆ.

ಸೂರ್ಯದೇವನ ಮುಖದ ಹಾವ ಭಾವ ಅವನು ಧರಿಸಿರುವ ವಸ್ತ್ರಾಭರಣಗಳು ನಿಂತಿರುವ ಭಂಗಿ ನೋಡುಗರ ಮನಸೆಳೆಯುವಂತೆ ಸುಂದರವಾದ ರೀತಿಯಲ್ಲಿ ಕೆತ್ತಲಾಗಿದೆ. ಸೂರ್ಯ ದೇವನ ಎರಡು ಬದಿಯಲ್ಲಿ ಇಬ್ಬರು ಶಿಲಾ ಬಾಲಿಕೆಯ ಮೂರ್ತಿಗಳನ್ನು ಕೆತ್ತಲಾಗಿದೆ.

ಈ ಮೂರ್ತಿ ಶಿಲ್ಪದಲ್ಲಿ ಸೂರ್ಯ ದೇವನ ಎರಡು ಕೈಗಳು ಕತ್ತರಿಸಿದ್ದು ಕಾಣಬಹುದು. ಇದು ಪ್ರಸ್ತುತ ವಸ್ತು ಸಂಗ್ರಹಾಲಯವಾದ ಬಸವಕಲ್ಯಾಣದಲ್ಲಿದೆ. ಈ ಮೂರ್ತಿ ಶಿಲ್ಪವು ೧೨ನೇ ಶತಮಾನದ ಕಲ್ಯಾಣ ಚಾಲುಕ್ಯರ ಕಾಲದ್ದಾಗಿದೆ. ಇದರ ಅಳತೆ ೨೪-೧೭ ಇಂಚುಗಳು ಇದರ ಸಂಗ್ರಹಾಕಾರರು ಕ್ಯುರೇಟರ.

ಈ ಮೂರ್ತಿ ಶಿಲ್ಪವನ್ನು ಬಸವಕಲ್ಯಾಣದ ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ. ದಿನಾಲು ಹಲವಾರು ಜನ ಪ್ರವಾಸಿಗರು ಇಲ್ಲಿಗೆ ಬಂದು ಈ ಎಲ್ಲಾ ಮೂರ್ತಿ ಶಿಲ್ಪಗಳನ್ನು ನೋಡಿ ಆನಂದ ಪಡುತ್ತಾರೆ. ಈ ಎಲ್ಲಾ ಮೂರ್ತಿ ಶಿಲ್ಪಗಳು ಅನೇಕ ಕಲಾವಿದರ ಮನಸೆಳೆಯುತ್ತಿವೆ.

೧೧. ವಿಷ್ಣು ದೇವನ ಮೂರ್ತಿ ಶಿಲ್ಪ : –

ವಿಷ್ಣು ದೇವನು ಈ ಮೂರ್ತಿ ಶಿಲ್ಪದಲ್ಲಿ ಚತುರಭುಜ ಹೊಂದಿದ್ದಾನೆ. ಒಂದು ಕೈಯಲ್ಲಿ ಗಧೆ ಅಸ್ತ್ರ, ಇನ್ನೊಂದು ಕೈಯಲ್ಲಿ ಚಕ್ರ, ಇನ್ನೊಂದು ಕೈ ಕೆಳಗಾಗಿದ್ದು ಅದರಲ್ಲಯು ಸಹಾ ಅಸ್ತ್ರವನ್ನು ನೋಡಬಹುದು. ತಲೆಯ ಹಿಂದೆ ಪ್ರಭಾವಳಿಯನ್ನು ಹೊಂದಿದೆ. ತಲೆಯ ಮೇಲೆ ಕಿರಿಟ, ಕಿವಿಯಲ್ಲಿ ಕಿವಿ ಓಲೆಗಳು., ಕೊರಳಿನಲ್ಲಿ ಹಾರ, ಸೊಂಟದಲ್ಲಿ ಆಭರಣಗಳ ಪಟ್ಟಿ ಆ ಆಭರಣಗಳು ಮೋಣಕಾಲಿನವರೆಗೆ ಜೋತು ಬಿದ್ದಿವೆ. ಮತ್ತು ಕಾಲಿನಲ್ಲಿ ಕಾಲಗಡ್ಡವನ್ನು ಕಾಣಬಹುದು. ಇವುಗಳೇಲ್ಲವನ್ನು ಹಾಕಿ ಕೊಂಡಿದ್ದ ಈ ವಿಷ್ಣು ದೇವನು ನಿಂತಿರುವ ಭಂಗಿ ವಿಸ್ಮಯವಾದದ್ದು, ಸುಂದರವಾದ ರೀತಿಯಲ್ಲಿ ಈ ಶಿಲ್ಪವನ್ನು ಕಲ್ಲಿನಲ್ಲಿ ಕೆತ್ತಿದ್ದಾರೆ. ಈ ಮೂರ್ತಿಯ ಬಲಗಾಲಿನಲ್ಲಿ ಕೆಳಕ್ಕೆ ಚಿಕ್ಕ ಶಿಲಾ ಬಾಲಿಕೆ ನೋಡಬಹುದು.

ಈ ವಿಷ್ಣುವಿನ ಮೂರ್ತಿ ಶಿಲ್ಪವು ೧೨ನೇ ಶತಮಾನದ ಕಲ್ಯಾಣ ಚಾಲುಕ್ಯರ ಕಾಲದ್ದಾಗಿದೆ. ಇದರ ಅಳತೆ ೩೨-೧೯ ಇಂಚುಗಳು ಇದರ ನೋಂದಣಿ ಸಂಖ್ಯೆ ೧೧೦ ಆಗಿದೆ. ಈ ಮೂರ್ತಿ ಶಿಲ್ಪವು ಪ್ರಸ್ತುತ ಬಸವಕಲ್ಯಾಣದ ಸರಕಾರಿ ವಸ್ತು ಸಗ್ರಹಾಲಯದಲ್ಲಿದೆ. ಹಾಗೂ ಈ ಮೂರ್ತಿ ಶಿಲ್ಪವನ್ನು ಪ್ರದರ್ಶನಕ್ಕೆ ಇಡಲಾಗಿದ್ದು, ಇಲ್ಲಿಗೆ ಅನೇಕ ಪ್ರವಾಸಿಗರು ಬರುತ್ತಾರೆ. ನೋಡಿ ಸಂತೋಷ ಪಡುತ್ತಾರೆ.

ಈ ಮೂರ್ತಿ ಶಿಲ್ಪಗಳು ಜನ ಮನ ಸೇಳೆಯುವಂತಹದ್ದಾಗಿವೆ.

೧೨. ಜೈನ ಶಿಲ್ಪ : –

ಈ ಜೈನ ಮೂರ್ತಿ ಶಿಲ್ಪವು ಪುರುಷರದಾಗಿದ್ದು. ಇದು ಮೇಲಿಂದ ಕೆಳಗಿನವರೆಗೆ ನಗ್ನವಾದ ರೀತಿಯಲ್ಲಿದೆ. ತಲೆಯ ಮೇಲೆ ಛತ್ರಿಯನ್ನು ಕಾಣಬಹುದು ತಲೆಯ ಹಿಂದೆ ಪ್ರಭಾವಳಿ

ಇದೆ. ಇದರ ಬಲಕ್ಕೆ, ಎಡಕ್ಕೆ ಚಿಕ್ಕ ಜೈನ ಅನುಯಾಯಿಗಳ ಮೂರ್ತಿಗಳನ್ನು ಶಿಲ್ಪವನ್ನು ಕಾಣಬಹುದು.

ಶಿಲ್ಪದ ಕಲ್ಲಿನ ಮೇಲೆ ಸುತ್ತಲು ಕುಳಿತುಕೊಂಡ ಚಿಕ್ಕ ಚಿಕ್ಕ ಮೂರ್ತಿ ಶಿಲ್ಪಗಳನ್ನು ಕೆತ್ತಿರುವುದನ್ನು ನೋಡಬಹುದು ಸುಂದರವಾಗಿ ಮೂಡಿ ಬಂದಿದೆ. ಇದು ೧ನೇ ಶತಮಾನದ ಮೂರ್ತಿ ಶಿಲ್ಪವಾಗಿದೆ. ಇದರ ಅಳತೆ ೧೪ – ೧೮ ಇಂಚುಗಳು. ಇದರ ನೋಂದಣಿ ಸಂಖ್ಯೆ ೯೦ ಆಗಿದೆ. ಪ್ರಸ್ತುತ ಈ ಜೈನ ಮೂರ್ತಿ ಶಿಲ್ಪವು ಸರಕಾರಿ ಕರ್ನಾಟಕ ಸರಕಾರ ವಸ್ತು ಸಂಗ್ರಹಾಲಯವಾದ ಬಸವಕಲ್ಯಾಣ ವಸ್ತು ಸಂಗ್ರಹಾಲಯದಲ್ಲಿದೆ.

೧೩. ತ್ರಿಮೂರ್ತಿ : –

ಈ ಮೂರ್ತಿ ಶಿಲ್ಪವು ಬ್ರಹ್ಮ, ವಿಷ್ಣು, ಮಹೇಶ್ವರನ ಮುಖಗಳಿಂದ ಕೂಡಿದೆ. ಅಂದರೆ ತುಂಡು ಅರೆ ವೃತದ ಮೂರು ಮುಖಗಳನ್ನು ಒಂದೇ ಕಲ್ಲಿನಲ್ಲಿ ಕೆತ್ತಲಾಗಿದೆ. ಬ್ರಹ್ಮ, ವಿಷ್ಣು, ಮಹೇಶ್ವರನ ಮುಖಗಳು ಸುಂದರವಾದ, ನಯವಾದ ರೀತಿಯಲ್ಲಿ ಕೆತ್ತಿದ್ದಾರೆ. ತಲೆಯ ಮೇಲೆ ಟಟದ ಮೇಲೆ ಅಲಂಕರಿಸಲಾಗಿದ್ದು. ಕಿವಿಗಳಲ್ಲಿ ಓಲೆಗಳನ್ನು ಹಾಗೂ ಮೂಖಗಳ ಹಾವ ಭಾವಗಳನ್ನು ಇಲ್ಲಿ ಎತ್ತಿ ತೋರಿಸುವ ರೀತಿಯಲ್ಲಿ ಆಕರ್ಷಕವಾಗಿ ಕೆತ್ತಿದ್ದಾರೆ.

ಈ ಮುಖಗಳ ಶಿಲ್ಪದ ಮೇಲೆ ತುದಿಯ ಸ್ವಲ್ಪ ಕಟ್ಟಾಗಿದ್ದು ಅದನ್ನು ಹಾಗೆ ಜೋಡಿಸಿ ಇಡಲಾಗಿದೆ. ಈ ಮೂರ್ತಿ ಶಿಲ್ಪವು ೧೩ – ೧೪ನೇ ಶತಮಾನದ್ದು,ಇದರ ಅಳತೆ ೩೭–೨೩ ಇಂಚುಗಳು ಹೊಂದಿದೆ. ಇದರ ನೋಂದಣಿ ಸಂಖ್ಯೆ ೨೪ ಆಗಿದೆ. ಈ ಮೂರ್ತಿ ಶಿಲ್ಪಗಳನ್ನು ಕ್ಯುರೇಟರ ಸಂಗ್ರಹಿಸಿದ್ದಾರೆ. ಈ ಮೂರ್ತಿ ಶಿಲ್ಪವು ಬಸವಕಲ್ಯಾಣದ ವಸ್ತು ಸಂಗ್ರಹಾಲಯದಲ್ಲಿದೆ.

ಈ ವಸ್ತು ಸಂಗ್ರಹಾಲಯಕ್ಕೆ ಅನೇಕ ಜನರು ಪ್ರವಾಸಕ್ಕೆ ಬರುತ್ತಾರೆ. ಈ ಮೂರ್ತಿ ಶಿಲ್ಪಗಳನ್ನು ನೋಡಿ ಸಂತೋಷ ಪಡುತ್ತಾರೆ.

೧೪. ಶಿಲಾ ಬಾಲಿಕೆಯರು : –

ಈ ಮೂರ್ತಿ ಶಿಲ್ಪದಲ್ಲಿ ಎರಡು ಅಥವಾ ಇಬ್ಬರ ಶಿಲಾ ಬಾಲಿಕೆಯರನ್ನು ಒಂದು ಕಂಬದ ಕಪ್ಪು ಶಿಲೆಯ ಮೇಲೆ ಕೆತ್ತಿದ್ದಾರೆ. ಮೊದಲನೇ ಶಿಲಾ ಬಾಲಿಕೆಯು ತನ್ನ ಬಲಗೈಯನ್ನು ಮೇಲಕ್ಕೆ ಎತ್ತಿ ಹಿಡಿದಿದ್ದಾಳೆ ಮತ್ತು ಇನ್ನೊಂದು ಕೈ ಹಿಂದಕ್ಕೆ ಹಿಡಿದುಕೊಂಡಿರುವ ಭಂಗಿಯಲ್ಲಿ ನಿಂತಿದ್ದಾಳೆ. ಕೇಶಾಲಂಕಾರ, ಕಿವಿ, ಓಲೆ, ಕೊರಳಿನಲ್ಲಿ ಹಾಕಿದ ಆಭರಣಗಳು, ಸೋಂಟದ

ಡಾಂಬಗಳು, ಕಾಲಿನಲ್ಲಿ ಕಾಲ್‌ಗೆಜ್ಜೆಗಳು, ಏನಿದು ಕಾಣಬಹುದು. ಈ ಶಿಲಾ ಬಾಲಿಕೆಯ ಎಡಗಾಲಿನ ಕೆಳಭಾಗ ಕಟ್ಟಾಗಿದೆ.

ಎರಡನೆಯ ಶಿಲಾ ಬಾಲಿಕೆ ತನ್ನ ಬಲ ಕೈಯನ್ನು ಮೇಲಕ್ಕೆ ಎತ್ತಿದ್ದು. ಇನ್ನೊಂದು ಕೈಯನ್ನು ಎದೆಯ ಮುಂದೆ ಹಿಡಿದು ಕತ್ತರಿ ಕಾಲು ಹಾಕಿಕೊಂಡ ಭಂಗಿಯಲ್ಲಿ ನಿಂತಿರುವುದನ್ನು ಕಾಣಬಹುದು. ಈ ಮೂರ್ತಿಯಲ್ಲಿ ಸಹಾ ಕೇಶಾಲಂಕಾರ, ಕೈಬಳೆ, ಕೋರಳಿನ ಹಾರ, ಸೊಂಟದ ಆಭರಣಗಳು, ಕಾಲಿನ ಗೆಜ್ಜೆಗಳು ಸೊಗಸಾದ ರೀತಿಯಲ್ಲಿ ಕಾಣಬರುತ್ತವೆ. ಈ ಶಿಲಾ ಬಾಲಿಕೆಯರ ಮೂರ್ತಿ ಶಿಲ್ಪವು ೧೨ನೇ ಶತಮಾನದ ಕಲ್ಯಾಣ ಚಾಲುಕ್ಯರ ಅವಧಿಯದ್ದಾಗಿದೆ. ಇದರ ನೋಂದಣಿ ಸಂಖ್ಯೆ ೧೨೦ ಆಗಿದೆ.

ಪ್ರಸ್ತುತ ಈ ಮೂರ್ತಿ ಶಿಲ್ಪವು ಕರ್ನಾಟಕ ವಸ್ತು ಸಂಗ್ರಹಾಲಯವಾದ ಬಸವಕಲ್ಯಾಣ ವಸ್ತು ಸಂಗ್ರಹಾಲಯದಲ್ಲಿದೆ. ಅದನ್ನು ಪ್ರದರ್ಶನಕ್ಕೆ ಇಡಲಾಗಿದೆ. ಇಲ್ಲಿಗೆ ಅನೇಕ ಪ್ರವಾಸಿಗರು ವಿಕ್ಷಣೆಗಾಗಿ ದಿನಾಲು ಬೇರೆ ಬೇರೆ ಊರಿನಿಂದ ಪ್ರವಾಸಕ್ಕೆ ಬರುತ್ತಾರೆ. ಈ ಮೂರ್ತಿ ಶಿಲ್ಪಗಳನ್ನು ನೋಡಿ ಜನರು ಆನಂದ ಪಡುತ್ತಾರೆ. ಮೂರ್ತಿ ಶಿಲ್ಪಗಳು ನೋಡಗರಲ್ಲಿ ಸುಂದರವಾಗಿ ಆಕರ್ಷಕವಾಗಿವೆ.

೧೫. ನರಸಿಂಹ : –

ಈ ನರಸಿಂಹ ಮೂರ್ತಿ ಶಿಲ್ಪದಲ್ಲಿ ನರಸಿಂಹನು ಉಗ್ರ ಅವತಾರ ಹೊಂದಿದ್ದು ಅವನ ೪ ಕೈಗಳನ್ನು ಹೊಂದಿದ್ದು ಎರಡು ಕೈ ಮೇಲಕ್ಕೆ ಇದ್ದು, ಅವುಗಳಲ್ಲಿ ಶಂಖವನ್ನು ಹಿಡಿದು ಕೊಂಡಿದ್ದಾನೆ. ನರಸಿಂಹದೇವನು ತನ್ನ ಕಾಲ ಒಂದರ ಮೇಲೆ ಒಂದು ಇಟ್ಟು ಹಿರಣ್ಯ ಕಶಿಪನನ್ನು ತೊಡೆಯ ಮೇಲೆ ಮಲಗಿಸಿ ತನ್ನ ಎರಡು ಕೈಗಳಿಂದ ಹಿರಣ್ಯ ಕಶಿಪುಲಿನ ಹೊಟ್ಟೆ ಹರಿಯುವ ದೃಶ್ಯವನ್ನು ನೋಡಬಹುದು ಇಲ್ಲಿ ನರಸಿಂಹನ ಉಗ್ರ ಅವತಾರ ಕಾಣಬಹುದು.

ನರಸಿಂಹದೇವನು ತಲೆಯ ಮೇಲೆ ಕಿರೀಟ ಹೊಂದಿದ್ದಾನೆ. ಎರಡು ಕೈಯಲ್ಲಿ ಶಂಖಗಳಿವೆ. ಮುಖದಲ್ಲಿ ರುದ್ರ ಅವತಾರ ಹೊಂದಿದ್ದು, ಕೊರಳಿನಲ್ಲಿ ಆಭರಣಗಳು ಕೈಯಲ್ಲಿ ಖಡ್ಗಗಳು, ತೋಳ ಬಂದಿಗಳು, ಕಾಲಲ್ಲಿ ಖಡ್ಗಗಳು ಹಾಕಿಕೊಂಡಿದ್ದಾಗಿದ್ದು, ಒಟ್ಟಾರೆಯಾಗಿ ಇಲ್ಲಿ ರುದ್ರ ನರಸಿಂಹನ ಅವತಾರವಾದ ಹಿರಣ್ಯ ಕಶಿಪ್ಪನನ್ನು ತನ್ನ ತೊಡೆಯ ಮೇಲೆ ಹಾಕಿಕೊಂಡು ಅವನ ಹೊಟ್ಟೆಯನ್ನು ಹರಿಯುವ ದೃಶ್ಯವು ಆಕರ್ಷಕ, ಸುಂದರವಾದ ಹಾಗೂ ವರ್ಣನಿಯವಾದ ರೂಪದಲ್ಲಿದೆ.

ಇದು ಚಾಲುಕ್ಯರ ಅವಧಿಯದಾಗಿದೆ. ಇದರ ಅಳತೆ ೩೨ – ೨೧ ಇಂಚುಗಳು, ಇದರನೋಂದಣಿ ಸಂಖ್ಯೆ ೬೪. ಪ್ರಸ್ತುತ ಈ ಮೂರ್ತಿ ಶಿಲ್ಪವು ಕರ್ನಾಟಕ ಸರಕಾರಿ ವಸ್ತು ಸಂಗ್ರಹಾಲಯವಾದ ಬಸವಕಲ್ಯಾಣದ ವಸ್ತು ಸಂಗ್ರಹಾಲಯದಲ್ಲಿದೆ. ಪ್ರದರ್ಶನಕ್ಕೆ ಇಡಲಾಗಿದೆ. ಇಲ್ಲಿ ಈ ವಸ್ತು ಸಂಗ್ರಹಾಲಯದ ವಿಕ್ಷಣೆಗಾಗಿ ಅನೇಕ ಜನರು ಬೇರೆ ಬೇರೆ ಊರುಗಳಿಂದ ಬಂದು ನೋಡಿ ಆನಂದ ಪಡುತ್ತಾರೆ.

೧೬. ಜೈನ ಶಿಲ್ಪ : –

ಈ ಜೈನ ಮೂರ್ತಿ ಶಿಲ್ಪವು ಕುತ್ತಿಗೆ ಮತ್ತು ಭುಜದ ನಡುವೆ ಎರಡು ತುಂಡುಗಳಾಗಿ ವಿಭಜಿಸಲಾಗಿದೆ. ಕೆಳಗೆ ಎಡ ಮತ್ತು ಬಲಕ್ಕೆ ಚಿಕ್ಕ ಚಿಕ್ಕ ಮೂರ್ತಿಗಳಿವೆ. ಮೂರ್ತಿ ಶಿಲ್ಪದ ಸುತ್ತಲು ಬದಿಯಲ್ಲಿ ಕುಳಿತುಕೊಂಡಂತಿರುವ ಚಿಕ್ಕ ಚಿಕ್ಕ ಜೈನ ಮೂರ್ತಿಗಳಿವೆ. ಮೂರ್ತಿಯ ಮೇಲ್ ಭಾಗ, ಕೆಳಭಾಗ ತುಂಡಾಗಿವೆ.

ಈ ಮೂರ್ತಿ ಶಿಲ್ಪವು ೧೧ – ೧೨ನೇ ಶತಮಾನದ್ದಾಗಿದ್ದು ಕಲ್ಯಾಣ ಚಾಲುಕ್ಯರ ಅವಧಿಯದ್ದು. ಇದರ ಅಳತೆ ೪೬ – ೩೨ ಇಂಚುಗಳು ಇದರ ನೋಂದಣಿ ಸಂಖ್ಯೆ ೨೨ ಆಗಿದೆ. ಪ್ರಸ್ತುತ ಈ ಜೈನ ಮೂರ್ತಿ ಶಿಲ್ಪವು ಕರ್ನಾಟಕ ಸರಕಾರ ವಸ್ತು ಸಂಗ್ರಹಾಲಯವಾದ ಬಸವಕಲ್ಯಾಣದ ವಸ್ತು ಸಂಗ್ರಹಾಲಯದಲ್ಲಿಡಲಾಗಿದೆ. ಇದರ ಸಂಗ್ರಾಹಕಾರರು ಕ್ಯುರೇಟರ್.

ಈ ಮೂರ್ತಿ ಶಿಲ್ಪವು ಪ್ರದರ್ಶನಕ್ಕೆ ಇಡಲಾಗಿದೆ. ಇಲ್ಲಿಗೆ ಹಲವಾರು ಜನ ಪ್ರವಾಸಿಗರು ಪ್ರವಾಸಕ್ಕೆ ಬಂದು ಇಲ್ಲಿರುವ ಮೂರ್ತಿ ಶಿಲ್ಪಗಳನ್ನು ನೋಡಿ ಸಂತೋಷ ಪಡುತ್ತಾರೆ.

೧೭. ವಿಷ್ಣು : –

ಈ ವಿಷ್ಣು ದೇವರ ಮೂರ್ತಿ ಶಿಲ್ಪವು ಅತ್ಯಂತ ಸೂಕ್ಷ್ಮ ಹಾಗೂ ಆಕರ್ಷಕ, ಸುಂದರವಾದ ರೀತಿಯಲ್ಲಿ ಕೆತ್ತಿದ್ದಾರೆ. ವಿಷ್ಣುವಿನ ತಲೆಯ ಮೇಲೆ ಕಿರೀಟವು ಸುಂದರವಾಗಿ ಕಾಣಿಸುತ್ತಿದೆ. ಕೈಯಲ್ಲಿ ಚಕ್ರ, ಕಿವಿಯಲ್ಲಿ ಓಲೆಗಳು, ಕೊರಳಲ್ಲಿ ಸರಮಾಲೆ ಆಭರಣಗಳು, ಕಾಲಿನಲ್ಲಿ ಕಾಲ್‌ಖಡ್ಗ, ಕಾಲ್‌ಗೇಜ್ಜೆಗಳು ಸುಂದರವಾದ, ನಯವಾದ ರೀತಿಯಲ್ಲಿ ಕೇತ್ತಲಾಗಿದೆ.

ವಿಷ್ಣುವಿನ ಎಡದಲ್ಲಿ ಎರಡು ಮತ್ತು ಬಲದಲ್ಲಿ ಎರಡು ಚಿಕ್ಕ ಚಿಕ್ಕ ಮೂರ್ತಿ ಶಿಲ್ಪಗಳನ್ನು ಕೆತ್ತಿದ್ದಾರೆ. ಅವುಗಳ ಮೈ ಮೇಲೆಯೂ ಸಹಾ ಆಭರಣಗಳಿಂದ ಅಲಂಕಾರಿಸಿದ್ದಾರೆ. ಈ ಮೂರ್ತಿ

ಶಿಲ್ಪವು ಕಪ್ಪು ಶಿಲೆಯಲ್ಲಿ ಕೆತ್ತಲಾಗಿದ್ದು ಮೂರ್ತಿಯ ಸುತ್ತಲು ಸುಂದರವಾಗಿ ಅಲಂಕರಿಸಿದಂತೆ ಕೆತ್ತಲ್ಪಟ್ಟಿವೆ.

ಈ ಮೂರ್ತಿ ಶಿಲ್ಪವೂ ೧೨ನೇ ಶತಮಾನದಾಗಿದ್ದು ಕಲ್ಯಾಣ ಚಾಲುಕ್ಯರ ಅವಧಿಯದ್ದು. ಇದರ ಅಳತೆ ೪೯ – ೩೦ ಇಂಚುಗಳು ಇದರ ನೋಂದಣಿ ಸಂಖ್ಯೆ ೧೧೯ ಆಗಿದೆ.

ಪ್ರಸ್ತುತ ಇಗ ಈ ಮೂರ್ತಿ ಶಿಲ್ಪವನ್ನು ಸರಕಾರಿ ವಸ್ತು ಸಂಗ್ರಹಾಲಯವಾದ ಬಸವಕಲ್ಯಾಣದ ವಸ್ತು ಸಂಗ್ರಹಾಲಯದಲ್ಲಿ ಇಡಲಾಗಿದೆ. ಈ ವಿಷ್ಣು ಮೂರ್ತಿ ಶಿಲ್ಪವನ್ನು ಪ್ರದರ್ಶನಕ್ಕೆ ಇಡಲಾಗಿದ್ದು ಇಲ್ಲಿಗೆ ದಿನಾಲು ಹಲವಾರು ಜನರು ಪ್ರವಾಸಿಗರು ಬಂದು ವಿಕ್ಷಿಸಿ ಸಂತೋಷ ಪಡುತ್ತಾರೆ.

ಒಟ್ಟಾರೆಯಾಗಿ ಈ ವಿಷ್ಣುವಿನ ಮೂರ್ತಿ ಶಿಲ್ಪವು ಅತ್ಯಂತ ಸೂಕ್ಷ್ಮ ರೀತಿಯಲ್ಲಿ ನಯವಾಗಿ ಆಕರ್ಷಕವಾದ, ಸುಂದರವಾದ ರೀತಿಯಲ್ಲಿ ಕೆತ್ತಿದ್ದಾರೆ. ನೋಡುಗರ ಮನ ಸೆಳೆಯುವಂತಹದ್ದಾಗಿದೆ. ಈ ವಿಷ್ಣು ಮೂರ್ತಿ ಶಿಲ್ಪ.

೧೮. ಶಿಲಾ ಬಾಲಿಕೆ ; –

ಈ ಬಾಲಿಕೆಯ ಮೂರ್ತಿ ಶಿಲ್ಪವು ಅಲಂಕಾರಿಕವಾದ ಹೂ, ಬಳ್ಳಿ, ಎಲೆಗಳಿಂದ ಅಲಂಕಾರಿಕ ವಿನ್ಯಾಸದ ಕಂಬದಲ್ಲಿ ಶಿಲಾ ಬಾಲಿಕೆಯ ಎಡ ಮತ್ತು ಬಲದಲ್ಲಿ ಅಲಂಕರಿಸಲಾಗಿದೆ. ಈ ಶಿಲಾ ಬಾಲಿಕೆಯ ಮೂರ್ತಿ ಶಿಲ್ಪ ಮತ್ತು ಆ ಕಂಬಗಳಲ್ಲಿ ಅಲಂಕರಿಸಲಾಗಿದ್ದು ಅತ್ಯಂತ ಸುಂದರ ರೀತಿಯಲ್ಲಿದೆ. ನೋಡುಗರ ಮನಸೆಳೆಯುವಂತಹದ್ದು. ಅತ್ಯಂತ ಸೂಕ್ಷ್ಮವಾದ ರೀತಿಯಲ್ಲಿ ಕೆತ್ತಲ್ಪಟ್ಟಿವೆ.

ಈ ಮೂರ್ತಿ ಶಿಲ್ಪದ ಅಳತೆ ೩೩ – ೩೩ ಇಂಚುಗಳು ಮತ್ತು ಈ ಮೂರ್ತಿ ಶಿಲ್ಪವು ೧೩ – ೧೪ನೇ ಶತಮಾನದ್ದಾಗಿದೆ. ಇದರ ನೋಂದಣಿ ಸಂಖ್ಯೆ ೨೫, ಇದನ್ನು ಸಂಗ್ರಹಿಸಿದವರು ಕ್ಯುರೇಟರ್. ಪ್ರಸ್ತುತ ಈ ಮೂರ್ತಿ ಶಿಲ್ಪವು ಕರ್ನಾಟಕ ಸರಕಾರಿ ವಸ್ತು ಸಂಗ್ರಹಾಲಯವಾದ ಬಸವಕಲ್ಯಾಣ ವಸ್ತು ಸಂಗ್ರಹಾಲಯದಲ್ಲಿದೆ.

ಈ ಮೂರ್ತಿ ಶಿಲ್ಪಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ. ಇವುಗಳ ವಿಕ್ಷಣೆಗೆ ಅನೇಕ ಜನ ಪ್ರವಾಸಿಗರು ಈ ವಸ್ತು ಸಂಗ್ರಹಾಲಯಕ್ಕೆ ಬರುತ್ತಾರೆ.

೧೯. ಶಾಸನ ಕೆತ್ತನೆ ೧ : –

ಈ ಶಾಸನ ಕೆತ್ತನೆಯಲ್ಲಿ ಸೂರ್ಯ, ಚಂದ್ರ, ಹಸುವಿನ ಭಕ್ತ ಮತ್ತು ಶಿವಲಿಂಗ ಲಿಪಿಯಲ್ಲಿ ೨೬ ರೇಖೆಗಳನ್ನು ಹೊಂದಿರುವ ಒಂದು ಕಲ್ಯಾಣ ಚಾಲುಕ್ಯರ ಅವಧಿಯಂತೆ ತೋರುತ್ತದೆ. ಈ ಕೆತ್ತನೆ ಕಪ್ಪು ಕಲ್ಲಿನಲ್ಲಿ ಕೆತ್ತಿದ್ದಾರೆ. ಈ ಕೆತ್ತನೆಯ ಮೇಲೆ ಚಂದ್ರ, ಸೂರ್ಯ, ಹಸು, ಶಿವಲಿಂಗದ ಪ್ರತಿಮೆಗಳು ಕಾಣಬಹುದು.

ಈ ಕೆತ್ತನೆಯು ೧೨ನೇ ಶತಮಾನದ್ದಾಗಿದ್ದು ಕಲ್ಯಾಣ ಚಾಲುಕ್ಯರ ಅವಧಿಯದ್ದು ಇದರ ಅಳತೆ ೬೦ – ೧೯ ಇಂಚುಗಳು, ಈ ಕೆತ್ತನೆಯ ಸಂಗ್ರಹಾಕಾರರು ಕ್ಯುರೇಟರ್. ಇದರ ನೋಂದಣಿ ಸಂಖ್ಯೆ ೨೪೮. ಪ್ರಸ್ತುತ ಈ ಕೆತ್ತನೆಯು ಕರ್ನಾಟಕ ಸರಕಾರಿ ವಸ್ತು ಸಂಗ್ರಹಾಲಯವಾದ ಬಸವಕಲ್ಯಾಣದ ವಸ್ತು ಸಂಗ್ರಹಾಲಯದಲ್ಲಿದೆ. ಸದ್ಯಕ್ಕೆ ಇವುಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ.

೨೦. ಶಾಸನ ಕೆತ್ತನೆ ೨ : –

ಈ ಕೆತ್ತನೆಯಲ್ಲಿ ಎರಡು ಬದಿಯಲ್ಲಿ ಮುಂದಿದ್ದು ಬಲಭಾಗದ ಸೂರ್ಯನನ್ನು ತೋರಿಸಲಾಗಿದೆ. ಚಂದ್ರ ಕೆಲವು ಪ್ರತೇಕ ೮ ಸಾಲುಗಳನ್ನು ಹೊಂದಿರುವ ದೇವನಾಗರಿ ತೋರುತ್ತದೆ. ಈ ಕೆತ್ತನೆಯು ಕಪ್ಪು ಶಿಲೆಯಲ್ಲಿ ಕೆತ್ತಿದ್ದಾರೆ.ಇದು ೧೨ನೇ ಶತಮಾನದಾಗಿದ್ದು ಕಲ್ಯಾಣ ಚಾಲುಕ್ಯರ ಅವಧಿಯದ್ದು ಇದು ಅಳತೆ ೧೭ – ೨೪ ಇಂಚುಗಳು ಇದು ಇದರ ನೋಂದಣಿ ಸಂಖ್ಯೆ ೨೪೯ ಆಗಿದೆ. ಈ ಕೆತ್ತನೆಯ ಸಂಗ್ರಹಾಕಾರರು ಕ್ಯುರೇಟರ್. ಪ್ರಸ್ತುತ ಈ ಕೆತ್ತನೆಯನ್ನು ಕರ್ನಾಟಕ ಸರಕಾರಿ ವಸ್ತು ಸಂಗ್ರಹಾಲಯವಾದ ಬಸವಕಲ್ಯಾಣ ವಸ್ತು ಸಂಗ್ರಹಾಲಯದಲ್ಲಿದೆ. ಈ ಕೆತ್ತನೆಯನ್ನು ಪ್ರದರ್ಶನಕ್ಕೆ ಇಟ್ಟಿದ್ದಾರೆ.

೨೧. ಶಾಸನ ಕೆತ್ತನೆ ೩ : –

ಈ ಕೆತ್ತನೆಯಲ್ಲಿ ಅಗ್ರ ಸೂರ್ಯ, ಚಂದ್ರ, ಭಕ್ತ, ಹಸು, ಶಿವಲಿಂಗವನ್ನು ಪೂಜಿಸುವುದು ೪೨ ಸಾಲುಗಳಲ್ಲಿ ಚಾಲುಕ್ಯರ ಅವಧಿಯನ್ನು ತೋರುತ್ತದೆ. ಇಲ್ಲಿ ಭಕ್ತ ಮತ್ತು ಹಸು ಶಿವನನ್ನು ಪೂಜಿಸುವ ದೃಶ್ಯವನ್ನು ಕಾಣಬಹುದು.

ಈ ಕೆತ್ತನೆಯು ೧೨ನೇ ಶತಮಾನದ ಕಲ್ಯಾಣ ಚಾಲುಕ್ಯರ ಅವಧಿಯದ್ದಾಗಿದೆ. ಇದರ ಅಳತೆ ೧೭ – ೨೪ ಇಂಚುಗಳು ಹೊಂದಿದೆ. ಇದರ ನೋಂದಣಿ ಸಂಖ್ಯೆ ೨೪೯ ಆಗಿದೆ. ಈ ಕೆತ್ತನೆಗಳ ಸಂಗ್ರಹಾಕಾರ ಕ್ಯುರೇಟರ್.

ಇಗ ಪ್ರಸ್ತುತ ಈ ಕೆತ್ತನೆ ಬಸವಕಲ್ಯಾಣದ ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ. ಇಲ್ಲಿಗೆ ಅನೇಕ ಪ್ರವಾಸಿಗರು ಪಿಕ್ಷಣೆಗಾಗಿ ಬರುತ್ತಾರೆ. ನೋಡಿ ಸಂತೋಷ ಪಡುತ್ತಾರೆ.

೨೨. ಶಿವ ಮತ್ತು ಪಾರ್ವತಿ : –

ಈ ಮೂರ್ತಿ ಶಿಲ್ಪದಲ್ಲಿ ಬಲದಲ್ಲಿ ಶಿವ ನಡುವೆ ನರಸಿಂಹನ ಮುಖದ ಕೆಳಗೆ ಎರಡು ಬದಿಗೆ ಮೊಸಳೆಗಳು ಎಡಗಡೆ ಪಾರ್ವತಿಯ ಶಿಲ್ಪವಿದೆ. ಎರಡು ಬದಿಯಲ್ಲಿ ಮೊಸಳೆಯನ್ನು ಕೆತ್ತಿದ್ದಾರೆ.

ಈ ಮೂರ್ತಿ ಶಿಲ್ಪದಲ್ಲಿ ಶಿವನು ೪ ಬುಜಗಳನ್ನು ಹೊಂದಿದ್ದು ಒಂದು ಕೈಯಲ್ಲಿ ಡಮರು ಇನ್ನೊಂದು ಕೈಯಲ್ಲಿ ಆಶಿರ್ವಧಿಸುವುದು ಮತ್ತೊಂದು ಕೈಯಲ್ಲಿ ತ್ರಿಶೂಲ ಹಿಡಿದಿದ್ದು ಇಲ್ಲಿ ಕಾಣಬಹುದು. ತಲೆಯ ಮೇಲೆ ಕಿರೀಟ ತಲೆಯ ಹಿಂದೆ ಪ್ರಭಾವಳಿ ಹೊಂದಿದೆ. ಕೊರಳಿನಲ್ಲಿ ಹಾವನ್ನು ಸುತ್ತಿಕೊಂಡಿದ್ದು, ಕೊರಳಿನಲ್ಲಿ ಸರಮಾಲೆಗಳು, ಸೊಂಟದ ಆಭರಣಗಳು, ಕೈಯಲ್ಲಿ ಕೈಬಳೆ, ಕಾಲಲ್ಲಿ ಹಾಕಿಕೊಂಡಿದ್ದು ಕಾಲನ್ನು ಒಂದರ ನಂತರ ಒಂದು ಹಾಕಿಕೊಂಡಿರುವ ಭಂಗಿಯಲ್ಲಿ ಕುಳಿತಿರುವುದು ಕಾಣಬಹುದು. ನಡುವೆಲ್ಲ ನರಸಿಂಹನ ಮುಖವನ್ನು ಹೊಂದಿದ್ದು ಅದರ ಕೆಳಗೆ ಎಡಕು ಮತ್ತು ಬಲಕ್ಕು ಮೊಸಳೆಗಳಿವೆ. ಅವುಗಳನ್ನು ಮಕರ ತೋರಣ ಬಳ್ಳಿಗಳಿಂದ ಅಲಂಕರಿಸಲಾಗಿದೆ.

ಪಾರ್ವತಿಯ ಮೂರ್ತಿ ಶಿಲ್ಪದಲ್ಲಿಯು ಸಹಾ ೪ ಕೈಗಳನ್ನು ಹೊಂದಿದ್ದು ಒಂದು ಕೈಯಲ್ಲಿ ಡಮರು, ಒಂದು ಕೈಯಿಂದ ಆಶಿರ್ವಾದ ಇನ್ನೊಂದು ಕೈಯಲ್ಲಿ ಪುಷ್ಪ ಕಾಣಬಹುದು. ಕೊರಳಲ್ಲಿ ಸರಮಾಲೆ ತಲೆಯ ಮೇಲೆ ಕಿರೀಟ, ತಲೆಯ ಹಿಂದೆ ಪ್ರಭಾವಳಿ, ಕೈಯಲ್ಲಿ ಕೈಬಳೆ, ಕಾಲಲ್ಲಿ ಹೊಂದಿದ್ದು, ಕಾಲನ್ನು ಒಂದರ ನಂತರ ಒಂದನ್ನು ಮಡಚಿರುವ ಭಂಗಿಯಲ್ಲಿ ಕುಳಿತುಕೊಂಡಿದ್ದಾಳೆ.

ಈ ಮೂರ್ತಿ ಶಿಲ್ಪದ ಎಡ ಮತ್ತು ಬಲ ಬದಿಯಲ್ಲಿಯು ಸಹಾ ಒಂದು ಮೊಸಳೆಗಳಿದ್ದು ಮೂರ್ತಿ ಶಿಲ್ಪದ ಸುತ್ತಲು ಬಳ್ಳಿಗಳ ಮೂಲಕ ಅಲಂಕರಿಸಲಾಗಿದೆ. ಮೇಲೆ ಒಂದು ಅಡ್ಡವಾದ ಕಂಬವಿದ್ದು ಅದರ ಮೇಲೆ ಎರಡು ಕಡೆಗೆ ನರಸಿಂಹದ ಮುಖವನ್ನು ಕಾಣಬಹುದು.

ಒಟ್ಟಾರೆಯಾಗಿ ಶಿವ ಮತ್ತು ಪಾರ್ವತಿ ಶಿಲ್ಪವು ಕಣ್ಣಿಗೆ ನಯನ ಮನೋಹರವಾಗುವಂತೆ ಕಾಣಿಸುವಂತೆ ಕೆತ್ತಿದ್ದಾರೆ. ಈ ಶಿಲ್ಪಗಳು ಸುಂದರವಾಗಿ, ಸೂಕ್ಷ್ಮವಾಗಿ, ಆಕರ್ಷಕವಾದದ್ದಾಗಿದೆ. ಇದು ೧೨ – ೧೩ನೇ ಶತಮಾನದ್ದಾಗಿದೆ. ಕಲ್ಯಾಣರ ಚಾಲುಕ್ಯರ ಅವಧಿಯಲ್ಲಿದ್ದಾಗಿದ್ದು ಇದರ

ಅಳತೆ ೨೧ – ೩೯ ಇಂಚುಗಳು ಆಗಿದೆ. ಇದನ್ನು ಕಪ್ಪು ಶಿಲೆಯಲ್ಲಿ ಕೆತ್ತಿದ್ದಾರೆ. ಇವರ ನೋಂದಣಿ ಸಂಖ್ಯೆ ೫೪ ಆಗಿದೆ.

ಪ್ರಸ್ತುತ ಈ ಶಿವ ಮತ್ತು ಪಾರ್ವತಿಯ ಮೂರ್ತಿ ಶಿಲ್ಪವು ಕರ್ನಾಟಕ ಸರಕಾರಿ ವಸ್ತು ಸಂಗ್ರಹಾಲಯವಾದ ಬಸವಕಲ್ಯಾಣದ· ವಸ್ತು ಸಂಗ್ರಹಾಲಯದಲ್ಲಿಡಲಾಗಿದೆ. ಈ ಮೂರ್ತಿ ಶಿಲ್ಪಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ. ಇಲ್ಲಿ ಅನೇಕ ಪ್ರವಾಸಿಗರು ಪ್ರವಾಸಕ್ಕೆ ಬಂದು ಇಲ್ಲಿನ ಈ ವಸ್ತು ಸಂಗ್ರಹಾಲಯಕ್ಕೆ ಬೇಟಿ ನೀಡಿ ಇಲ್ಲಿನ ಮೂರ್ತಿ ಶಿಲ್ಪಗಳನ್ನು ನೋಡಿ ಸಂತೋಷ ಪಡುತ್ತಾರೆ.

೨೩. ಕಂಬದ ಶಿಲ್ಪ : –

ಈ ಕಂಬವು ಒಂದು ಬಾಗಿಲದ ಭಾಗವಾಗಿದ್ದು ಈ ಸ್ತಂಭದ ಮಧ್ಯದಲ್ಲಿ ಐದು ಹೆಜ್ಜೆಗಳು ಇದು ಎರಡು ಗಂಡು ವ್ಯಕ್ತಿಗಳನ್ನು ಹೊಂದಿದೆ. ಕಂಬದ ಶಿಲ್ಪದಲ್ಲಿ ಎರಡು ಚಿಕ್ಕ ರೀತಿಯಲ್ಲಿ ಮೂರ್ತಿಗಳನ್ನು ಕೆತ್ತಿದ್ದಾರೆ. ಕಂಬವು ಹಂತ ಹಂತವಾಗಿ ಸೂಕ್ಷ್ಮವಾಗಿ ಸುಂದರವಾದ ರೀತಿಯಲ್ಲಿ ಕೇತ್ತಲಾಗಿದೆ. ಸ್ತಂಭದ ಮಧ್ಯದಲ್ಲಿ ಐದು ಹೆಜ್ಜೆಗಳಿವೆ. ಸ್ತಂಭವು ೧೪ನೇ ಶತಮಾನದ್ದು. ಇದರ ಅಳತೆ ೨೯ – ೧೫ ಇಂಚುಗಳಿದ್ದು ಆದರ ನೋಂದಣಿ ಸಂಖ್ಯೆ ೧೭೪ ಆಗಿದೆ. ಇದರ ಸಂಗ್ರಹಾಕಾರರು ಕ್ಯುರೇಟರ್.

ಪ್ರಸ್ತುತ ಈ ಸ್ತಂಭವು ಕರ್ನಾಟಕ ಸರಕಾರಿ ವಸ್ತು ಸಂಗ್ರಹಾಲಯವಾದ ಬಸವಕಲ್ಯಾಣ ವಸ್ತು ಸಂಗ್ರಹಾಲಯದಲ್ಲಿದೆ. ಇದನ್ನು ಪ್ರದರ್ಶನಕ್ಕೆ ಇಟ್ಟಿದ್ದಾರೆ. ಇಲ್ಲಿಗೆ ಅನೇಕ ಪ್ರವಾಸಿಗರು ಬಂದು ನೋಡಿ ಸಂತೋಷ ಪಡುವರು.

೨೪. ಪಂಗಡದ ಶಾಸನ : –

ಪಂಗಡದ ಶಾಸನವು ಎರಡು ತುಂಡುಗಳಾಗಿ ಮುರಿಯಲ್ಪಟ್ಟಿದೆ. ಪಂಗಡದ ಶಾಸನದಲ್ಲಿನ ಅಕ್ಷರಗಳು ಸ್ಪಷ್ಟವಾದ ರೀತಿಯಲ್ಲಿ ಕೋರೆದಿದ್ದು. ಸುಂದರವಾಗಿ ಕಾಣಿತ್ತದೆ. ಇದರ ಅಳತೆ ೫ – ೨೧ ಇಂಚುಗಳು ಆಗಿದೆ. ಇದರ ನೋಂದಣಿ ಸಂಖ್ಯೆ ೧೭೩ ಆಗಿದೆ. ಇದರ ಸಂಗ್ರಹಾಕಾರರು ಕ್ಯುರೇಟರ್.

ಪ್ರಸ್ತುತ ಈ ಪಂಗಡದ ಶಾಸನವು ಕರ್ನಾಟಕ ಸರಕಾರಿ ವಸ್ತು ಸಂಗ್ರಹಾಲಯವಾದ ಬಸವಕಲ್ಯಾಣದ ವಸ್ತು ಸಂಗ್ರಹಾಲಯದಲ್ಲಿ ಇಡಲಾಗಿದೆ. ಇವನ್ನು ವೀಕ್ಷಿಸಲು ಹಲವಾರು ಪ್ರವಾಸಿಗರು ಬರುತ್ತಾರೆ.

೨೫. ಬೇಲೂರು ಶಿಲ್ಪಗಳು : –

ಬೀದರ ಜಿಲ್ಲೆಯ ಬಸವಕಲ್ಯಾಣ ಹುಲಸೂರು ಮಾರ್ಗವಾಗಿ ೧೦–೧೨ ಕಿ. ಮೀ. ಕ್ರಮಿಸಿದಾಗ ನಮಗೆ ಎದುರಾಗುವ ಊರೇ ಬೇಲೂರು. ಈ ಊರನ್ನು ಕಂಡಾಗ ಮೇಲ್ನೋಟಕ್ಕೆ ತೀರಾ ಇತ್ತಿಚೇಗೆ ನಿರ್ಮಾಣವಾಗಿದೆಯೋನೊ ಎಂಬತ್ತಿದೆ. ಏಕೆಂದರೆ ನೋಡುಗರಿಗೆ ಸುಸ್ಥಿತಿಯಲ್ಲಿರುವ ಯಾವುದೇ ಸ್ಮಾರಕಗಳು ಸಿಗುವುದಿಲ್ಲ. ಆದರೆ ಕಲ್ಲು ಕಥೆಗಳು ಜಾಡು ಹಿಡಿದು ಹೋದರೆ ನಾವು ಹತ್ತು – ಹನ್ನೆರಡನೇ ಶತಮಾನದಷ್ಟು ಆಳಕ್ಕೆ ಇಳಿಯುತ್ತೇವೆ.

ಒಂದೆಡೆ ಆಂಧ್ರ ಪ್ರದೇಶ, ಮತ್ತೊಂದೆಡೆ ಮಹಾರಾಷ್ಟ್ರದ ಗಡಿಯನ್ನು ಹೊಂದಿರುವ ಬೀದರ ಜಿಲ್ಲೆಯ ಇತಿಹಾಸವನ್ನು ತೆರೆದು ನೋಡಿದಾಗ ಬಸವಕಲ್ಯಾಣ ಚಾಲುಕ್ಯರ ರಾಜಧಾನಿಯಾಗಿತ್ತು. ೧೨ನೇ ಶತಮಾನದಲ್ಲಿ ಬಸವಣ್ಣನವರ ಸಾಮಾಜಿಕ ಸಮಾನತೆಯ ಕ್ರಾಂತಿ ಭೂಮಿಯಾಗಿತ್ತು. ನಿಜಾಮರ ಅರಸರ ಆಳ್ವಿಕೆಯಂದಾಗಿ ವಿವಿಧ ಸಂಸ್ಕೃತಿ ಭಾಷೆಯ ಪ್ರಭಾವ ಈ ಪ್ರದೇಶದ ಮೇಲೆ ಗಾಢವಾದ ಪ್ರಭಾವ ಏರಿದೆ. ಅಳರಸರು ಬದಲಾದಂತೆ ಇಲ್ಲಿನ ಕಲೆ, ಸಂಸ್ಕೃತಿ, ಭಾಷೆಗಳಲ್ಲಿ ಕೂಡ ಪರಿವರ್ತನೆ ಕಂಡು ಬಂದಿದೆ. ೧೨ನೇ ಶತಮಾನದಲ್ಲಿ ಅನೇಕ ದೇವಾಲಯಗಳು ವಾಸ್ತು ಶಿಲ್ಪಗಳು ನಾಶವಾಗಿದ್ದನ್ನು ಕಾಣಬಹುದು. ಇಂದು ಈ ಅಪೂರ್ವ ಇತಿಹಾಸದ ಮಹತ್ವದ ಬಗ್ಗೆ ತಿಳಿಯದೇ ಎಲ್ಲೆಂದರಲ್ಲಿ ಬಿದ್ದು ಹಾಳಾಗುತ್ತಿರುವುದು ಕಾಣಬಹುದು.

ಇಂತಹ ಅಪರೂಪದ ಇತಿಹಾಸವನ್ನು ಹೊಂದಿರುವ ವಾಸ್ತು ಶಿಲ್ಪಗಳು ಹಾದಿ ಬಿದಿಯಲ್ಲಿ ಬಿದ್ದು ನಾಶವಾಗುತ್ತಿವೆ. ಬಸವಕಲ್ಯಾಣ ತಾಲೂಕಿನ ಹುಲಸೂರ ರಸ್ತೆಯಲ್ಲಿರುವ ಬೇಲೂರು ಗ್ರಾಮಕ್ಕೆ ಕಾಲಿಟ್ಟಾಗ ಇತಿಹಾಸ ಹಾಗೂ ವಾಸ್ತು ಶಿಲ್ಪ ಪ್ರೀಯರ ಕಣ್ಣೆರು ತಾನಾಗೆ ಹರಿಯುತ್ತವೆ.

ಗ್ರಾಮದ ಹೆಸರೇ ಹೇಳುವಂತೆ ಬೇಲೂರು ಎಂದಾಕ್ಷಣ ಹಾಸನ ಜಿಲ್ಲೆಯ ಶಿಲ್ಪಕಲಾ ವೈಭವದ ಬೇಲೂರು ನೆನಪಾಗುವುದು ಸಹಜ ಸಂಗತಿ ಆದರೆ ಕರ್ನಾಟಕದ ತುತ್ತ ತುದಿಯಲ್ಲಿರುವ ಬೀದರ ಜಿಲ್ಲೆಯಲ್ಲೂ ಒಂದು ಬೇಲೂರು ಇದೆ ಎಂಬುದಕ್ಕೆ ಬಹಳಷ್ಟು ಜನತೆಗೆ ತಿಳಿಯದು ಹೌದು ಹಾಸನ ಜಿಲ್ಲೆಯ ಬೇಲೂರಿನಂತೆ ಬೀದರ ಜಿಲ್ಲೆಯ ಬೇಲೂರು ಕೂಡ ಶಿಲ್ಪಕಲಾ ವೈಭವದಿಂದ ಮೆರೆದ ಗ್ರಾಮವೇ ಆಗಿದೆ ಎಂಬುದಕ್ಕೆ ಸಾಕಷ್ಟು ಅವಶೇಷಗಳು ಹೆಜ್ಜೆ ಹೆಜ್ಜೆಗೂ ಈ ಗ್ರಾಮದಲ್ಲಿ ಕಾಣಬಹುದು.

ಬೇಲೂರು ಗ್ರಾಮದ ಪ್ರಮುಖ ದೇವಾಲಯಗಳಾದ ಶ್ರೀ ಹನುಮಾನ ಮಂದಿರ, ಶ್ರೀ ಸಿದ್ಧರಾಮೇಶ್ವರ ದೇವಾಲಯ, ಲಕ್ಷ್ಮೀ ಮಾತೆ ದೇವಾಲಯಗಳಲ್ಲದೇ ಅಲ್ಲಿ ಇಲ್ಲಿ ಊರ

ಬೀದಿಗಳಲ್ಲಿ ಹೊಲದಲ್ಲಿ ದುರ್ಗಗಳ ಹತ್ತಿರ ಕೆರೆಯ ಕಟ್ಟೆಯಾಗಿ ಉಪಯೋಗಿಸಿರುವ ಹಾಗೂ ಅಲಲ್ಲಿ ಚದರಿ ಬಿದ್ದಿರುವುದು ಕಂಡು ಬರುತ್ತವೆ. ಹಳೆಯ ದೇವಾಲಯ ಒಂದರ ಸುಂದರ ಕೆತ್ತನೆಯ ಶಿಲ್ಪಗಳು ಜೈನ ತೀರ್ಥಂಕರ ಭಗ್ನ ಅವಶೇಷಗಳು ಹಾಗೂ ಜನರ ಛಾಯಿಯಲ್ಲಿ ಬತ್ತದ ಗಂಗೆಯಂತಿರುವ ಐತಿಹಾಸಿಕಗಳಲ್ಲಿನ ಪುರಾತತ್ವ ಇತಿಹಾಸಕ್ಕೆ ಆಧಾರಗಳಾಗಿವೆ.

೨೬. ಶಾಸನ ಶಿಲ್ಪ : –

ಶಾಸನ ಸುಂದರಿ ಈ ವಿಗ್ರಹವು ಇಲ್ಲಿ ಕಂಡುಬರುವ ಎಲ್ಲಾ ವಿಗ್ರಹಗಳಿಗಿಂತಲೂ ಹೆಚ್ಚು ನಮ್ಮ ಮನ ಸೆಳೆಯುವ ಶಿಲಾಬಾಲಿಕೆ. ಶಾಸನ ಸುಂದರಿಯು ಶಾಸನವನ್ನು ಕೊರೆಯುತ್ತಿದ್ದಾಳೆ.

ಈ ಶಿಲಾ ಬಾಲಿಕೆಯು ಲೇಖನ ಪಠವನ್ನು ತನ್ನ ಎಡಗೈಯಿಂದ ಎತ್ತರದಲ್ಲಿ ಹಿಡಿದು ಬಲಗೈಯಲ್ಲಿ ಲೇಖನಿಯನ್ನು ಹಿಡಿದಿದ್ದಾಳೆ. ಅವಳು ಬರೆಯುತ್ತಿರುವಾಗ ಲೇಖನ ಆರನೇ ವಿಕ್ರಮಾದಿತ್ಯನ ಪರಾಕ್ರಮವನ್ನು ಹೊಗಳಿ ಶಾಸನವನ್ನು ಬರೆಯುತ್ತಿದ್ದಾಳೆ. ಮೂರು ಸಾಲಿನಲ್ಲಿರುವ ಸಂಸ್ಕೃತ ಭಾಷೆಯ ಶಾಸನ ಕನ್ನಡ ಲಿಪಿಯಲ್ಲಿ ಈ ರೀತಿ ಇದೆ. **"ಸಪ್ತ ದ್ವೀಪೋದರೀ ಭೂತಂ ಭೂತಲಂ ಷ್ವೀಕರಿಷ್ಯತಿ ಚಾಲುಕ್ಯೋ ವಿಕ್ರಮಾದಿತ್ಯ ಪಪ್ತವೋ ವಿಷ್ಣುವರ್ಧನ".**

ಇದರ ಅರ್ಥ ಹೀಗಿದೆ ಚಾಲುಕ್ಯ ವಂಶದ ವಿಕ್ರಮಾದಿತ್ಯನೆಂದು ರಾಜನು ಏಳು ದ್ವೀಪಗಳಿಂದ ಸಮಾವೇಶಗೊಂಡ ಭೂಮಿಯನ್ನು ತನ್ನದಾಗಿ ಮಾಡಿಕೊಂಡು ರಾಜ್ಯಭಾರ ಮಾಡುತ್ತಿದ್ದಾನೆ ಎಂದು ಬರೆಯಲಾಗಿದೆ.

ಶಾಸನ ಸುಂದರಿಯು ನಿಂತಿರುವ ರೀತಿ ಅವಳು ಬರೆಯುತ್ತಿರುವ ಲಾಲಿತ್ಯ ಪೂರ್ಣಭಂಗಿ ನೋಡುಗರನ್ನು ಬೆರಗುಗೊಳಿಸುತ್ತದೆ. ಕಲೆಯ ಸೊಬಗು ಶಾಸನದಲ್ಲಿರುವ ಭಾಷೆಯ ಬೆಡಗು ಹಾಗೂ ಐತಿಹಾಸಿಕ ಅಂಶ ಇವೆಲ್ಲವೂ ಈ ಶಿಲಾ ಬಾಲಿಕೆಯ ವಿಗ್ರಹದಲ್ಲಿ ಅಳವಡಿಸಿಕೊಂಡಿವೆ. ಚತುರ ಚಾಲುಕ್ಯ ಶಿಲ್ಪಿಯು ತನ್ನ ಕಲಾ ನೈಪುಣ್ಯತೆಯನ್ನು ಮೆರೆಯುವುದರ ಮೂಲಕ ಶಿಲೆಯಲ್ಲಿನ ಆ ಸೌಂದರ್ಯವನ್ನು ದ್ವಿಗುಣಗೊಳಿಸಿದ್ದಾನೆ. ಆ ಶಾಸನ ಸುಂದರಿಯು ನಿಂತಿರುವ ಭಂಗಿ ಅವಳು ಮೈಮೇಲಿರುವ ಆಭರಣಗಳು ಸೂಕ್ಷ್ಮ ಕೆತ್ತನೆ ಹಾಗೂ ಕೇಶಾಲಂಕಾರ ಅವಳ ಕೈಬಳೆ, ಓಲೆ, ಕಾಲಿನಲ್ಲಿರುವ ಅಥವಾ ಗೆಜ್ಜೆಗಳು ಅತ್ಯಂತ ಆಕರ್ಷಕವಾಗಿ ಮೂಡಿ ಬಂದಿವೆ. ಶಿಲಾ ಬಾಲಿಕೆ ಶಿಲೆಯ ಮೇಲೆ ಕೊರೆಯಲಾದ ಶಾಸನದಿಂದ ಇನ್ನಷ್ಟು ಆಕರ್ಷಕವಾಗಿ ಸುಂದರವಾಗಿ ಮನಸೆಳೆಯುವಂತೆ ಶಿಲಾ ಬಾಲಿಕೆಯನ್ನು ಸೂಕ್ಷ್ಮವಾದ ಸುಂದರವಾಗಿ ಕೆತ್ತನೆಯನ್ನು ಮಾಡಲಾಗಿದೆ.

೨೭. ಸರ್ಪ ಸುಂದರಿ ಶಿಲ್ಪ : –

ಇಲ್ಲಿ ಕಂಡು ಬರುವ ಆಕರ್ಷಕ ಗಮನ ಸೆಳೆಯುವ ಶಿಲ್ಪಗಳಲ್ಲಿ ಮತ್ತೊಂದು ಶಿಲ್ಪವು ಈ ಸರ್ಪ ಸುಂದರಿ ತನ್ನ ಎರಡು ಕೈಗಳನ್ನು ಮೇಲಕ್ಕೆ ಎತ್ತಿರುವುದು ಮತ್ತು ಕೈಯಲ್ಲಿ ಸರ್ಪಗಳನ್ನು ಹಿಡಿದು ಕೊಂಡಿದ್ದಾಳೆ. ಆಕೆ ನಗ್ನವಾಗಿದ್ದು ಅವಳ ನಗ್ನವಾಗಿರುವ ಮೈಯನ್ನು ಸರ್ಪಗಳಿಂದ ಅಲಂಕಾರ ಮಾಡಿಕೊಂಡು ಮೈ ಮುಚ್ಚಿಕೊಂಡಿದ್ದಾಳೆ. ಈ ಸರ್ಪ ಸುಂದರಿಯು ಸುಂದರವಾಗಿ ಕಾಣಿಸುತ್ತಿದೆ. ಅವಳು ನಿಂತಿರುವ ಭಂಗಿ ಅವಳ ಕೇಶಾಲಂಕಾರ, ಕೈಬಳೆಗಳು, ಕೊರಳ ಹಾರ, ಕಲ್ಲಿನಲ್ಲಿನ ಕಡಗ ಮತ್ತು ಗೆಜ್ಜೆಗಳು ಎಲ್ಲವೂ ಆಕರ್ಷಕವಾಗಿ ಮೂಡಿ ಬಂದಿವೆ. ಈ ಶಿಲ್ಪದಲ್ಲಿ ಇಕೆಯ ಒಂದೊಂದು ಅಂಗಗಳು ಅರಳಿ ನಿಂತಿವೆ.

೨೮. ದ್ವಾರಪಾಲಕರ ಶಿಲ್ಪಗಳು : –

ಸುಂದರವಾಗಿ ಹಾಗೂ ಸೂಕ್ಷ್ಮ ಶಿಲ್ಪಕಲಾ ವೈಭವದ ಈ ದೇವಾಲಯ ನಕ್ಷತ್ರಾಕಾರದಲ್ಲಿ ನಿರ್ಮಾಣವಾಗಿರಬಹುದಾದ ಕುರುಹುಗಳಿವೆ. ಮಂದಿರಕ್ಕೆ ಗರ್ಭಗೃಹ ನವರಂಗ ಮಂಟಪ, ಮುಖಮಂಟಪ ಇದ್ದು ಅಲ್ಲಿರುವ ಅಳಿದುಳಿದ ಅವಶೇಷಗಳಿಂದ ಕಂಡು ಬರುತ್ತದೆ. ಪ್ರಸ್ತುತ ಗರ್ಭಗುಡಿ ಮಾತ್ರ ಉತ್ತಮ ಸ್ಥಿತಿಯಲ್ಲಿದ್ದು ದೇವರಂಗದ ಬಹುಭಾಗ ಪುನರ್ ನಿರ್ಮಾಣಗೊಂಡಿದ್ದು, ನೆಲಕಟ್ಟಿದ, ಗರ್ಭಗುಡಿಗೆ ಶಿಖರವೂ ಇಲ್ಲ ಸಭಾಮಂಟಪದ ಕೆಲವು ಕಂಬಗಳು ಮಾತ್ರ ಉಳಿದುಕೊಂಡಿವೆ. ಇವುಗಳು ಕಪ್ಪು ಶಿಲೆಯಲ್ಲಿ ರಚನೆಗೊಂಡಿದ್ದು ಆಕಾರ ಮತ್ತು ಎತ್ತರದಲ್ಲಿ ದೊಡ್ಡದಾಗಿವೆ. ಗರ್ಭಗುಡಿಯು ಪ್ರವೇಶದ್ವಾರದಲ್ಲಿ ಕೆತ್ತಲ್ಪಟ್ಟಿರುವ ಶಂಖ ಚಕ್ರ ಗಧಾಂಕಿತರಾದ ದ್ವಾರಪಾಲಕರ ಶಿಲ್ಪವೂ ಇಂದಿಗೂ ಕಲಾ ಪ್ರೇಮಿಗಳನ್ನು ಬರಮಾಡಿ ಕೊಳ್ಳುತ್ತವೆ.

೨೯. ತಾಯಿ ಮಗುವಿನ ಶಿಲ್ಪ : –

ತಾಯಿ ಮಗುವಿನ ಶಿಲ್ಪ ಇಲ್ಲಿ ಕಂಡುಬರುವ ಆಕರ್ಷಕ ಶಿಲ್ಪಗಳಲ್ಲಿ ಅಥವಾ ಶಿಲಾ ಬಾಲಿಕೆ ತಾಯಿ ರೂಪದಲ್ಲಿದ್ದು ಮಗುವನ್ನು ಎಡಗೈಯಲ್ಲಿ ಎತ್ತಿಕೊಂಡಿದ್ದಾರೆ. ಮತ್ತು ಬಲಗೈ ಮೇಲೆ ಎತ್ತಿದ್ದಾಳೆ. ಕೈಯಲ್ಲಿ ದ್ರಾಕ್ಷಿಯ ಗೊಂಚಲನ್ನು ಗೋಚ್ಚವನ್ನು ಹಿಡಿದಿದ್ದಾಳೆ. ಅವಳು ಅಳುವ ಮಗುವಿಗೆ ದ್ರಾಕ್ಷಿಯ ಹಣ್ಣುಗಳನ್ನು ತೋರಿಸಿ ಮಗುವನ್ನು ಸಂತೈಸುತ್ತಿರುವ ದೃಶ್ಯ ಕಂಡು ಬರುತ್ತದೆ. ಶಿಲಾ ಬಾಲಿಕೆಯು ಸುಂದರವಾಗಿರುವ ಅವಳ ಕೇಶಾಲಂಕಾರ, ಕೈಬಳೆ, ಅವಳ ಕೊರಳ ಹಾರ, ಸೊಂಟದ ಡಾಬು, ಮಗುವಿಗೆ ಹಾಕಿರುವ ಆಭರಣಗಳು ಅವಳ ಕಾಲಿನ ಗೆಜ್ಜೆಗಳು ಎಲ್ಲವೂ ಸುಂದರವಾಗಿ ಮೂಡಿ ಬಂದಿವೆ.

೩೦. ಗಿಳಿಯೊಡನೆ ಮಾತನಾಡುತ್ತಿರುವ ಸುಂದರಿಯ ಶಿಲ್ಪ (ಶುಕಭಾಷಿಣಿ) : –


ಈ ಆಕರ್ಷಕ ಶಿಲಾ ಬಾಲಿಕೆಯರಲ್ಲಿ ಮತ್ತೊಂದು ಸುಂದರ ಶಿಲಾ ಬಾಲಿಕೆಯ ಶಿಲ್ಪ ಈ ಗಿಳಿಯೊಡನೆ ಮಾತನಾಡುತ್ತಿರುವ ಸುಂದರಿಯ ಶಿಲ್ಪ (ಶುಕ ಭಾಷಿಣಿ). ಈ ಸುಂದರಿಯು ಕಾಲು ಮೇಲೆತ್ತಿ ಸೊಂಟದ ಮೇಲೆ ಕೈಯಿಟ್ಟಿದ್ದಾಳೆ. ಆ ಕೈ ಮೇಲೆ ಗಿಳಿ ಕುಳಿತಿದೆ. ಆ ಗಿಳಿಯ ಮೇಲೆ ಮುಖಮಾಡಿ ಆಸೆ ಕಣ್ಣುಗಳಿಂದ ನೋಡುತ್ತಿದೆ. ಈ ಸುಂದರಿಯು ವೈಯಾರದಿಂದ ಕೈ ಮೇಲೆ ಮಾಡಿ ಕೈಯಲ್ಲಿ ದ್ರಾಕ್ಷಿಯ ಹಣ್ಣಿನ ಗೊಂಚಲು ಹಿಡಿದಿದ್ದಾಳೆ. ಗಿಳಿಯು ಆಸೆಯಿಂದ ಹಣ್ಣುಗಳನ್ನು ನೋಡುವುದನ್ನು ಶಿಲಾ ಬಾಲಿಕೆ ಮಂದಸ್ಮಿತಳಾಗಿ ಆಸಕ್ತಿಯಿಂದ ಗಿಳಿಯನ್ನು ನೋಡುತ್ತಿದ್ದಾಳೆ.

೩೧. ಬ್ರಹ್ಮ, ವಿಷ್ಣು ಹಾಗೂ ಮಹೇಶ್ವರರ ನೃತ್ಯ ಭಂಗಿಯ ಶಿಲ್ಪಗಳು : –

ದೇವಾಲಯದ ಹೊರ ಗೋಡೆಯ ಸುತ್ತಲೂ ವಿಭಿನ್ನ ರೀತಿಯ ನೃತ್ಯ ಭಂಗಿಯ ಶಿಲ್ಪಗಳನ್ನು ಕಾಣಬಹುದು. ಇಲ್ಲಿ ಬ್ರಹ್ಮ, ವಿಷ್ಣು ಹಾಗೂ ಮಹೇಶ್ವರರ ನೃತ್ಯ ಭಂಗಿಯ ಶಿಲ್ಪಗಳಿವೆ. ಅವರ ಹಾವ ಭಾವ, ಅಲಂಕಾರಿಕ ಆಭರಣಗಳು ವಸ್ತುಗಳು ಆಕರ್ಷಕವಾಗಿ ಸುಂದರಿಯಾಗಿ ಮೂಡಿ ಬಂದಿವೆ. ದೇವಾದಿದೇವತೆಗಳು ನರ್ತಿಸುವ ಶಿಲ್ಪಗಳು ಸಾರ್ವಜನಿಕರ ಗಮನ ಸೆಳೆಯುವಂತಿದೆ. ದೇವಸ್ಥಾನದ ನಾಲ್ಕು ಮಗ್ಗಲು ಗೋಡೆಯಲ್ಲಿ ಮಂಟಪಗಳು ಮತ್ತು ಈ ಮಂಟಪದಲ್ಲಿಯೇ ಬ್ರಹ್ಮ, ವಿಷ್ಣು ಹಾಗೂ ಮಹೇಶ್ವರರು ವಿವಿಧ ಭಂಗಿಗಳಲ್ಲಿ ಸರ್ವಾಲಂಕೃತ ಭೂಷಿತರಾಗಿದ್ದಾರೆ. ದೇವಸ್ಥಾನದ ಕಲ್ಲುಗಳು ಒಂದೊಂದು ವಿಭಿನ್ನ ರೀತಿಯ ಭಂಗಿಯ ಶಿಲ್ಪ ಕಲೆಗಳಿಂದ ಅರಳಿ ನಿಂತಿರುವುದನ್ನು ಕಂಡು ಬರುತ್ತದೆ.

ಒಟ್ಟಾರೆಯಾಗಿ ಈ ದೇವಾಲಯ ಕಟ್ಟಲು ಬಳಸಿರುವ ಕಲ್ಲುಗಳು ಸಮೀಪದಲ್ಲೆಲ್ಲೂ ಕಂಡು ಬರುವುದಿಲ್ಲ. ಶಿಲ್ಪ ಕಲಾಕೃತಿ ನಿರ್ಮಾಣಕ್ಕಾಗಿಯೇ ಕಲ್ಲುಗಳನ್ನು ಬೇರೆಡೆಯಿಂದ ತಂದಿರುವ ಸಾಧ್ಯತೆಗಳಿವೆ. ಸಾವಿರಾರು ವರ್ಷಗಳ ಅಪೂರ್ವ ಐತಿಹಾಸಿಕ ಶಿಲ್ಪ ಕಲೆಗಳ ಬೀಡಾಗಿರುವ ಈ ದೇವಸ್ಥಾನಕ್ಕೆ ಸೂಕ್ತವಾಗಿ ಅದರ ರಕ್ಷಣೆಯಿಲ್ಲದೆ ಅನೇಕ ಶಿಲ್ಪಗಳು ನಾಶವಾಗುತ್ತಿವೆ. ಮಳೆ, ಗಾಳಿ, ಬಿಸಿಲುಗಳಿಂದ ಹಾಳಾಗಿರುವುದಲ್ಲದೆ ಅನೇಕ ಪ್ರತಿಮೆಗಳು ಯಾರೋ ಎತ್ತಿಕೊಂಡು ಹೋಗಿರುವುದು ಕಂಡು ಬರುತ್ತದೆ.

ದೇವಸ್ಥಾನದ ಪಕ್ಕದಲ್ಲಿ ರಸ್ತೆ ಇರುವುದರಿಂದ ಅಲ್ಲಿ ಭಾರಿ ವಾಹನಗಳ ಸಂಚರಿಸುವುದರಿಂದ ಅಲ್ಲಿನ ಈ ಜೀರ್ಣವಾದ ಹಳೆಯ ಕಟ್ಟಡಗಳು ನೆಲದ ಅದುರುವಿಕೆಯಿಂದ ಕುಸಿದು ಬೀಳುವ ಸ್ಥಿತಿಯಲ್ಲಿವೆ. ಅವನತಿಯಲ್ಲಿರುವ ಕೂಡಲೇ ಇದನ್ನು ರಕ್ಷಿಸದೆ ಇದ್ದರೆ ಕೋಟಿ ರೂಪಾಯಿ ಕೊಟ್ಟರು ಸಿಗದ ಈ ಅಪರೂಪ ಶಿಲ್ಪಕಲಾ ವೈಭವ ನಾಶವಾಗಿ ಹೋಗುವುದು ಖಂಡಿತ.



ಚಿತ್ರ : ಶಿವ ದೇವಾಲಯದ ಪದ್ಮಿನಿ ಶಿಲ್ಪ




ಚಿತ್ರ : ಶಿವ ದೇವಾಲಯದ ಮಹಾನಂದ ಶಿಲ್ಪ




ಚಿತ್ರ : ಶಿವ ದೇವಾಲಯದ ಮಕರ ತೋರಣಗಳ ಶಿಲ್ಪಗಳು




ಚಿತ್ರ : ಶಿವ ದೇವಾಲಯದ ಮಕರ ತೋರಣಗಳ ಶಿಲ್ಪಗಳು





ಚಿತ್ರಗಳು : ಶಿವ ದೇವಾಲಯದ ಸುತ್ತಲಿನ ಶಿಲಾ ಬಾಲಕಿಯರು








ಚಿತ್ರಗಳು : ಶಿವ ದೇವಾಲಯದ ಸುತ್ತಲಿನ ಶಿಲಾ ಬಾಲಕಿಯರು








ಚಿತ್ರಗಳು : ಶಿವ ದೇವಾಲಯದ ಸುತ್ತಲಿನ ಶಿಲಾ ಬಾಲಕಿಯರು








ಚಿತ್ರಗಳು : ಶಿವ ದೇವಾಲಯದ ಸುತ್ತಲಿನ ಶಿಲಾ ಬಾಲಕಿಯರು









ಚಿತ್ರಗಳು : ಶಿವ ದೇವಾಲಯದ ಸುತ್ತಲಿನ ಶಿಲಾ ಬಾಲಕಿಯರು







ಚಿತ್ರಗಳು : ಶಿವ ದೇವಾಲಯದ ವಿವಿಧ ವಿನ್ಯಾಸದ ಸ್ತಂಬಗಳು







ಚಿತ್ರಗಳು : ನವರಂಗದ ಭುವನೇಶ್ವರಿ ವಿನ್ಯಾಸ






ಚಿತ್ರಗಳು : ಜಲಸಿಂಗವಿ ದೇವಾಲಯದ ಸ್ತಂಭಗಳು





ಚಿತ್ರಗಳು : ನಾರಣಪೂರದ ನಾರಯಾಣ ಮೂರ್ತಿ (೨೦೧೪ ರಲ್ಲಿ ದೊರತ್ತಿದೆ)







ಚಿತ್ರಗಳು : ಜೈನ ಶಿಲ್ಪಗಳು





ಚಿತ್ರ : ಗರುಡ



ಚಿತ್ರ : ನಾಗ ದಂಪತಿ



ಚಿತ್ರ : ತ್ರಿಮೂರ್ತಿ



ಚಿತ್ರ : ವಿಷ್ಣು




ಚಿತ್ರ : ಶಿಲಾ ಬಾಲಿಕಿಯರು



ಚಿತ್ರ : ನರಸಿಂಹ



ಚಿತ್ರ : ಶಿವ ಮತ್ತು ಪಾರ್ವತಿ



ಚಿತ್ರ : ಶಿಲಾ ಬಾಲಿಕೆ



ಚಿತ್ರ : ಪಂಗಡದ ಶಾಸನ



ಚಿತ್ರ : ಶಾಸನ



ಚಿತ್ರ : ಶಾಸನ




ಚಿತ್ರ : ಶಾಸನ




ಚಿತ್ರ : ಶಾಸನ ಸುಂದರಿ ಶಿಲ್ಪ




ಚಿತ್ರ : ತಾಯಿ ಮಗುವಿನ ಶಿಲ್ಪ



ಚಿತ್ರ : ಗಿಳಿಯೊಡನೆ ಮಾತನಾಡುತ್ತಿರುವ ಸುಂದರಿಯ ಶಿಲ್ಪ (ಶುಕಭಾಷಿಣಿ)







ಚಿತ್ರಗಳು : ಜಲಸಿಂಗವಿ ಕಮಲೇಶ್ವರ ದೇವಾಲಯ (ಶಿವದೇವಾಯಲ) ದ ಶಿವ ಮತ್ತು ಗಣೇಶ ಶಿಲ್ಪ





ತ್ರ : ಬಸವಕಲ್ಯಾಣ ವಸ್ತು ಸಂಗ್ರಹಾಲಯದ ಶಿಲ್ಪಗಳು



ಚಿತ್ರ : ಶಚಿತ್ರ : ಬಸವಕಲ್ಯಾಣ ವಸ್ತು ಸಂಗ್ರಹಾಲಯದ ಶಿಲ್ಪಗಳುಾಸನ



ಚಿತ್ರ : ಬಸವಕಲ್ಯಾಣ ವಸ್ತು ಸಂಗ್ರಹಾಲಯದ ತೋಫಗಳು





ಚಿತ್ರ : ಬಸವಕಲ್ಯಾಣ ವಸ್ತು ಸಂಗ್ರಹಾಲಯದ ಫಂಟೆಗಳು



ಅಧ್ಯಾಯ –5
ಸಮಾರೋಪ
ಅನುಬಂದಗಳು ಮತ್ತು ಗ್ರಂಥ ಋಣ

ಪ್ರಸ್ತುತ ಈ ಕಿರು-ಪ್ರಬಂದದಲ್ಲಿ ಕರ್ನಾಟಕದ ಕೀರಿಟ ಎನಿಸಿಕೊಂಡಿರುವ ಬೀದರ ಜಿಲ್ಲೆ ಬೀದರ ಜಿಲ್ಲೆಯ ಐತಿಹಾಸಿಕ ವಾಸ್ತುಶಿಲ್ಪಗಳು ಕುರಿತು ಹಾಗೂ ಐತಿಹಾಸಿಕ ಹಿನ್ನೇಲೆ ರಚನೆ ಮತ್ತು ಅದರ ಮಹತ್ವವನ್ನು ಕುರಿತು ಅಧ್ಯಾಯನ ಮಾಡಲಾಗಿದೆ.

ಬೀದರಿನ ಐತಿಹಾಸಿಕ ವಾಸ್ತು ಶಿಲ್ಪವುಗಳ ಬಗಗೆ ಮಾಹಿತಿ ಅವರ ರಚನೆ ಯಾರ ರಾಜರ ಕಾಲದಲ್ಲಾಯಿತು. ಶಿಲ್ತ ಕಲೆಗಳು ರಚನೆಗೊಂಡ ಕಾಲ ಅವರ ವೈಶಿಷ್ಟತೆ ಅವು ಹೊಂದಿರುವ ಶೈಲಿ ಐತಿಹಾಸಿಕ ಓನ್ನೇಲೆಗಲ ಮಹಾತ್ವವನ್ನು ಕುರಿತು ತಿಳಿಯಪಡಿಸಲು ಕೈಗೋಂಡಿರುವ ಅಧ್ಯಯನವಾಗಿದೆ.

ಈ ಪ್ರಬಂಧವನ್ನು ಕುರಿತಾಗಿ ಅಧ್ಯಯನದ ಸಂದರ್ಭದಲ್ಲಿ ಪ್ರತಿ ಆದ್ಯಾಯನಗಳು ಸಂಕ್ಷಿಪ್ತ ವಿವರವನ್ನು ಈ ಕೇಳಗಿನಂತೆ ಕೋಡಲಾಗಿದೆ.

ಅದ್ಯಾಯ–1.

ಪ್ರಸ್ತುತ ಅಧ್ಯಯನದ ಉದ್ದೇಶ , ಸ್ವರೂಪ, ವಿಧಾನವ್ಯಾಪ್ತಿ ಮತ್ತು ಕಾರ್ಯಕ್ಷೇತ್ರದ ಕುರಿತು ಈ ಅಧ್ಯಾಯದಲ್ಲಿ ವಿವರವಾಗಿ ಹೇಳಲಾಗಿದೆ. ಈ ಅದ್ಯಾಯನದಲ್ಲಿ ಎಲ್ಲಾ ರೀತಿಯ ಸ್ಥಳಗಳ ವಿವರ ಉದ್ದೇಶ ಸ್ವರೂಪ, ವಿಷಯ ಸಂಗ್ರಯಿಸಲ್ಪಡಲು ಮಾಡಿದ ಕ್ಷೇತ್ರ ಕಾರ್ಯ ಎಲ್ಲವೂ ಈ ಅದ್ಯಾಯನದಲ್ಲಿ ಒಷಪಟ್ಟಿದೆ.

ಅಧ್ಯಾಯ – 2.

ಬೀದರ ಜಿಲ್ಲೆಯ ಕೋಟೆಗಳು ಬೀದರ ಜಿಲ್ಲೇಯನ್ನು ಓಳಗೊಂಡಿರುವ ಭಾಲ್ಕಿ ಕೋಟೆ, ಭಾತಂಭ್ರಾ ಕೋಟೆ, ಬಸವಕಲ್ಯಾಣ ಕೋಟೆಯ ಕುರಿತು ವ್ಯಾಪ್ತಿ ಕಟ್ಟಿಸಲ್ಪಟ್ಟ ರಾಜ್ಯ ಮನೆತನಗಳು ಎಲ್ಲವು ಸವಿಸ್ತಾರವಾಗಿ ವಿವರಿಸಲಾಗಿದೆ.

ಅಧ್ಯಾಯ – 3.

ಬೀದರ ಜಿಲ್ಲೆಯ ದೇವಾಲಯಗಳು.

ಬಿದರಿನ ಐತಿಹಾಸಿಕ ಹಿನ್ನೆಲ್ಲೆಯನ್ನು ಹೊಂದಿರುವ ದೇವಾಲಯಗಳಿಂದ ಬಸವಕಲ್ಯಾಣದ ನಾರಾಯಣಪೂರದ ಶ್ರೀಮನ ನಾರಾಯಣನ ದೇವಾಲಯ, ಜಲಸಂಗಮಿ ಮಹಾದೇವ

ದೇವಾಲಯ ಸೋಮೇಶ್ವರ ದೇವಾಲಯ, ಮೋರ್ಖಂಡಿ ಸಿದ್ದೇಶ್ವರ ದೇವಾಲಯ, ಶಿವಪುರ ಸಿದ್ದೇಶ್ವರ ದೇವಾಲಯ, ಉಮಾಪೂರದ ಮಹಾದೇವ ದೇವಾಲಯ, ಪಾರ್ವತಿ ದೇವಾಲಯ, ನೀಲಕಂಠೇಶ್ವರ ದೇವಾಲಯ, ಗಣೇಶನ ದೇವಾಲಯ ಬೇಲೂರು ಸ್ಮಾರಕಗಳನ್ನು ನೋಡಬಹುದು.

ಪ್ರಸ್ತುತ ಬೀದರ ಜಿಲ್ಲೇಯ ದೇವಲಾಯಗಳ ವಾಸ್ತು ಶಿಲ್ಪಗಳನ್ನು ಕುರಿತು ಛಾಯಾ ಚಿತ್ರಗಳೊಂದಿಗೆ ಇಲ್ಲಿ ವಿವರಿಸಲಾಗಿದೆ.

ಅಧ್ಯಾಯ–4.

ಬೀದರ ಜಿಲ್ಲೇಯ ಐತಿ ಹಾಸಿಕ ವಾಸ್ತುಶಿಲ್ಪಗಳು. ಪ್ರಸ್ತುತ ಬೀದರ ಜಿಲ್ಲೇಯ ದೇವಾಲಯಗಳಲ್ಲಿ ಒಳಗೊಂಡಿರುವ ವಾಸ್ತು ಶಿಲ್ಪಗಳ ಕುರಿತು ಆದ್ಯಾಯನ ಮಾಡುವುದಾಗಿದೆ. ಅವುಗಳು ನಾರಾಯಣಪೂರದ ಶಿಲ್ಪಗಳು ಹಾಗೂ ವಾಸ್ತು ಶಿಲ್ಪಗಳು. ಶಿವ ದೇವಾಲಯದ ಗರ್ಭಗುಡಿಯ ವಿನ್ಯಾಸ ಶಿವ ದೇವಾಲಯದ ಪದ್ಮಿನಿ ಶಿಲ್ಪ, ಶಿವ ದೇವಾಲಯದ ಮಹಾನಂದ ಶಿಲ್ಪ, ಮಕರತೋರಣಗಳ ಸಿಲ್ಪಗಳು, ಶಿವದೇವಾಲಯದ ವಿವಿಧ ವಿನ್ಯಾಸದ ಸ್ತಂಬಗಳ ಮತ್ತು ದೇವಾಲಯದ ಸುತ್ತಲು ಹೊಂದಿರುವ ಶಿಲಾ ಬಾಲಿಕೆಯರ ಶಿಲ್ಪಗಳು: ಶಿವದೇವಾಲಯದಲ್ಲಿದ ಶಾಸನಗಳು, ಉಮಾಪೂರ ಶಿಲ್ಪಗಳು , ಶಿವದೇವಾಲಯದಲ್ಲಿದ ಶಾಸನಗಳು , ಉಮಾಪೂರ ಶಿಲ್ಪಗಳು ಹಾಗೂ ನಯವಾದ ಕೇತ್ತನೆಗಳು ,ಮಹಾದೇವ ದೇವಾಲಯದಲ್ಲಿರುವ 14 ಅರ್ಧ ಕಂಬ (ಸ್ಥಂಭಗಳು) ವಿನ್ಯಾಸ, ಬೇಲೂರ ಶಿಲ್ತಗಳು , ಜೈನ್ಯ ತೀರ್ಥಂಕರ ಭಗ್ನ ಶಿಲ್ಪಗಳು ಅವಶೇಷಗಳು , ಶಿವಪುರ ಸಿಲ್ಪಗಳು, ಜಲಸಂಗವಿ ಶಿಲ್ಪಗಳು ಹಾಗೂ ವಾಸ್ತಿಶಿಲ್ಪಗಳು – ಶಾಸನ ಸುಂದರಿ, ಸರ್ವಸುಂದರಿ, ತಾಯಿ ಮಗುವಿನ ಶಿಲ್ಪ, ಗಿಳಿಯೋಡನೆ ಮಾತನಾಡುತ್ತಿರುವ ಸುಂದರಿಯ ಶಿಲ್ಪ (ಸುಕಭೂಷಣಿ) ಬ್ರಹ್ಮ , ವಿಷ್ಣು ಹಾಗು ಮಹೇಶ್ವರರು ನ್ರತ್ಯ ಭಾಗಯಯ ಧೃಶ್ಯ ಶಿಲ್ಪಗಳು ಭೀದರ ವಸ್ತು ಸಂಗ್ರಹಾಲಯರಿಂದ ಮತ್ತು ಬಸವಕಲ್ಯಾಣದ ವಸ್ತು ಸಮಗ್ರಹಾಲಯದಿಂದ ಐತಿಹಾಸಿಕ ಹಿನ್ನೇಲೆಉಳ್ಳ ಹಲವಾರು ಶಿಲ್ಪಗಳ ಮಾಹಿತಯನ್ನು ಸಂಗ್ರಯಿಸಿ ತಿಳಿಪಡಿಸಲಾಗಿದೆ.

ದೇವಾಲಯ ಸೋಮೇಶ್ವರ ದೇವಾಲಯ, ಮೋರ್ಖಂಡಿ ಸಿದ್ದೇಶ್ವರ ದೇವಾಲಯ, ಶಿವಪುರ ಸಿದ್ದೇಶ್ವರ ದೇವಾಲಯ, ಉಮಾಪೂರದ ಮಹಾದೇವ ದೇವಾಲಯ, ಪಾರ್ವತಿ ದೇವಾಲಯ, ನೀಲಕಂಠೇಶ್ವರ ದೇವಾಲಯ, ಗಣೇಶನ ದೇವಾಲಯ ಬೇಲೂರು ಸ್ಮಾರಕಗಳನ್ನು ನೋಡಬಹುದು.

ಪ್ರಸ್ತುತ ಬೀದರ ಜಿಲ್ಲೇಯ ದೇವಲಾಯಗಳ ವಾಸ್ತು ಶಿಲ್ತಗಳನ್ನು ಕುರಿತು ಛಾಯಾ ಚಿತ್ರಗಳೋಂದಿಗೆ ಇಲ್ಲಿ ವಿವರಿಸಲಾಗಿದೆ.

ಅಧ್ಯಾಯ–4.

ಬೀದರ ಜಿಲ್ಲೇಯ ಐತಿ ಹಾಸಿಕ ವಾಸ್ತುಶಿಲ್ಪಗಳು. ಪ್ರಸ್ತುತ ಬೀದರ ಜಿಲ್ಲೇಯ ದೇವಾಲಯಗಳಲ್ಲಿ ಒಳಗೊಂಡಿರುವ ವಾಸ್ತು ಶಿಲ್ಪಗಳ ಕುರಿತು ಆದ್ಯಾಯನ ಮಾಡುವುದಾಗಿದೆ. ಅವುಗಳು ನಾರಾಯಣಪೂರದ ಶಿಲ್ಪಗಳು ಹಾಗೂ ವಾಸ್ತು ಶಿಲ್ಪಗಳು. ಶಿವ ದೇವಾಲಯದ ಗರ್ಭಗುಡಿಯ ವಿನ್ಯಾಸ ಶಿವ ದೇವಾಲಯದ ಪದ್ಮಿನಿ ಶಿಲ್ಪ, ಶಿವ ದೇವಾಲಯದ ಮಹಾನಂದ ಶಿಲ್ಪ, ಮಕರತೋರಣಗಳ ಸಿಲ್ಪಗಳು, ಶಿವದೇವಾಲಯದ ವಿವಿಧ ವಿನ್ಯಾಸದ ಸ್ತಂಬಗಳ ಮತ್ತು ದೇವಾಲಯದ ಸುತ್ತಲು ಹೊಂದಿರುವ ಶಿಲಾ ಬಾಲಿಕೆಯರ ಶಿಲ್ಪಗಳು: ಶಿವದೇವಾಲಯದಲ್ಲಿದ ಶಾಸನಗಳು, ಉಮಾಪೂರ ಶಿಲ್ಪಗಳು , ಶಿವದೇವಾಲಯದಲ್ಲಿದ ಶಾಸನಗಳು , ಉಮಾಪೂರ ಶಿಲ್ಪಗಳು ಹಾಗೂ ನಯವಾದ ಕೇತ್ತನೆಗಳು ,ಮಹಾದೇವ ದೇವಾಲಯದಲ್ಲಿರುವ 14 ಅರ್ಥ ಕಂಬ (ಸ್ಥಂಭಗಳು) ವಿನ್ಯಾಸ, ಬೇಲೂರ ಶಿಲ್ತಗಳು , ಜೈನ್ಯ ತೀರ್ಥಂಕರ ಭಗ್ನ ಶಿಲ್ಪಗಳು ಅವಶೇಷಗಳು , ಶಿವಪುರ ಸಿಲ್ಪಗಳು, ಜಲಸಂಗವಿ ಶಿಲ್ಪಗಳು ಹಾಗೂ ವಾಸ್ತಿಶಿಲ್ಪಗಳು – ಶಾಸನ ಸುಂದರಿ, ಸರ್ವಸುಂದರಿ, ತಾಯಿ ಮಗುವಿನ ಶಿಲ್ಪ, ಗಿಳಿಯೋಡನೆ ಮಾತನಾಡುತ್ತಿರುವ ಸುಂದರಿಯ ಶಿಲ್ಪ (ಸುಕಭೂಷಣೆ) ಬ್ರಹ್ಮ , ವಿಷ್ಣು ಹಾಗು ಮಹೇಶ್ವರರು ನ್ರತ್ಯ ಭಾಗಯಯ ಧೃಶ್ಯ ಶಿಲ್ಪಗಳು ಭೀದರ ವಸ್ತು ಸಂಗ್ರಹಾಲಯರಿಂದ ಮತ್ತು ಬಸವಕಲ್ಯಾಣದ ವಸ್ತು ಸಮಗ್ರಹಾಲಯದಿಂದ ಐತಿಹಾಸಿಕ ಹಿನ್ನೇಲೆಉಳ್ಳ ಹಲವಾರು ಶಿಲ್ಪಗಳ ಮಾಹಿತಯನ್ನು ಸಂಗ್ರಯಿಸಿ ತಿಳಿಪಡಿಸಲಾಗಿದೆ.

- **ಅನುಬಂಧಗಳು.**

1) ಬೀದರ ಐತಿಹಾಸಿಕ ವಾಸ್ತು ಶಿಲ್ಪಗಳು
2) ಮಾದ್ಯಮಗಳಲ್ಲಿ ಪ್ರಕಟಗೊಂಡ ಪತ್ರಿಕೆಗಳ ಮಾಹಿತಿಗಳನ್ನು ಕಲೇಹಾಕಿದ್ದು.
3) ಗೃಂಥ ಋಣ.

- **ಛಾಯಾ ಚಿತ್ರಗಳು :–**

ಬಿದರ ಜಿಲ್ಲೆಯ ಐತಿಹಾಸಿಕ ವಾಸ್ತು ಶಿಲ್ಪಗಳನ್ನು ಕುರಿತ್ತು ಬೀದರ ವಸ್ತು ಸಂಗ್ರಹಾಲಯ, ಬಸವಕಲ್ಯಾಣ ವಸ್ತು ಸಂಗ್ರಹಾಲಯ, ಉಮಾಪೂರ, ಶಿವಪೂರ, ಜಲಸಂಗವಿ, ಬೇಲೂರು ನಾರಾಯಣಪೂರ ಇತ್ಯಾದಿ ಸ್ಥಳಗಳಿಂದ ಶಿಲ್ಪ ಕೃತಿಗಳ ಛಾಯಾ ಚಿತ್ರ ಮಾಡಲಾಗಿದೆ.
ಮಾದ್ಯಮಗಳಲ್ಲಿ ಪ್ರಕಟಗೋಂಡ ಪತ್ರಿಕೆಗಳ ಛಾಯಾಚಿತ್ತ.
ಬೀದರ ಜಿಲ್ಲೇಯ ಐತಿಹಾಸಿಕ ವಾಸ್ತಿ ಶಿಲ್ಪಗಳ ಕುರಿತು ಮಾಧ್ಯಮಗಳಲ್ಲಿ ಪ್ರಕಟಗೋಂಡ ಛಾಯಚಿತ್ರಗಳನ್ನು ಪಡೆಯಲಾಗಿದೆ.

- **ಗ್ರಂಥ ಋಣ :–**

1) ಡಾ: ಬಸವರಾಜ. ಎ. ಭಾಗಾ
2) ಡಾ: ಚೆನ್ನಬಸಪ್ಪಾ ಎನ್. ಪಾಟೀಲ
3) ಮೈಸೂರು ಸರಕಾರ ಪ್ರಚಾರ ಮತ್ತು ವಾರ್ತಾ ಇಲಾಖೆ
4) ರಮೇಶ ಎನ್. ಎನಗುಂದೆ,
5) ಇತಿಹಾಸ ದರ್ಶನ 2016 ಸಂಪಾದಕರು ಡಾ: ದೇವರ ಪುಟ ಸಂ: 279–80–81–82.
ಪ್ರೋ: ಎಮ್ .ಎನ್. ಬೆನ್ನೂರ ಕೊಂಡಾರೆಡ್ಡಿ, ಮತ್ತು ಪ್ರೋ: ಜಿ. ಕೆ. ದೇವರಾಜ ಸ್ವಾಮಿ
6) ಬಸವೇಶ್ವರ ಚಿತ್ರಕಲಾ ಮಹಾವಿದ್ಯಾಲಯ ಗ್ರಂಥಾಲಯ.
7) ವೀರಭದ್ರೇಶ್ವರ ಚಿತ್ರಕಲಾ ಮಹಾವಿದ್ಯಾಲಯ ಹುಮನಾಬಾದ ಗ್ರಂಥಾಲಯ.
8) ಕರ್ನಾಟಕ ಶಾಸನ ಸಮೀಕ್ಷೆ,
9) ಕಲ್ಯಾಣ ಚಾಲುಕ್ಯ ಆರನೇಯ ವಿಕ್ರಮಾದಿತ್ಯನ ಶಾಸನ ಸಂಸ್ಕೃತಿಕ ಅಧ್ಯಯನ.
ಡಾ: ಡಿ.ಎಂ ನಾಗರಾಜು.

10) ಬದ್ರಿ ಕಲಾವಿದ ಮೋಹ್ಮದ ಅಬ್ದುಲ್ ರವುಫ್ ಅವರ ಕಲೆ ಮತ್ತು ಬದುಕು,

ಸಂಪಾದಕರು : ಸುನೀಲ ಎ. ಪೂಜಾರಿ 2014–2015 ಸಾಲಿನ

ಪುಟ ಸಂಖ್ಯೆ : 1–2–3–8–28–29–31–32.

11) ಇತಿಹಾಸ ದರ್ಶನ . 2016

ಕಲ್ಯಾಣ ಚಾಲ್ಯುಕ್ಯರ ಕಾಲದ ಸಂಸ್ಕೃತಿ ಸಾಹಿತ್ಯ.

ಪುಟ ಸಂಖ್ಯೆ : 299 ಡಾ: ಕೇಯೂರು ಕರಗುದರಿ

ಪುಟ ಸಂಖ್ಯೆ : 200–2001–202

ಪ್ರಸ್ತುತ ಈ ಪ್ರಭಂದದ ಕೇಲವೂಂದು ಮೂಲ ದಾಖಲಾತಿಗಳನ್ನು ಬಸವಕಲ್ಯಾಣದ ವಸ್ತು ಸಂಗ್ರಹಾಲಯದಿಂದ ಸಂಗ್ರಯಿಸಲಾಗಿದೆ. ಈ ಮಾಹಿತಿಗಳ ಸಂಗ್ರಹಣೆಗೆ ಸಹಾಯಕರಾದ ಪ್ರಸ್ತುತ ವಸ್ತು ಸಂಗ್ರಹಾಲಯದ ಕ್ಯುರೇಟರಾದ ಎಚ್. ಸಿ. ಕುಮಾರ ಅವರು ಸಹಕರಿಸಿದ್ದಾರೆ.



ಚಿತ್ರಗಳು : ಕ್ಯುರೆಟರ್ ಕುಮಾರ್ ಜೊತೆಗೆ ವಿಷಯದ ಮಾಹಿತ ಚಿತ್ರ





ಚಿತ್ರಗಳು : ಬಸವಕಲ್ಯಾಣ ವಸ್ತು ಸಂಗ್ರಹಾಲಯ

